Swabhimani Sahakari

Pages : 37/ 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ನಮ್ಮ ಧ್ಯೇಯ

25 ಸೌಹಾರ್ದ ಸಹಕಾರಿ ಕಾಯ್ದೆಯ

ರಜತ ಮಹೋತ್ಸವ 2025

Volume - 22

Issue - 05

May - 2025


ಮೇ 12

**ಬುದ್ಧ ಪೂರ್ಣಿಮಾ**

ಎಲ್ಲಾ ಮನುಷ್ಯರು ಸಮಾನರು, ಜಾತಿ,
ಜನಾಂಗಗಳ ನಡುವೆ
ಭೇದವೆಣಿಸಬೇಡಿ;
ಕಠೋರ ಮಾತು ಕೈಯ
ಏಟಿಗಿಂತಲೂ ಬಲವಾದದು,
ಮೃದುವಾದ ಮಾತುಗಳನ್ನಾಡಿ,
ಎಲ್ಲರ ಬಗ್ಗೆಯೂ ಅನುಕಂಪವಿರಲಿ....

–ಗೌತಮ ಬುದ್ಧ


ಮೇ 01

**ಕಾರ್ಮಿಕ ದಿನಾಚರಣೆ**



ಮೇ 02

**ಶಂಕರ ಜಯಂತಿ ಹಾಗೂ ರಾಮಾನುಜಾಚಾರ್ಯ ಜಯಂತಿ**





ಸೌಹಾರ್ದ ಸಹಕಾರಿಗಳ ಸಂಖ್ಯೆ: 6507

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1710



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಶಂಕರಾಚಾರ್ಯ ಜಯಂತಿ, ರಾಮಾನುಜಾಚಾರ್ಯ ಜಯಂತಿ ಹಾಗೂ ಬುದ್ಧಪೂರ್ಣಿಮಾದ ಹಾರ್ದಿಕ ಶುಭಾಶಯಗಳು. ನಾವೆಲ್ಲರೂ ಈ ಮಹಾನುಭಾವರ ದಿವ್ಯ ಸಂದೇಶಗಳನ್ನು ನೆನೆಯೋಣ. ಜೀವನದಲ್ಲಿ ಅಳವಡಿಸಲು ಪ್ರಯತ್ನಿಸೋಣ.

# ಅಧ್ಯಯನ ಹಾಗೂ ಪ್ರವಾಸಗಳಿಂದ ಜ್ಞಾನವೃದ್ಧಿ ಮತ್ತು ವ್ಯಕ್ತಿತ್ವ ವಿಕಸನ ಹಾಗೂ ಪರಿಪಕ್ವ ನಾಯಕತ್ವದಿಂದ ಸಹಕಾರಿ ಸಂಸ್ಥೆಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕ.

ಆತ್ಮೀಯ ಸಹಕಾರಿ ಬಂಧುಗಳಿಗೆ ಶಂಕರಾಚಾರ್ಯ ಜಯಂತಿ, ರಾಮಾನುಜಾಚಾರ್ಯ ಜಯಂತಿ ಹಾಗೂ ಬುದ್ಧಪೂರ್ಣಿಮಾದ ಹಾರ್ದಿಕ ಶುಭಾಶಯಗಳು. ನಾವೆಲ್ಲರೂ ಈ ಮಹಾನುಭಾವರ ದಿವ್ಯ ಸಂದೇಶಗಳನ್ನು ನೆನೆಯೋಣ. ಜೀವನದಲ್ಲಿ ಅಳವಡಿಸಲು ಪ್ರಯತ್ನಿಸೋಣ.

ಸ್ನೇಹಿತರೆ, ಒಬ್ಬ ವ್ಯಕ್ತಿ ಉತ್ತಮ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಲು ಅಗತ್ಯವಾದದ್ದು ಅವನಲ್ಲಿರುವ ಜ್ಞಾನ ಮತ್ತು ಕ್ರಿಯಾಶೀಲತೆಗಳು. ಈ ನಿಟ್ಟಿನಲ್ಲಿ ಒಂದು ಸಂಸ್ಥೆಯು ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ಸಂಸ್ಥೆಯ ಆಡಳಿತ ಮಂಡಳಿಯು "ದೇಶ ಸುತ್ತು, ಕೋಶ ಓದು" ಎಂಬ ಗಾದೆ ಮಾತಿನಂತೆ ಕಾರ್ಯ ಪ್ರವೃತ್ತರಾಗಬೇಕು. ಉತ್ತಮ ಹಾಗೂ ಮಾದರಿ ಸಹಕಾರ ಸಂಸ್ಥೆಗಳ ಕುರಿತು ಕಾರ್ಯಚಟುವಟಿಕೆಗಳ ಅಧ್ಯಯನ ಮಾಡುವುದು ಅವಶ್ಯಕವೆನಿಸುತ್ತದೆ. ಇತ್ತೀಚೆಗೆ ಅನೇಕ ಸಹಕಾರ ಮಹಾಮಂಡಳಗಳ ನಿರ್ದೇಶಕ ಮಂಡಳಿಯವರು, ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯವರು ದೇಶ ವಿದೇಶಗಳ ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಬೇರೆ ಸ್ಥಳಗಳಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕ ಅಂಶಗಳನ್ನು ಅರಿತುಕೊಳ್ಳುವುದರಲ್ಲಿ ಆಸಕ್ತಿ ವಹಿಸುತ್ತಿರುವುದು ಉತ್ತಮ ಬೆಳವಣಿಗೆ.

ದೇಶದಲ್ಲಿ ಪ್ರಪ್ರಥಮ ಬಾರಿಗೆ ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ಸಹಕಾರ ವಿಶ್ವವಿದ್ಯಾಲಯವನ್ನು "ತ್ರಿಭುವನ ಸಹಕಾರ ವಿಶ್ವವಿದ್ಯಾಲಯ" ಎಂಬ ಹೆಸರಿನಲ್ಲಿ ಕೇಂದ್ರ ಸಹಕಾರ ಇಲಾಖೆಯ ನೇತೃತ್ವದಲ್ಲಿ ಪ್ರಾರಂಭಿಸಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ. ಸಹಕಾರಿಗಳ ಜ್ಞಾನವೃದ್ಧಿಗೆ, ವ್ಯಕ್ತಿತ್ವ ವಿಕಸನಕ್ಕೆ ಹಾಗೂ ಪರಿಪಕ್ವ ನಾಯಕತ್ವದ ಅಭಿವೃದ್ಧಿಗೆ, ಸಿಬ್ಬಂದಿಗಳ ಕೌಶಲ್ಯ ಅಭಿವೃದ್ಧಿಗೆ ಈ ವಿಶ್ವವಿದ್ಯಾಲಯ ಪೂರಕವಾಗುತ್ತದೆ ಎಂದು ಆಶಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಇಂತಹ ಸಂಸ್ಥೆಗಳಿಗೆ ಹಾಗೂ ವಿಶ್ವ ವಿದ್ಯಾಲಯಗಳಿಗೆ ಅಧ್ಯಯನಕ್ಕಾಗಿ ಭೇಟಿಕೊಡುವುದು ಅಗತ್ಯ.

ಸಹಕಾರಿಗಳು ಸಹಕಾರಿ ಸಂಸ್ಥೆಗಳ ಅಧ್ಯಯನಕ್ಕಾಗಿ ಗುಜರಾತಿನ ಅಮೂಲ್, ಇಫ್ಕೋ, ಕ್ರಿಭ್ಕೊ ಮಂಗಳೂರಿನ ಕ್ಯಾಂಪ್ಕೊ, ಶಿವಮೊಗ್ಗದ ಮಾಮ್‌ಕೋಸ್‌ದಂತಹ ಸಂಸ್ಥೆಗಳಿಗೆ. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿನ ಉತ್ತಮ ಸಹಕಾರ ಬ್ಯಾಂಕುಗಳಿಗೆ, ಉತ್ತಮ ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ, ಕರ್ನಾಟಕದಲ್ಲಿಯೇ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು, ಸೌಹಾರ್ದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ಅಧ್ಯಯನ ಮಾಡಿ ಜ್ಞಾನಾರ್ಜನೆ ಮಾಡಿಕೊಂಡು ತಮ್ಮ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶ ಮಾಡಿಕೊಂಡು ತಮ್ಮ ನಾಯಕತ್ವವನ್ನು ಬೆಳೆಸಿಕೊಳ್ಳುವುದರ ಜೊತೆಗೆ ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಸಾಧ್ಯವಿದೆ.

ಅಧ್ಯಯನ ಹಾಗೂ ಪ್ರವಾಸಗಳ ಜೊತೆಗೆ ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ಎಲ್ಲ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದರಿಂದ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಯಾವುದೇ ತರಬೇತಿ, ಕಾರ್ಯಾಗಾರ, ಸೆಮಿನಾರ್‌ಗಳನ್ನು ಒಂದು ಒಳ್ಳೆಯ ಉದ್ದೇಶ ಸಾಧನೆಗಾಗಿ ಹಮ್ಮಿಕೊಳ್ಳಲಾಗುತ್ತದೆ. ಆದ್ದರಿಂದ ಎಲ್ಲ ಕಾರ್ಯಕ್ರಮಗಳಲ್ಲೂ ತಾವು ಸಕ್ರೀಯವಾಗಿ ಭಾಗವಹಿಸುವುದರಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಅವಶ್ಯಕವಾಗಿರುವ ಉತ್ತಮ ನಾಯಕತ್ವ, ಸಹಕಾರಿಗಳ ವ್ಯಕ್ತಿತ್ವ ವಿಕಸನ, ಜ್ಞಾನದ ಅಭಿವೃದ್ಧಿ ಸಾಧ್ಯವಾಗುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–20
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 21–23
ಲೇಖನಗಳು :
Self-Regulation and Control of Co-operative Societies under the Karnataka Souharda Cooperative Act, 1997 – Relevance in the Present Context .................................. 24–28
ಆಡಳಿತ ಮಂಡಳಿ ಚುನಾವಣೆಗೆ ಪೂರ್ವ ತಯಾರಿ ಬಗ್ಗೆ ಮುಖ್ಯಕಾರ್ಯನಿರ್ವಾಹಕನ ಕರ್ತವ್ಯ ಹಾಗೂ ಜವಾಬ್ದಾರಿಗಳು ಸಂಘಟನೆ...... 35–37

# ಸಂಪಾದಕೀಯ

## ಸಹಕಾರಿ ಕ್ಷೇತ್ರಕ್ಕೊಂದು ಪ್ರತ್ಯೇಕ ವಿಶ್ವವಿದ್ಯಾಲಯ "ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ" ಸ್ಥಾಪನೆ ಸ್ವಾಗತಾರ್ಹ : ಸಹಕಾರಿಗಳಿಗೆ ಸದುಪಯೋಗ ಹಾಗೂ ಅಭಿವೃದ್ಧಿಯ ಪರ್ವಕಾಲಕ್ಕೆ ನಾಂದಿ.

ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭವಾಗಿನಿಂದ ಅನೇಕ ಪ್ರಗತಿಪರ ಕಾರ್ಯಕ್ರಮಗಳು ಜರುಗುತ್ತಿರುವುದು ಸಹಕಾರ ಕ್ಷೇತ್ರದಲ್ಲಿ ಒಂದು ಹೊಸ ಅಲೆಯನ್ನು ಸೃಷ್ಟಿಸಿದೆ. ದೇಶದಲ್ಲಿ "ರಾಷ್ಟ್ರೀಯ ಸಹಕಾರಿ ನೀತಿ' ಸಿದ್ಧಪಡಿಸಿರುವುದು, ಪ್ರಸ್ತುತ ಸಹಕಾರ ಕ್ಷೇತ್ರಕ್ಕಾಗಿಯೇ ಒಂದು ಪ್ರಪ್ರಥಮವಾಗಿ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆಗೆ ಲೋಕ ಸಭೆಯ ಹಾಗೂ ರಾಜ್ಯ ಸಭೆಯ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾಗಿರುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಸಂಸದರ ಉತ್ಸುಕತೆಯನ್ನು ತೋರಿಸುತ್ತದೆ.

ದೇಶದಲ್ಲಿ 8 ಲಕ್ಷಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳಿವೆ. 29 ಕೋಟಿಗೂ ಹೆಚ್ಚು ಸಹಕಾರಿ ಸದಸ್ಯರಿದ್ದಾರೆ. ಸಹಕಾರಿ ಕ್ಷೇತ್ರದಡಿಯಲ್ಲಿ ಬರುವವರು ಇನ್ನೂ 100 ಕೋಟಿಗೂ ಹೆಚ್ಚು ಜನರು ಇದ್ದಾರೆ. ಅವರೆಲ್ಲ ಈ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಗಮನಿಸುತ್ತಿದ್ದಾರೆ. ಇದು ಪೈಪೋಟಿ ಯುಗ. ಆಧುನಿಕ ತಂತ್ರಜ್ಞಾನ ಯುಗ. ಸೇವೆಯೊಂದೇ ಗುರಿಯಲ್ಲ. ಸೇವೆಯ ಜೊತೆಗೆ ಲಾಭವನ್ನು ಗಳಿಸುವ ಉದ್ದೇಶ ಹೊಂದಿರಬೇಕಾದ ಅವಶ್ಯಕತೆ ಇದೆ. ಈ ಕ್ಷೇತ್ರ ಅವರಿಗೆ ವಿಶೇಷವಾಗಿ ಯುವಕರಿಗೆ ಏನು ಕೊಡಬಲ್ಲದು ಅವರಿಗೆ ಈ ಕ್ಷೇತ್ರದಿಂದ ಆಗುವ ಪ್ರಯೋಜನವೇನು ಎಂಬ ಅನೇಕ ವಿಚಾರಗಳಿಗೆ ಈ ನೂತನ ವಿಶ್ವ ವಿದ್ಯಾಲಯ ಉತ್ತರ ನೀಡಬೇಕಿದೆ.

ಸಹಕಾರ ಕ್ಷೇತ್ರದ ಆಡಳಿತದಲ್ಲಿ ಪಾರದರ್ಶಕತೆ ಅವಶ್ಯಕ ಆಡಳಿತದಲ್ಲಿ ಪಾರದರ್ಶಕತೆ ಇರಬೇಕಾದರೆ ವೃತ್ತಿಪರ ಪರಿಣಿತರು ಆಡಳಿತದ ಚುಕಾಣಿಯನ್ನು ಹಿಡಿಯುವುದು ಅವಶ್ಯಕ. ವೃತ್ತಿಪರ ಪರಿಣಿತರನ್ನು ತಯಾರು ಮಾಡುವುದರಲ್ಲಿ ಈ ನೂತನ ಸಹಕಾರಿ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತದೆ ಎಂದು ಆಶಿಸಲಾಗಿದೆ. ದೇಶದ ಎಲ್ಲ ಸಹಕಾರಿ ಸಂಸ್ಥೆಗಳಲ್ಲಿ ಉತ್ತಮ ಅರಿತ ನಾಯಕತ್ವದ ಅವಶ್ಯಕತೆ ಇದೆ. ಉತ್ತಮ ನುರಿತ ಸಿಬ್ಬಂದಿಯವರ ಅವಶ್ಯಕತೆ ಇದೆ. ಹೆಚ್ಚಿನ ವಿಚಾರಗಳನ್ನು ತಿಳಿದುಕೊಂಡು ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ಈ ಎಲ್ಲ ಉದ್ದೇಶಗಳ ಈಡೇರಿಕೆಗಾಗಿ ಈ ನೂತನ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತದೆ.

ಸಹಕಾರ ಕ್ಷೇತ್ರವನ್ನು ದೇಶದ ಅರ್ಥ ವ್ಯವಸ್ಥೆಯ ಮುಖ್ಯವಾಹಿನಿಯಲ್ಲಿ ತರಬೇಕು ಎಂಬುವುದು ಕೇಂದ್ರ ಸರಕಾರದ ಮುಖ್ಯ ಆಶಯವಾಗಿದೆ. ಅರ್ಥ ವ್ಯವಸ್ಥೆಯ ಮುಖ್ಯವಾಹಿನಿಗೆ ಬರಬೇಕಾದರೆ ಈ ಕ್ಷೇತ್ರದ ಎಲ್ಲ ವ್ಯವಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ಈ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ಹಿಸಬೇಕು ಎಂದಾದರೆ ಇಲ್ಲಿನ ಎಲ್ಲ ಸಹಕಾರಿಗಳು ಆಡಳಿತ ಪರಿಣಿತಿಯನ್ನು ಹೊಂದಿರಬೇಕು. ಆರ್ಥಿಕ ಶಿಸ್ತು ಪಾಲನೆಗೆ ಆದ್ಯತೆ ಇರಬೇಕು. ಎಲ್ಲರೂ ವೃತ್ತಿಪರರಾಗಿರಬೇಕು ಒಟ್ಟಾರೆ ಈ ಕ್ಷೇತ್ರ ನ್ಯೂನತೆಗಳಿಂದ ಹೊರತಾಗಿರಬೇಕು. ಅದಕ್ಕಾಗಿಯೇ ಪ್ರತ್ಯೇಕ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆಗೆ ಕ್ರಮವಿಡಲಾಗಿದೆ. ಆದ್ದರಿಂದ ದೇಶದ ಎಲ್ಲ ಸಹಕಾರಿ ಸಂಸ್ಥೆಗಳು ಈ ವಿಶ್ವವಿದ್ಯಾಲಯದ ಪ್ರಯೋಜನ ಪಡೆದು ತಮ್ಮ ಸಂಸ್ಥೆಗಳನ್ನು ಉತ್ತಮವಾಗಿಸುವುದರ ಜೊತೆಗೆ ದೇಶದ ಸಹಕಾರಿ ಚಳುವಳಿಯ ಅಭಿವೃದ್ಧಿಗಾಗಿ ಶ್ರಮಿಸಲು ಸಹಕಾರ ನೀಡುವುದಾಗಿ ಭಾವಿಸಲಾಗಿದೆ.

## "ಇಂದ್ರೀಯ ನಿಗ್ರಹ"

ಅರ್ಥ ಮನುಷ್ಯವನ್ನು ಶ್ರೀಮಂತನನ್ನಾಗಿಸುತ್ತದೆ. ಲೌಕಿಕ ಅರ್ಥ ಲೌಕಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದರೆ, ಪಾರಮಾರ್ಥಿಕ ಅರ್ಥ ಪರಮಾರ್ಥವನ್ನು ಹೆಚ್ಚಿಸುತ್ತದೆ. ಒಂದು ಬಹಿರಂಗ ಇನ್ನೊಂದು ಅಂತರಂಗ, ಮನುಷ್ಯ ಎರಡನ್ನೂ ಪಡೆಯಬೇಕು. ಎರಡೂ ಅಷ್ಟೇ ಮಹತ್ವದ್ದು. ಹೊರಗಿನ ಸಂಪತ್ತು ಹೆಚ್ಚು ಕಡಿಮೆಯಾಗಬಹುದು. ಆದರೆ ಆಂತರಿಕ ಸಂಪತ್ತು ಒಮ್ಮೆ ಅನುಭವಕ್ಕೆ ಬಂದರೆ ಅದು ಶಾಶ್ವತವಾಗಿ ಶ್ರೀಮಂತವಾಗಿಸುತ್ತದೆ. ವ್ಯಕ್ತಿ ಪರಿಪೂರ್ಣನಾಗಬೇಕಾದರೆ ಎರಡೂ ಸಂಪತ್ತಿರಬೇಕು. ನಾವು ಬಹಿರಂಗ ಸಂಪತ್ತಿನ ಆಲೋಚನೆಯಲ್ಲಿ ಅಂತರಂಗದ ಸಂಪತ್ತನ್ನು ಮರೆಯುತ್ತಿದ್ದೇವೆ. ಆದ್ದರಿಂದ ವ್ಯಕ್ತಿ ಚಿಂತೆ, ಹತಾಶೆ, ನೋವುಗಳಿಂದ ಕೂಡಿ ಅಸಮಾಧಾನಿಯಾಗುತ್ತಿದ್ದಾನೆ. ಹೊರಗೆ ಎಲ್ಲಾ ಇರುತ್ತದೆ, ಒಳಗೆ ಏನೂ ಇರದೇ ಇರುವುದೇ ಅಸಮಾಧಾನ. ಮನುಷ್ಯ ಒಳಗೆ–ಹೊರಗೆ ಎರಡೂ ಸುಂದರವಾಗಿರಬೇಕು. ಒಂದು ಕ್ಷಣ 'ಹೊರ' ಸುಂದರವಾಗಿರದಿದ್ದರೂ ನಡೆಯುತ್ತದೆ. ಆದರೆ 'ಒಳ" ಮಾತ್ರ ಸುಂದರವಾಗಿರಬೇಕು.

ಗ್ರೀಕ್ ರಾಜಧಾನಿ ಅಥೆನ್ಸ್ ಪಟ್ಟಣದ ಸಾಕ್ರೆಟಿಸ್ ಒಬ್ಬ ಮಹಾನ್ ತತ್ತ್ವಜ್ಞಾನಿ. ಬಹಳ ಪ್ರಸಿದ್ಧವಾಗಿದ್ದ. ಅವನೊಬ್ಬ ಸಾಮಾನ್ಯ ಬಡಿಗ. ಅವನನ್ನು ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕು ಅನ್ನಿಸುತ್ತಿರಲಿಲ್ಲ. ಅಷ್ಟು ಕುರೂಪಿ. ಆದರೆ ಅವನ ಮಾತುಗಳು ಸುಂದರ: ಮನಸ್ಸು ಸುಂದರ. ಅಂತರಂಗದಲ್ಲಿ ಸೌಂದರ್ಯ ಪಡೆದಿದ್ದ. ಆತನ ಮಾತುಗಳು ಇಂದಿಗೂ ಇವೆ.

ಹೊರಗೆ ಸಂಪತ್ತಿನ ಕ್ಷೇತ್ರ ಬೆಳೆಸುವಂತೆ ಮನುಷ್ಯ ಒಳಗಿನ ಕ್ಷೇತ್ರವನ್ನೂ ವಿಸ್ತರಿಸಬೇಕು. ಸುಂದರ ಭಾವಗಳನ್ನು ಬೆಳೆಸಬೇಕು. ಧನಧಾನ್ಯಗಳನ್ನು ಕೂಡಿಸುವಂತೆ ಸತ್ಯದ ವಿಚಾರಗಳನ್ನು ಕೂಡಿಸಬೇಕು. ಅದು ಪಾರಮಾರ್ಥಿಕ ಸಂಪತ್ತು. ಅದನ್ನು ಪಡೆದವರನ್ನು ನೋಡಿದರೆ ಅದಕ್ಕಾಗಿ ಅವರು ಪಟ್ಟ ಕಷ್ಟ ತಿಳಿಯುತ್ತದೆ. ಅದಕ್ಕಾಗಿ ತಮ್ಮೆಲ್ಲ ಸುಖ–ಸೌಲಭ್ಯಗಳನ್ನು ಒದಗಿಸಿದ್ದಾರೆ. ಇನ್ನೂ ಕೆಲವರು ಏನೂ ಮಾಡದೆ ಆ ಪರಮಾರ್ಥವನ್ನು ಪಡೆದಿದ್ದಾರೆ. ಅವರು ಅದನ್ನು ಸಹಜವಾಗಿ ಮೈಗೂಡಿಸಿಕೊಂಡವರು!



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಜೀವನದಲ್ಲಿ ಅದ್ಭುತವಾದ ಸಂಗತಿಗಳಿವೆ. ಅವುಗಳನ್ನು ಪಡೆಯಲು ಇದನ್ನು ಬಳಸಬೇಕು. ಮನಸ್ಸನ್ನು ಎದೆಯಲ್ಲಿ ನಿಲ್ಲಿಸಿ. ಮನಸ್ಸಿನ ಚಂಚಲತೆಯನ್ನು ಕಡಿಮೆಗೊಳಿಸಬೇಕು. ಕನಸು ಕಾಣು, ಆದರೆ ಅದರ ಬೆನ್ನುಹತ್ತಿ ಹೋಗಬೇಡ. ಮನಸ್ಸು ಹರಿಯುವುದೇ ಅದು ಅದರ ಸ್ವಭಾವ. ಅದನ್ನು ನಾವು ಅನುಭವಿಸಬೇಕಷ್ಟೇ! ಅದರ ದಾರಿಯಲ್ಲಿ ನಾವು ಹೋಗುವುದಿಲ್ಲ. ನಮ್ಮ ದಾರಿಯಲ್ಲಿ ನಾವಿರಬೇಕು. ಅದು ಎಲ್ಲಿ ಬೇಕೋ ಅಲ್ಲಿ ತಿರುಗಾಡಿ ಕೊನೆಗೊಂದು ದಿನ ನಮ್ಮನ್ನು ಬಂದು ಕೂಡುತ್ತದೆ.

ಮನಸ್ಸು ಕ್ರಿಯಾಶೀಲ. ಅದನ್ನು ಸುಂದರವಾದ ಕನಸುಗಳನ್ನು ಕಾಣಲು ಬಳಸು. ಆದರೆ ಎಲ್ಲ ಕನಸು ನನಸಾಗಲಿ ಎಂದು ಬಯಸಬೇಡ. ಒಬ್ಬ ತಿರುಕ ಧರ್ಮ ಶಾಲೆಯಲ್ಲಿ ಮಲಗಿದಾಗ ಕನಸು ಕಂಡ. ರಾಜ್ಯದ ರಾಜ ಸತ್ತಿದ್ದ. ಉತ್ತರಾಧಿಕಾರಿ ಆಯ್ಕೆಗೆ ಒಂದು ಆನೆಯನ್ನು ಬಿಟ್ಟಿದ್ದರು. ಆನೆಯು ಅದರ ಸೊಂಡಿಲಲ್ಲಿರುವ ಹಾರವನ್ನು ಯಾರ ಕೊರಳಿಗೆ ಹಾಕುತ್ತದೆಯೋ ಅವನನ್ನೇ ರಾಜ ಎಂದು ತೀರ್ಮಾನಿಸಲಾಗುತ್ತಿತ್ತು. ಆ ಆನೆ ಇವನನ್ನೇ ಹುಡುಕಿಕೊಂಡು ಬಂದು ಹಾರ ಹಾಕಿತು. ಅವನನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಸಿಂಹಾಸದಲ್ಲಿ ಕೂಡಿಸಿ, ಕಿರೀಟ ತೊಡಿಸಿದರು. ಚಾಮರದಿಂದ ಗಾಳಿ ಬೀಸುತ್ತಿದ್ದರು. ಆಗ ಚಾಮರ ಬಡೆಯಿತು. ಇವನಿಗೆ ಅಲ್ಲಿ ಎಚ್ಚರವಾಯ್ತು. ಎರಡು ಆಕಳು ಬಾಲ ಬಡಿಯುತ್ತ ಇವನ ತಲೆಯ ಬಳಿ ನಿಂತಿದ್ದವು.

ಮನಸ್ಸನ್ನು ನಿಯಂತ್ರಿಸುವುದು ಹೇಗೆಂದರೆ. ಕನಸು ಬೀಳಬೇಕು ಆದರೆ ಎದ್ದಮೇಲೆ ಅವುಗಳ ಬೆನ್ನು ಹತ್ತಬಾರದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 9528 | 1333 | 1868 | 1040 | 13769 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 7157 | 1035 | 1256 | 681 | 10129 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 2371 | 298 | 612 | 359 | 3640 |
| ಏಪ್ರಿಲ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 155 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 428 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6978 | 1207 | 2090 | 737 | 11012 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1025 | 210 | 489 | 152 | 1876 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5953 | 997 | 1601 | 585 | 9136 |
| ಏಪ್ರಿಲ್ 2025ರ ತಿಂಗಳಿನಲ್ಲಿ ಒಟ್ಟು 62 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

**ದಿನಾಂಕ 03.12.2024ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಹಕಾರಿ ಇಲಾಖೆಯವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ ಹಲವಾರು ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿರುವುದು. ನಂತರ ಸದರಿ ಸಭೆಯ ನಡವಳಿಗಳನ್ನು ಕಳುಹಿಸಿ ಅವುಗಳನ್ನು ಕಾರ್ಯಗತ ಮಾಡಿ ಎಂದು ತಿಳಿಸಿದ್ದಾರೆ. ದಿನಾಂಕ 14.04.2025 ರಂದು ನಡೆದ ಆಡಳಿತ ಮಂಡಳಿಯಲ್ಲಿ ಸದರಿ ನಡವಳಿಗಳನ್ನು ಅಧ್ಯಯನ ಮಾಡಿ ಸದರಿ ನಡವಳಿಯ ವಿಷಯಗಳನ್ನು ಹಂತಹಂತವಾಗಿ ಕಾರ್ಯರೂಪಕ್ಕೆ ತರಲು ನಿರ್ಣಯಿಸಲಾಗಿದೆ.**

1. ಸಂಯುಕ್ತ ಸಹಕಾರಿಯ ಸಾಲ ನಿಯಮಗಳಂತೆ 2018ನೇ ಸಾಲಿಗೆ 1 ಲಕ್ಷ ರೂಪಾಯಿಗಳವರೆಗೆ ಮತ್ತು 2018ನೇ ಸಾಲಿನ ನಂತರ ಗರಿಷ್ಠ 3 ಲಕ್ಷಗಳವರೆಗೆ Unsecured Loanಗಳನ್ನು ನೀಡಲು ಅವಕಾಶವಿದ್ದು, ಈ ಗರಿಷ್ಠ ಮಿತಿಯನ್ನು ಮೀರಿ ಹಲವು ಸಹಕಾರಿಗಳು Unsecured Loanಗಳನ್ನು ವಿಸ್ತರಿಸಿರುವುದು ಕಂಡುಬಂದಿದ್ದು, ಕೂಡಲೇ ಈ ಸಹಕಾರಿಗಳಿಗೆ ನಿಯಮಾನುಸಾರ ಎಲ್ಲಾ ಸಾಲಗಳಿಗೆ Security ಅನ್ನು ಪಡೆಯಲು ಹಾಗೂ ಇನ್ನು ಮುಂದೆ ಯಾವುದೇ Security ಇಲ್ಲದ ಸಾಲಗಳನ್ನು ನೀಡದಿರಲು ಅಗತ್ಯ ಸೂಚನೆಗಳನ್ನು ನೀಡಿ, 3 ತಿಂಗಳ ಕಾಲಮಿತಿಯೊಳಗೆ ಸಾಲದ ನಿಯಮದ ಮಿತಿ 3 ಲಕ್ಷಗಳನ್ನು ಮೀರಿ ನೀಡಿರುವ ಸಾಲಗಳಿಗೆ Security ಪಡೆಯುವುದು ಹಾಗೂ ಪೂರ್ಣ ಸಾಲವನ್ನು ವಸೂಲಿ ಮಾಡಲು ಕ್ರಮವಿಡುವುದು. ತಪ್ಪಿದಲ್ಲಿ, ಅಂತಹ ಸಹಕಾರಿಗಳ ವಿರುದ್ಧ ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಕ್ರಮವಿಡುವುದು.
2. ಕಾರ್ಯ ಸ್ಥಗಿತಗೊಂಡಿರುವ 551 ಸಂಸ್ಥೆಗಳನ್ನು 30 ದಿನಗಳ ಕಾಲಮಿತಿಯೊಳಗೆ ಕಾರ್ಯನಿರತ ಸಂಸ್ಥೆಗಳನ್ನಾಗಿಸಲು ಅಥವಾ ಸಮಾಪನೆಗೆ ಶಿಫಾರಸ್ಸು ಮಾಡಿ ನಿಬಂಧಕರಿಗೆ ಕಳುಹಿಸಲು ಕ್ರಮವಿಡುವುದು.
3. ಸಮಾಪನೆಯಲ್ಲಿರುವ ಸಹಕಾರಿಗಳು ಗರಿಷ್ಠ 2 ವರ್ಷಗಳ ಕಾಲಮಿತಿಯೊಳಗೆ ಸಮಾಪನ ಕಾರ್ಯ ಮುಕ್ತಾಯಗೊಳಿಸಿ ಸಹಕಾರಿಯ ರದ್ಧತಿಗೆ ಕ್ರಮವಿಡಬೇಕಿದ್ದು, ಸಮಾಪನೆಯಲ್ಲಿರುವ 241 ಸಹಕಾರಿಗಳ ಪೈಕಿ ಶೇ.50ಕ್ಕೂ ಹೆಚ್ಚಿನ ಸಹಕಾರಿಯು ಸಮಾಪನ ಆದೇಶವಾಗಿ 2 ವರ್ಷಗಳು ಮೀರಿದ್ದು, 90 ದಿನಗಳ ಅವಧಿಯಲ್ಲಿ 2 ವರ್ಷದ ಗರಿಷ್ಠ ಮಿತಿ ಮೀರಿರುವ ಸಮಾಪನ ಸಂಘಗಳನ್ನು ರದ್ದುಗೊಳಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದೆ.
4. ಸೌಹಾರ್ದ ಸಹಕಾರಿ ದಾವಾ ಪಂಚಾಯತಿ ನ್ಯಾಯಾಲಯ (ನಿಯಮ–441) ಗಳಲ್ಲಿ ಬಾಕಿಯಿರುವ 8,832 ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮವಿಡುವುದು.
5. ಸೌಹಾರ್ದ ಸಹಕಾರಿ ದಾವಾ ಪಂಚಾಯತಿ ನ್ಯಾಯಾಲಯಗಳಲ್ಲಿ On-Line ಮೂಲಕ ವಿಚಾರಣೆ ನಡೆಸಲು ಸಹ ಅವಕಾಶ ಮಾಡಿಕೊಡಲು ಅಗತ್ಯ ಕ್ರಮವಿಡಲು ತಿಳಿಸಿದೆ.
6. NPA ಆಗಿರುವ ಸಾಲಗಳ ದಾವಾ ಪ್ರಕರಣಗಳಲ್ಲಿ Top-100, Top-500 ಈ ರೀತಿಯಾಗಿ ವಿಭಾಗಿಸಿ ಆದ್ಯತೆಯ ಮೇರೆಗೆ ಹೆಚ್ಚಿನ ಮೊತ್ತ ಬಾಕಿಯಿರುವ ದಾವಾ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ವಿಚಾರಣೆ ನಡೆಸಿ ತೀರ್ಪು ನೀಡುವುದು.
7. ತೀರ್ಪು ಬಂದಿರುವ ಸುಸ್ತಿ ಸಾಲಗಳ ಪ್ರಕರಣಗಳಲ್ಲಿ ಅಮಲ್ಜಾರಿ ಪಡೆಯಲು ಕ್ರಮವಿಡುವುದು ಹಾಗೂ ಪಡೆದಿರುವ ಅಮಲ್ಜಾರಿಯನ್ನು ಆದ್ಯತೆಯ ಮೇರೆಗೆ ಜಾರಿ ಮಾಡಿ ಸುಸ್ತಿ ಸಾಲ ವಸೂಲಾತಿಗೆ ಕ್ರಮವಿಡುವುದು.
8. ಸಾಲ ಪಡೆಯುವ ಸಂದರ್ಭದಲ್ಲಿ ಪಡೆಯಬೇಕಾದ ದಾಖಲೆಗಳ ಬಗ್ಗೆ ಚೆಕ್ ಲಿಸ್ಟ್‌ನ್ನು ನೀಡಿ, ಆ ಚೆಕ್‌ಲಿಸ್ಟ್ ಪ್ರಕಾರ ದಾಖಲೆಗಳನ್ನು ಪಡೆದು, ಸಾಲ ವಿತರಿಸಲಾಗಿದೆಯೇ ಎಂಬ ಬಗ್ಗೆ ಅನುಪಾಲನೆ ಮಾಡುವುದು.
9. ಸಹಕಾರಿಗಳಲ್ಲಿ Electronic Display System ಗಳನ್ನು ಅಳವಡಿಸುವುದರ ಮೂಲಕ ವಿಧಿಸುವ ಗರಿಷ್ಠ ಬಡ್ಡಿದರವನ್ನು ಸಹಕಾರಿಗಳಲ್ಲಿ ಪ್ರದರ್ಶಿಸಲು ನಿರ್ದೇಶನ ನೀಡುವುದು.
10. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಬಗ್ಗೆ ಪ್ರಮುಖ ಮಾಹಿತಿಗಳನ್ನು ಸೌಹಾರ್ದ ಸಂಯುಕ್ತ ಸಹಕಾರಿಯ Website ನಲ್ಲಿ ಪ್ರಕಟಿಸಲು ಕ್ರಮವಿಡಲು ತಿಳಿಸಿದೆ.
11. ನಷ್ಟದಲ್ಲಿರುವ 3000 ಸೌಹಾರ್ದ ಸಹಕಾರಿಗಳ Audit, AGM, Enquiry, Profit / Loss A/c ಆಗಿದೆಯೇ ಎಂಬ ಬಗ್ಗೆ ವಿವರ ಪಡೆದು ಇವುಗಳ ಪುನಃಶ್ಚೇತನಕ್ಕೆ ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸಿ ಸಹಕಾರಿಯನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ ವಾಸ್ತವಿಕ ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಷ್ಠಾನ ಸಂಬಂಧ ಸಂಯುಕ್ತ ಸಹಕಾರಿ ಮತ್ತು ಸಹಕಾರಿಯ ಆಡಳಿತ ಮಂಡಳಿಗಳು ಮತ್ತು

ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರ್ಯಪ್ರವೃತ್ತರಾಗಿ ಪ್ರತಿ ತ್ರೈಮಾಸಿಕಕ್ಕೊಮ್ಮೆ ಪ್ರಗತಿ ಪರಿಶೀಲಿಸಲು ಕ್ರಮವಹಿಸಿ.

12. ಠೇವಣಿದಾರರಿಂದ ಮತ್ತು ಸದಸ್ಯರಿಂದ ಬರುವ ದೂರುಗಳನ್ನು ಪರಿಗಣಿಸಿ ವಿಚಾರಣೆ ಮಾಡಲು ಸಂಯುಕ್ತ ಸಹಕಾರಿಯು ಕ್ರಮವಿಡಬೇಕು. ರೂ.50 ಕೋಟಿ ಮೀರಿರುವ ಸೌಹಾರ್ದ ಸಹಕಾರಿಗಳ ವಾರ್ಷಿಕ ಪರಿವೀಕ್ಷಣೆ ಕಡ್ಡಾಯವಾಗಿ ಮಾಡಿ, ಲೋಪದೋಷಗಳು ಕಂಡು ಬಂದಲ್ಲಿ ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಸೂಕ್ತ ಕ್ರಮವಿಡಲು ಸೂಚಿಸಿದೆ.

13. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ ಸಂಖ್ಯೆ:34(ಜಿ) ರಂತೆ ಅಧಿನಿಯಮದ ಉಪಬಂಧದಡಿ ರಿಜಿಸ್ಟ್ರಾರನು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿಯನ್ನು ನೀಡಲು ಸಹಕಾರಿಗಳಿಗೆ ತಿಳುವಳಿಕೆ ನೀಡಬೇಕು. ತಪ್ಪಿದಲ್ಲಿ, ಕಾಯ್ದೆ ಮತ್ತು ನಿಯಮಗಳ ಅವಕಾಶಗಳ ರೀತಿ ಸೂಕ್ತ ಕ್ರಮವಿಡಲು ಸೂಚಿಸಿದೆ.

14. ಠೇವಣಿದಾರರ ಸಮಸ್ಯೆಗಳನ್ನು On-Line ನಲ್ಲಿ ಸಲ್ಲಿಸಲು Online Grivance System ಅನ್ನು ಅಳವಡಿಸಲು ಅಗತ್ಯ ಕ್ರಮವಿಡಲು ಸೂಚಿಸಿದೆ.

15. ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರ ಸಂಬಂಧಿಕರುಗಳನ್ನು ಸಹಕಾರಿಯ ನೌಕರರಾಗಿ ನೇಮಿಸಬಾರದು.

16. ಸಂಯುಕ್ತ ಸಹಕಾರಿಯ ಕಛೇರಿಗಳಲ್ಲಿ E-Office ತಂತ್ರಾಂಶದಲ್ಲಿ ವ್ಯವಹರಿಸಲು ಅಗತ್ಯ ಕ್ರಮವಿಡಲು ಸೂಚಿಸಿದೆ.

17. ಸಂಯುಕ್ತ ಸಹಕಾರಿಯು ನೀಡಿರುವ ಸುತ್ತೋಲೆಯ ನಿರ್ದೇಶನದಂತೆ ಎಲ್ಲಾ ಸಹಕಾರಿಯು ಒಟ್ಟು ಠೇವಣಿ ಮೊತ್ತದ ಶೇ.20 ರಷ್ಟನ್ನು Liquid Resources ಆಗಿ ಕಡ್ಡಾಯವಾಗಿ ಇಡತಕ್ಕದ್ದು. ತಪ್ಪಿದಲ್ಲಿ, ಅಂತಹ ಸಹಕಾರಿಯ ವಿರುದ್ಧ ಸಂಯುಕ್ತ ಸಹಕಾರಿ ಕಾಯ್ದೆಯ ಅವಕಾಶಗಳ ರೀತಿ ಕ್ರಮವಿಡತಕ್ಕದ್ದು.

18. ಸಂಯುಕ್ತ ಸಹಕಾರಿಯ ಮತ್ತು ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳಿಗೆ ಕಾಯ್ದೆ ಮತ್ತು ನಿಯಮಗಳು, ವ್ಯಕ್ತಿತ್ವ ವಿಕಸನ ಹಾಗೂ ಸಾಲ ವಿತರಣೆಯ ನಿಯಮಾವಳಿಗಳು, ಚೆಕ್ ಲಿಸ್ಟ್‌ಗಳು, NPA ನಿರ್ವಹಣೆ, ಕಛೇರಿಯ ಕಾರ್ಯ ವಿಧಾನಗಳು ಹಾಗೂ ಇತರೆ ಅಗತ್ಯ ವಿಷಯಗಳ ಸಂಬಂಧ ಕನಿಷ್ಠ ವರ್ಷಕ್ಕೊಂದು ಬಾರಿಯಾದರು ತರಬೇತಿ ನೀಡತಕ್ಕದ್ದು.

## ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ ಆರ್ ಅಂಬೇಡ್ಕರ್‌ರವರ 134ನೇ ಜನ್ಮದಿನಾಚರಣೆ





**ಬೆಂಗಳೂರು** : ದಿನಾಂಕ : 14.04.2025ರಂದು ಕೇಂದ್ರ ಕಛೇರಿಯಲ್ಲಿ ದೇಶದ ಮಹಾನ್ ಚೇತನ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ ಆರ್ ಅಂಬೇಡ್ಕರ್‌ರವರ 134ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಉಪಪ್ರಧಾನ ವ್ಯವಸ್ಥಾಪಕರು, ಹಿರಿಯ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಸಿಬ್ಬಂದಿಗಳು ದಾವಾ ಪಂಚಾಯತಿ ನ್ಯಾಯಾಲಯದ ಸಿಬ್ಬಂದಿಗಳು ಹಾಜರಿದ್ದರು. ಈ ಸಂದರ್ಭದಲ್ಲಿ ಮಾನ್ಯ ಮಾಜಿ ಅಧ್ಯಕ್ಷರಾದ ಶ್ರೀ ಬಿ ಎಚ್. ಕೃಷ್ಣಾರೆಡ್ಡಿ ರವರು ಮಾತನಾಡಿ ಅಂಬೇಡ್ಕರ್‌ರವರು ರಚಿಸಿದ ಸಂವಿಧಾನದ ಬಗ್ಗೆ ತಿಳಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಮಾತನಾಡಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಡೆದು ಬಂದ ಹಾದಿ ಮತ್ತು ಕರಡು ಪ್ರತಿಯನ್ನು ರಚನೆ ಮಾಡುವಾಗ ಅವರು ನೀಡಿರುವ ಸಲಹೆಗಳನ್ನು ಹಾಗೂ ಸಂವಿಧಾನದಿಂದ ಆಗುತ್ತಿರುವ ಅನುಕೂಲಗಳು ಮತ್ತು ಭಾರತ ದೇಶದಲ್ಲಿ ಸಂವಿಧಾನ ರಚನೆಯಾದ ನಂತರದಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ಮಾಹಿತಿಯನ್ನು ನೀಡಿದರು.

## ಹಿರಿಯ ಸಹಕಾರಿ ಹಾಗೂ ಸಹಕಾರ ಸಚಿವರಾದ ಶ್ರೀ ಕೆ. ಎನ್ ರಾಜಣ್ಣ ಇವರಿಗೆ ಅಭಿನಂದನೆ



ದಿನಾಂಕ 13.04.2025ರಂದು ಶ್ರೀ ಕೆ.ಎನ್. ರಾಜಣ್ಣ, ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ಇವರ 75ನೇ ವರ್ಷದ ಹುಟ್ಟು ಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಮಾನ್ಯ ಸಚಿವರನ್ನು ಭೇಟಿ ಮಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಕುರಿತು ಚರ್ಚಿಸಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡುವಂತೆ ಆಮಂತ್ರಣ ನೀಡಿದರು.

## ಪ್ರವೇಶ ತರಬೇತಿ



**ಶಿವಮೊಗ್ಗ :** ದಿನಾಂಕ 08.04.2025ರಂದು ಶಿವಮೊಗ್ಗ ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರು ಹಾಗೂ ಹೊಸದಾಗಿ ಚುನಾಯಿತರಾದ ನಿರ್ದೇಶಕರುಗಳಿಗಾಗಿ ಪ್ರವೇಶ ತರಬೇತಿಯನ್ನು ಜ್ಯೂಯಲ್ ರಾಕ್ ಹೋಟೆಲ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್ ಜಿ.ಎಸ್. ಮಾನ್ಯ ಉಪಾಧ್ಯಕ್ಷರು, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಶಿವಮೊಗ್ಗ, ಶ್ರೀ ಶ್ರೀಧರ್ ಎಸ್. ಪ್ರಾಂತೀಯ ಅಧಿಕಾರಿಗಳು, ಬೆಂಗಳೂರು ಪ್ರಾಂತ, ಶ್ರೀ ರಾಜಶೇಖರ್ ಹೆಚ್. ಸಹಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಇವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗ್ಡೆ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಭಾಗವಹಿಸಿದ್ದರು. ತರಬೇತಿಯ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ಇವರು ನೆರವೇರಿಸಿದರು. 28 ಸೌಹಾರ್ದ ಸಹಕಾರಿಗಳಿಂದ 58 ಪ್ರತಿನಿಧಿಗಳು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ



**ಮೈಸೂರು :** ಮೈಸೂರು, ಕೊಡಗು, ಮಂಡ್ಯ ಹಾಗೂ ಚಾಮರಾಜನಗರ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಗಳಿಗಾಗಿ "ಲೆಕ್ಕಪ–ರಿಶೋಧನೆ ವರದಿ ಸಿದ್ದತೆ ಮತ್ತು ಪೂರ್ವ ಪ್ರಕ್ರಿಯೆಗಳು" ಹಾಗೂ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ಎಂಬ ವಿಷಯಗಳ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 22.04.2025 ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿರ್ಸ್, ಎಸ್.ಪಿ ಭಟ್ ಹಾಲ್, ಜೆ.ಎಲ್.ಬಿ ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು ಇಲ್ಲಿ ಮೈಸೂರು ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಹಾಗೂ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇವರ ಸಹಕಾರದೊಂದಿಗೆ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಮಾನ್ಯ ಸಹಕಾರ ಸಂಘಗಳ ಲೆಕ್ಕಪ–ರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ಎಂ ರವಿ ರವರು ಉದ್ಘಾಟಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ

ಶ್ರೀ ಎಸ್.ಆರ್. ನಾರಾಯಣ ರಾವ್ ರವರು ವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಗುರುರಾಜ್ ಬಿ ಟಿ ರವರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ಇವರು ನೆರವೇರಿಸಿದರು.

ಕಾರ್ಯಕ್ರಮದ ಮೊದಲನೆಯ ಅವಧಿಯಲ್ಲಿ ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ಎನ್. ಚಂದ್ರಶೇಖರ್ ರವರು "ಲೆಕ್ಕಪ–ರಿಶೋಧನೆ ವರದಿ ಸಿದ್ದತೆ ಮತ್ತು ಪೂರ್ವ ಪ್ರಕ್ರಿಯೆಗಳು"ಕುರಿತು ಎಂಬ ವಿಷಯದ ಕುರಿತು ಹಾಗೂ ಮಧ್ಯಾಹ್ನ ಅವಧಿಯಲ್ಲಿ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೊಸೈಟಿ ಲಿ., ಇದರ ಮಾನ್ಯ ಶಾಖಾ ವ್ಯವಸ್ಥಾಪಕರಾದ ಶ್ರೀ ಶೇಖರ್ ಪಿ ರವರು "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 84 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಹಕಾರಿ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮ (ಡಿಸಿಬಿಎಮ್) 3ನೇ ತಂಡದ ಆನ್‌ಲೈನ್ ತರಗತಿಗಳು ಪ್ರಾರಂಭ

**ಬೆಂಗಳೂರು :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ (ಮೊದಲಿನ ಹೆಸರು) ತಿದ್ದುಪಡಿಯಾದ ಹೆಸರು ಮಹಾತ್ಮ ಗಾಂಧೀ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಡೆಸುತ್ತಿರುವ ಸಹಕಾರಿ ಹಾಗೂ ಬ್ಯಾಂಕಿಂಗ ಮ್ಯಾನೇಜ್‌ಮೆಂಟ್ ಡಿಪ್ಲೋಮ (ಡಿಸಿಬಿಎಮ್) 3ನೇ ತಂಡದ ಆನ್‌ಲೈನ್ ತರಗತಿಗಳನ್ನು ದಿನಾಂಕ 26.04.2025 ರಂದು ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕುಲಸಚಿವರೂ ಆಗಿರುವ ಡಾ. ಸುರೇಶ ನಾಡಗೌಡರವರು ಎಲ್ಲರಿಗೂ ಶುಭ ಹಾರೈಸುವ ಮೂಲಕ ಉದ್ಘಾಟಿಸಿ ಆನ್‌ಲೈನ್ ತರಗತಿಗಳಿಗೆ ಚಾಲನೆ ನೀಡಿದರು.



ಉದ್ಘಾಟನೆ ನೇರವೇರಿಸಿ ಮಾತನಾಡಿದ ಕುಲಪತಿಗಳಾದ ಡಾ. ಸುರೇಶ ನಾಡಗೌಡರವರು ವಿಶ್ವವಿದ್ಯಾಲಯ ರೆಗ್ಯುಲರ್ ಕೋರ್ಸ್‌ಗಳಿಗೆ ಇರುವಂತಹ ಮಹತ್ವ ಹಾಗೂ ಮಾನ್ಯತೆ ಈ ಕೋರ್ಸಿಗೂ ಸಹ ಇದೆ. ವಿಶ್ವವಿದ್ಯಾಲಯದಲ್ಲಿ ಶಿಸ್ತು ಮತ್ತು ವೃತ್ತಿಪರತೆ ಹಾಗೂ ಪಾರದರ್ಶಕತೆಗೆ ಹೆಚ್ಚಿನ ಆದ್ಯತೆ ಇರುತ್ತದೆ. ಈ ವಿಶ್ವವಿದ್ಯಾಲಯ ವಿವಿಧ ಕೋರ್ಸಗಳನ್ನು ಮಾಡಿರುವಂತಹ ವಿದ್ಯಾರ್ಥಿಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸುತ್ತಿದ್ದಾರೆ. ತಾವುಗಳು ಈ ಕೋರ್ಸನ್ನು ಆಸಕ್ತಿ ವಹಿಸಿ ಅಧ್ಯಯನ ಮಾಡಿ ಉತ್ತಮ ಅಂಕಗಳನ್ನು ಗಳಿಸಿ ಉತ್ತೀರ್ಣರಾಗಲು ಕರೆ ನೀಡಿದರು.

ಪ್ರಾಸ್ತಾವಿಕ ನುಡಿಗಳನ್ನು ಹೇಳಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ



ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರು ವೃತ್ತಿಪರತೆಯನ್ನು ಹಾಗೂ ವೃತ್ತಿ ಕೌಶಲ್ಯ ಬೆಳೆಸಿಕೊಳ್ಳಲು ಸಹಕಾರಿಯಾಗುವ ಈ ಕೋರ್ಸನ್ನು ವಿಶ್ವವಿದ್ಯಾಲಯ ಹಾಗೂ ಸಂಯುಕ್ತ ಸಹಕಾರಿ ಪ್ರಾರಂಭಿಸಿದೆ. ಸಹಕಾರಿ ಕ್ಷೇತ್ರದಲ್ಲಿ ಇದೊಂದು ಅತ್ಯುತ್ತಮವಾದ ಕೋರ್ಸ ಆಗಿದೆ. ಯುವಕರು ವಿದ್ಯಾರ್ಥಿಗಳು ಸಹ ಈ ಕೋರ್ಸನ್ನು ಮಾಡಲಿಕ್ಕೆ ಅವಕಾಶ ಇದೆ ಎಲ್ಲ ಸೌಹಾರ್ದ ಸಹಕಾರಿಗಳು ಈ ಕೋರ್ಸನ ಪ್ರಯೋಜನ ಪಡೆಯಲು ವಿನಂತಿಸಿಕೊಂಡರು.

ಪ್ರಾರಂಭದಲ್ಲಿ ಶ್ರೀಮತಿ ಹರ್ಷಪ್ರಭರವರಿಂದ ಪ್ರಾರ್ಥನೆಯಾದ ನಂತರ ತರಬೇತಿ ಸಲಹೆಗಾರರಾದ ಶ್ರೀ ವಿ.ಜೆ ಕಾರಕೂನರವರು ಅತಿಥಿಗಣ್ಯರನ್ನು ಸ್ವಾಗತಿಸಿದರು. ಶ್ರೀಮತಿ ಕವಿತಾರವರು ವಂದನಾರ್ಪಣೆ ಸಲ್ಲಿಸಿದರು.

ಡಾ. ಅಭಯ ಗಸ್ತಿರವರು ಈ ಕೋರ್ಸಿನ 2 ಸೆಮಿಸ್ಟರಗಳ ಪೂರ್ಣ ವಿವರಗಳನ್ನು ನೀಡಿದರು. ವಿದ್ಯಾರ್ಥಿಗಳು ಹೇಗೆ ಈ ಕೋರ್ಸಿನ ವಿಷಯಗಳನ್ನು ಆಂತರಿಕ ಪರೀಕ್ಷೆಗಳನ್ನು ಹಾಗೂ ಆನ್‌ಲೈನ್ ತರಗತಿಗಳನ್ನು ನಿರ್ವಹಿಸಬೇಕು ಎಂಬುದರ ಬಗ್ಗೆ ವಿವರ ನೀಡಿದ ನಂತರ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿವರ ನೀಡುವ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು.

ನಂತರ ಸಂಯುಕ್ತ ಸಹಕಾರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ಆರ್. ಶೋಭ ರವರು ಸಹಕಾರ ಪರಿಸರ ವಿಷಯದ ಬಗ್ಗೆ ತರಗತಿ ನಡೆಸಿಕೊಟ್ಟರು.

# ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ



**ಚಿಕ್ಕಮಗಳೂರು :** ದಿನಾಂಕ 21.04.2025ರ ಸೋಮವಾರ ರಂದು ಕರ್ನಾಟಕ ಸರ್ಕಾರದ ಸಹಕಾರ ಸಚಿವರಾದ ಶ್ರೀಯುತ ಕೆ. ಎನ್ ರಾಜಣ್ಣನವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್. ಚಿಕ್ಕಮಗಳೂರು ಇಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯು ಜರುಗಿತು. ಈ ಪ್ರಗತಿ ಪರಿಶೀಲನ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ರವರು ವಹಿಸಿದ್ದರು.

ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ನವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಪ್ರಗತಿ ಪರಿಶೀಲನ ಸಭೆಯಲ್ಲಿ ಸೌಹಾರ್ದ ಸಹಕಾರಿ ಕುರಿತಂತೆ ಹಲವು ವಿಚಾರಗಳನ್ನು ಚರ್ಚಿಸಿ ಈ ಕೆಳಕಂಡಂತೆ ಮಾರ್ಗದರ್ಶನವನ್ನು ಮಾಡಿರುತ್ತಾರೆ. ಅವುಗಳೆಂದರೆ

1. ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಒಟ್ಟು ಕಾರ್ಯನಿರತ, ಕಾರ್ಯಸ್ಥಗಿತ ಹಾಗೂ ಸಮಾಪನೆ ಪಟ್ಟಿಯಲ್ಲಿನ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಂಖ್ಯಾತ್ಮಕ ಮಾಹಿತಿಯನ್ನು ಪಡೆದುಕೊಂಡು ಎಲ್ಲಾ ಸಹಕಾರಿಗಳ ಸಾಲ ಮಂಜೂರಾತಿ, ಬಡ್ಡಿದರ ಹಾಗೂ ಎಲ್ಲ ಕಾರ್ಯ ಚಟುವಟಿಕೆಯ ಕುರಿತಂತೆ ಸೂಕ್ಷ್ಮವಾಗಿ ಗಮನಿಸಲು ತಿಳಿಸಿದರು.
2. ಜಿಲ್ಲೆಯಲ್ಲಿ ಕಾರ್ಯಸ್ಥಗಿತವಾಗಿರುವ ಸೌಹಾರ್ದ ಸಹಕಾರಿಗಳ ಪುನಶ್ಚೇತನಕ್ಕೆ ಇರುವ ಅವಕಾಶವನ್ನು ಪರಿಶೀಲಿಸಿ ಪುನಶ್ಚೇತನಕ್ಕೆ ಕ್ರಮವಹಿಸಲು ಹಾಗೂ ಕಾರ್ಯಚಟುವಟಿಕೆ ನಡೆಸಲು ಆಸಕ್ತಿ ಇಲ್ಲದ ಸೌಹಾರ್ದ ಸಹಕಾರಿಗಳ ಸಮಾಪನೆಗೆ ಕ್ರಮವಿಡಲು ತಿಳಿಸಿದರು.
3. ಜಿಲ್ಲೆಯಲ್ಲಿ ಬಾಕಿ ಇರುವ ಎಲ್ಲಾ ಲೆಕ್ಕಪರಿಶೋಧನ ವರದಿಗಳ ಸಲ್ಲಿಕೆ ಆಗುವ ನಿಟ್ಟಿನಲ್ಲಿ ಹಾಗೂ ನಷ್ಟದಲ್ಲಿರುವ ಸಹಕಾರಿಗಳನ್ನು ಲಾಭದತ್ತ ಸಾಗಲು ಅಗತ್ಯ ಕ್ರಮವಹಿಸಲು ತಿಳಿಸಿದರು.
4. ಸಹಕಾರಿಯಲ್ಲಿ ಹಣ ದುರುಪಯೋಗ ಅಥವಾ ವಂಚನೆ ಪ್ರಕರಣಗಳಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು/ನಿರ್ದೇಶಕರು ಭಾಗಿಯಾಗಿದ್ದಲ್ಲಿ ಅವರ ಆಸ್ತಿಗಳ ವಿವರವನ್ನು ಪಡೆದು ಅಧಿಭಾರ ಪ್ರಕರಣ ದಾಖಲಿಸಲು ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ಹಣ ದುರುಪಯೋಗ ಪ್ರಕರಣಗಳು ಆಗದ ನಿಟ್ಟಿನಲ್ಲಿ ಸೂಕ್ಷ್ಮವಾಗಿ ಗಮನಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ ಜಿ ರವರು ಉಪಸ್ಥಿತರಿದ್ದು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಚಟುವಟಿಕೆಯ ಕುರಿತಂತೆ ಸಭೆಯಲ್ಲಿ ಮಾಹಿತಿ ನೀಡಿದರು. ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸ್ಥಳೀಯ ಶಾಸಕರು ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು

---



**ಬೆಳಗಾವಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಹಾಗೂ ಶ್ರೀ ಬ್ರಹ್ಮನಾಥ ಕ್ರೇಡಿಟ ಸೌಹಾರ್ದ ಸಹಕಾರಿ ಸಂಘ ನಿ., ನಿಪ್ಪಾಣಿ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಬ್ರಹ್ಮನಾಥ ಕ್ರೇಡಿಟ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ, ಸಿಬ್ಬಂದಿಗಳಿಗೆ ಹಾಗೂ ಪಿಗ್ಮೀ ಸಂಗ್ರಹಕಾರ ಸಿಬ್ಬಂದಿಗಳ ವ್ಯಕ್ತಿತ್ವ ವಿಕಸನ, ಸಮಯ ಪಾಲನೆ ಹಾಗೂ ಸಿಬ್ಬಂದಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ವಿಷಯಗಳ ಕುರಿತು ವಿಷಯಾಧಾರಿತ ತರಬೇತಿಯನ್ನು ದಿನಾಂಕ 13–04–2025 ರಂದು ಸಹಕಾರಿಯ ಸಭಾ ಭವನದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಡಾ॥ ಪ್ರವೀಣ ಪಾಟೀಲ, ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ ಇಂಜನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜು, ನಿಪ್ಪಾಣಿ ಇವರು ಆಗಮಿಸಿದ್ದರು. ತರಬೇತಿಯಲ್ಲಿ ಒಟ್ಟು 32 ಪ್ರತಿನಿಧಿಗಳು ಭಾಗವಹಿಸಿದ್ದರು.

---




## ಭೇಟಿ

**ಮೈಸೂರು :** ದಿನಾಂಕ 11.04.2025ರ ಶುಕ್ರವಾರದಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಜಯ್ ಸಿ.ಪಿ ಇವರು ಮೈಸೂರಿಗೆ ಪ್ರವಾಸ ನೀಡಿದ ಸಂದರ್ಭದಲ್ಲಿ ಮೈಸೂರು ಪ್ರಾಂತೀಯ ಕಛೇರಿಗೆ ಸೌಹಾರ್ದಯುತ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿಯ ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

**ಸಂಖ್ಯೆ : ಸಂಸ/ಶಿವಿ/ತ-2/1/2025-26** **ದಿನಾಂಕ: 23.04.2025**

**ಇವರಿಗೆ,**
ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿ
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

**ಮಾನ್ಯರೇ,**

**ವಿಷಯ:** ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ **"ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿ"** ಕುರಿತು.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ **"ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿ"** ಯನ್ನು ಆಯೋಜಿಸಲು ಉದ್ದೇಶಿಸಿದೆ.


**ಪ್ರಸ್ತುತ 2025ರ ಮೇ 2ನೇ ವಾರದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ** ಎರಡು ದಿನಗಳ **"ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿ"** ಕಾರ್ಯಕ್ರಮವನ್ನು **"ಸೌಹಾರ್ದ ಸಹಕಾರಿ ಸೌಧ"**, 18ನೇ ಅಡ್ಡರಸ್ತೆ ಮಾರ್ಗೋಸ ರಸ್ತೆ, ಮಲ್ಲೇಶ್ವರಂ ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ. ಸಹಕಾರ ಕ್ಷೇತ್ರದಲ್ಲಿ ನೀವು ಒಬ್ಬ ಉತ್ತಮ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಈ ತರಬೇತಿ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ಭಾವಿಸಿದೆ. ಆದ್ದರಿಂದ ತಾವು ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ಕೋರಿದೆ. ನೋಂದಣಿಯನ್ನು ಗೂಗಲ್ ಫಾರಂ ಮೂಲಕ ಭರ್ತಿ ಮಾಡುವುದು. ಗೂಗಲ್ ಫಾರಂ ಲಿಂಕ್-https://forms.gle/vPgofyZE9a33y1B38

**ಕಾರ್ಯಕ್ರಮದ ವಿವರಗಳು ಈ ರೀತಿ ಇವೆ.**

| | |
|---|---|
| **ಕಾರ್ಯಕ್ರಮದ ದಿನಾಂಕ** | : **2ನೇ ವಾರದ ಮೇ 2025** |
| **ಕಾರ್ಯಕ್ರಮದ ಸ್ಥಳ** | : **"ಸೌಹಾರ್ದ ಸಹಕಾರಿ ಸೌಧ"**, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055 |
| **ಕಾರ್ಯಕ್ರದ ಅವಧಿ ಹಾಗೂ ಸಮಯ** | : ಬೆಳಿಗ್ಗೆ 9:30 ರಿಂದ ಸಂಜೆ 5:30ರವರೆಗೆ 2 ಪೂರ್ಣ ದಿನಗಳು. |
| **ಪ್ರತಿನಿಧಿಗಳ ಸಂಖ್ಯೆ** | : 80 ಜನರಿಗೆ ಮಾತ್ರ ಅವಕಾಶ (ಒಂದು ತಂಡದಲ್ಲಿ) |
| **ತರಬೇತಿ ವ್ಯವಸ್ಥೆ** | : ತರಬೇತಿ, ಅಧ್ಯಯನ ಸಾಹಿತ್ಯ, ಊಟ, ಉಪಹಾರ ವ್ಯವಸ್ಥೆ ಇರುತ್ತದೆ. |
| **ಪ್ರತಿನಿಧಿ ನೋಂದಣಿ ಶುಲ್ಕ** | : ರೂ. 100+18% ಜಿಎಸ್‌ಟಿಯೊಂದಿಗೆ (ರೂ.118/-)ಪಾವತಿಸುವುದು. |
| **ವಸತಿ ವ್ಯವಸ್ಥೆ** | : ತರಬೇತಿಯಲ್ಲಿ ಭಾಗವಹಿಸುವ ಪ್ರತಿನಿಧಿಯೇ ವಸತಿ ವ್ಯವಸ್ಥೆ ಮಾಡಿಕೊಳ್ಳುವುದು. |

**ಪು.ತಿ.ನೋ.**

# GWC-2025 - GLOBAL WELLBEING CONFERENCE ಕಾರ್ಯಕ್ರಮ



**ಬೆಂಗಳೂರು** : ದಿನಾಂಕ 11.04.2025 ರಿಂದ 14.04.2025 ರವರೆಗೆ ಆಯುಷ್ ಟಿವಿ ವತಿಯಿಂದ GWC-2025 - GLOBAL WELLBEING CONFERENCE ಅನ್ನು ಅರಮನೆ ಮೈದಾನ ಗೇಟ್ ಸಂಖ್ಯೆ 06 ರಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ದಿನಾಂಕ 12.04.2025 ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭಾಗವಹಿಸಿ ಸೌಹಾರ್ದ ಸಹಕಾರ ಕ್ಷೇತ್ರದ ಕುರಿತು ಮಾಹಿತಿಯನ್ನು ನೀಡಿದರು ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರವು ಸಾಮಾಜಿಕವಾಗಿ ಆರ್ಥಿಕವಾಗಿ ಸಮಾಜದ ಎಲ್ಲ ಹಂತದ ಜನರಿಗೆ ನೆರವಾಗಿದೆ. ಯುವಜನತೆಗೆ ಹೆಚ್ಚು ಅವಕಾಶ ನೀಡುತ್ತಿದೆ ಎಂದು ತಿಳಿಸುತ್ತ ರಜತ ಮಹೋತ್ಸವ ಕುರಿತು, ಸಂಯುಕ್ತ ಸಹಕಾರಿಯ ಪ್ರಕಾರ್ಯಗಳ ಕುರಿತು ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ವತಿಯಿಂದ ಪ್ರದರ್ಶನ ಹಾಗೂ ಪುಸ್ತಕ ಮಾರಾಟ ಮಳಿಗೆಯನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಪ್ರದರ್ಶನ ಹಾಗೂ ಪುಸ್ತಕ ಮಾರಾಟ ಮಳಿಗೆಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಭೇಟಿ ನೀಡಿದರು.

ಈ ಕಾರ್ಯಕ್ರಮಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಹಾಗೂ ಸ್ಥಳೀಯ ಶಾಸಕರಾದ ಡಾ॥ ಅಶ್ವಥ್ ನಾರಾಣ್‌ರವರು ಭೇಟಿ ನೀಡಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು ಹಾಗೂ ಪ್ರತಿನಿಧಿಗಳು ಸಂಯುಕ್ತ ಸಹಕಾರಿಯ ಮಳಿಗೆಯನ್ನು ವೀಕ್ಷಣೆ ಮಾಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ ಇವರನ್ನು ಸನ್ಮಾನಿಸಲಾಯಿತು.

.....10ನೇ ಪುಟದಿಂದ ಮುಂದುವರೆದಿದೆ.

**ದಯವಿಟ್ಟು ಸೂಚನೆಗಳನ್ನು ಗಮನಿಸಿ**

- ಮೊದಲು ಗೂಗಲ್ ಫಾರಂನಲ್ಲಿ ನೋಂದಾಯಿಸಿದವರಿಗೆ ಮೊದಲ ಆದ್ಯತೆ.
- ಪೂರ್ಣ 2 ದಿನಗಳು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸುವ ಮಾನಸಿಕ ಸಿದ್ಧತೆ ಅವಶ್ಯ.
- ಮೊದಲು ನೋಂದಣಿಯಾದ 80 ನಿರ್ದೇಶಕರಿಗೆ ಮೊದಲ ಹಂತದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ನಂತರ ಬಂದವರಿಗೆ 2ನೇ ತಂಡದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. 2ನೇ ತಂಡದ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು.
- ತರಬೇತಿಯನ್ನು ಕೇಂದ್ರ ಸ್ಥಾನದಲ್ಲಿ ಹಮ್ಮಿಕೊಳ್ಳುತ್ತಿರುವುದು ಸೌಹಾರ್ದ ಸಹಕಾರಿಗಳಿಗೆ ಈ ಕ್ಷೇತ್ರದ ವಿಸ್ತೃತ ಜ್ಞಾನಾರ್ಜನೆ, ರಾಜ್ಯ ಮಟ್ಟದಲ್ಲಿ ಅಧ್ಯಯನ ಹಾಗೂ ಅವಕಾಶ ಹಾಗೂ ರಾಜ್ಯದ ಸಹಕಾರಿಗಳೊಂದಿಗೆ ಬೆರೆಯಲು ಅವಕಾಶಕ್ಕಾಗಿ. ಇಂತಹ ತರಬೇತಿಗಳನ್ನು ಪ್ರಾಂತೀಯ ಮಟ್ಟದಲ್ಲೂ ಹಾಗೂ ಜಿಲ್ಲಾ ಕೇಂದ್ರಗಳಲ್ಲೂ ಹಮ್ಮಿಕೊಳ್ಳಲಾಗುತ್ತಿದೆ.
- ಭಾಗವಹಿಸುವ ಪ್ರತಿನಿಧಿಗಳು ತಾವು ಪ್ರತಿನಿಧಿಸುವ ಸಹಕಾರಿಯ ಬಗ್ಗೆ ಪೂರ್ಣ ವಿವರಗಳನ್ನು ಹಾಗೂ ಆರ್ಥಿಕ ಮಾತಿಯನ್ನು ತಿಳಿದುಕೊಂಡು ಬರುವುದು.
- ತರಬೇತಿ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ನಿಯಮ ಹಾಗೂ ವ್ಯವಸ್ಥೆಗಳಿಗೆ ಬದ್ಧರಾಗಿರುವುದು.
- ತರಬೇತಿಯ ನೋಂದಣಿಯ ಶುಲ್ಕವನ್ನು **"ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,"** ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,** ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ಕಳುಹಿಸುವ ಮೂಲಕ ಪಾವತಿಸುವುದು.
- ನೊಂದಣಿ ಕೊನೆಯ ದಿನಾಂಕ 03.05.2025

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ**
**ಸಹಿ/–**
**ವ್ಯವಸ್ಥಾಪಕ ನಿರ್ದೇಶಕ**

## ಕ್ಲಸ್ಟರ ಮಟ್ಟದ ತರಬೇತಿ

**ಬಾಗಲಕೋಟೆ** : ದಿನಾಂಕ 23.04.2025 ರಂದು ಬಾಗಲಕೋಟೆ ಜಿಲ್ಲೆಯ ಹುನಗುಂದ ಮತ್ತು ಇಲಕಲ್ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೆತಿಯನ್ನು ಶಶಿಕಿರಣ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇಲಕಲ್ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಚುನಾವಣೆಗೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ವರ್ಷಾಂತ್ಯದ ಮಾಹಿತಿ ಸಲ್ಲಿಸುವ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಹಾಗೂ ಶ್ರೀ ಸುರೇಶ ಶೇಗುಣಸಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 19 ಸಹಕಾರಿ ಸೌಹಾರ್ದಗಳಿಂದ 24 ಜನ ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 24.04.2025 ರಂದು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಮುಧೋಳ ಕಬ್ಬು ಬೆಳೆಗಾರರ ಸೌಹಾರ್ದ ಸಹಕಾರಿ ಸಂಘ ಮುಧೋಳ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆಗೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ವರ್ಷಾಂತ್ಯದ ಮಾಹಿತಿ ಸಲ್ಲಿಸುವ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಹಾಗೂ ಶ್ರೀ ಸುರೇಶ ಶೇಗುಣಸಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 32 ಸಹಕಾರಿ ಸೌಹಾರ್ದಗಳಿಂದ 36 ಜನ ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 28.04.2025 ರಂದು ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಮತ್ತು ಬೀಳಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆಗೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ವರ್ಷಾಂತ್ಯದ ಮಾಹಿತಿ ಸಲ್ಲಿಸುವ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ, ಶ್ರೀ ಸುರೇಶ ಶೇಗುಣಸಿ ಹಾಗೂ ಶ್ರೀಮತಿ ರೇಷ್ಮಾ ಪಾಟೀಲ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 37 ಸಹಕಾರಿ ಸೌಹಾರ್ದಗಳಿಂದ 45 ಜನ ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 29.04.2025 ರಂದು ಬಾಗಲಕೋಟೆ ಜಿಲ್ಲೆಯ ಬದಾಮಿ ಮತ್ತು ಗುಳೇದಗುಡ್ಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ಬದಾಮಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆಗೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ವರ್ಷಾಂತ್ಯದ ಮಾಹಿತಿ ಸಲ್ಲಿಸುವ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ, ಶ್ರೀ ಸುರೇಶ ಶೇಗುಣಸಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 12 ಸಹಕಾರಿ ಸೌಹಾರ್ದಗಳಿಂದ 20 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ರಾಯಚೂರು** : ದಿನಾಂಕ 28.04.2025 ಸೋಮವಾರ ಮಧ್ಯಾಹ್ನ 12 ಗಂಟೆಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಾಗಾರವನ್ನು ಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ದ ಕಚೇರಿ ಆವರಣ, APMC ಎದುರುಗಡೆ, ಟ್ರೆಂಡ್ಸ್ ಬಟ್ಟೆ ಅಂಗಡಿ ಹಿಂಭಾಗ,ದೇವದುರ್ಗ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಲೆಕ್ಕಪರಿಶೋಧನ ವರದಿ ಪೂರ್ವ ತಯಾರಿ ಹಾಗೂ ಇತರೆ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ‍್ಯಾಕಲೇ ರವರು ಮಾಹಿತಿ ನೀಡಿದರು.

ಈ ಸಂಧರ್ಭದಲ್ಲಿ ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮಹಾಂತಯ್ಯ ಸ್ವಾಮಿಯವರು, ಶ್ರೀ ಹಿರೇಗುಡ್ಡದಯ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆಂಚಣ್ಣ ಪೂಜಾರಿ ಯವರು, ರಾಯಚೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜ ರವರು, ಆಂಜಿನೇಯ ರವರು ಹಾಗೂ ದೇವದುರ್ಗ ತಾಲ್ಲೂಕಿನ 18 ಸೌಹಾರ್ದ ಸಹಕಾರಿಗಳಿಂದ 23 ಜನ ಪ್ರತಿನಿಧಿಗಳು ಈ ತರಬೇತಿಯಲ್ಲಿ ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿ ಸ್ಥಾಪನೆಗಾಗಿ ಪ್ರವರ್ತಕರ ಸಭೆ

**ಹಾಸನ :** ದಿನಾಂಕ: 08.04.2025ರ ಮಂಗಳವಾರದಂದು ಹೋಟೆಲ್ ಜ್ಯುವೆಲ್ ರಾಕ್ ಹಾಸನ ಇಲ್ಲಿ ನಡೆದ ನೂತನ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಸಭೆಯಲ್ಲಿ ಹಾಜರಿದ್ದ ಮುಖ್ಯ ಪ್ರವರ್ತಕರಾದ ಶ್ರೀ ದಿನೇಶ್ ಹಾಗೂ ಇತರರಿಗೆ ಹಾಸನ ದಲ್ಲಿ ಹೊಸ ಸೌಹಾರ್ದ ಸಹಕಾರಿಯ ನೋಂದಣಿ ಹಾಗೂ ಸೌಹಾರ್ದ ಸಹಕಾರಿಯ ಚಳುವಳಿಯ ಕುರಿತು ಅಗತ್ಯವಾದ ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಒಟ್ಟು 9 ಪ್ರವರ್ತಕರು ಹಾಜರಿದ್ದರು. ಈ ಸಂದರ್ಭದಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಅಶೋಕ ಜಿ. ಉಪಸ್ಥಿತರಿದ್ದರು.

**ಮೈಸೂರು :** ದಿನಾಂಕ: 26.04.2025 ರಂದು ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಠಿಯಿಂದ ಮೈಸೂರು ಜಲದರ್ಶಿನಿಯಲ್ಲಿ ಶ್ರೀ ಮಲ್ಲೇಶ್ ರವರ ಅಧ್ಯಕ್ಷತೆಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ 10 ಮಂದಿ ಪ್ರವರ್ತಕರುಗಳು ಭಾಗವಹಿಸಿದ್ದರು.

**ಮೈಸೂರು :** ದಿನಾಂಕ: 24.04.2025 ರಂದು ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಠಿಯಿಂದ ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯ ಸಹಕಾರ ಮತ್ತು ಅರ್ಥಶಾಸ್ತ್ರ ವಿಭಾಗದಲ್ಲಿ ಶ್ರೀಮತಿ ನವಿತಾ ತಿಮ್ಮಯ್ಯ ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಎ ಆರ್ ಶ್ರೀನಾಥ್ ರವರ ಉಪಸ್ಥಿತಿಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದ್ದರು. ಸದರಿ ಸಭೆಯಲ್ಲಿ ಉಪನ್ಯಾಸಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 14 ಜನ ಭಾಗವಹಿಸಿದ್ದರು.

**ರಾಯಚೂರು :** ದಿನಾಂಕ 28.04.2025 ಸೋಮವಾರ ಸಂಜೆ 4 ಗಂಟೆಗೆ ಗಂಟೆಗೆ ರಾಯಚೂರು ಜಿಲ್ಲೆಯ ಲಿಂಗಸೂಗುರು ತಾಲ್ಲೂಕಿನ ಶರಣು ಶ್ರೀ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಕ್ಕೆ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸೂರ್ಯ ಕಾಂತ ರ್‍ಯಾಕಲೇ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜ ರವರು ಭೇಟಿ ನೀಡಿ 3(4)(ಸಿ) ಉಲ್ಲಂಘನೆ ಆಗಿರುವ ಕುರಿತು ಮಾಹಿತಿ ಪಡೆದುಕೊಂಡು, ಸಂಯುಕ್ತ ಸಹಕಾರಿಯ ಆರ್ಥಿಕ ಸಬಲತೆ ಮಾನದಂಡಗಳ ಸುತ್ತೋಲೆಯ ಬಗ್ಗೆ ಮಾಹಿತಿ ನೀಡಿ ಕೆಲವು ಸಲಹೆ ಸೂಚನೆಗಳನ್ನು ನೀಡಲಾಯಿತು

ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## "ಲೆಕ್ಕ ಪರಿಶೋಧನೆ ವರದಿ ಸಿದ್ಧತೆ ಹಾಗೂ ಪೂರ್ವ ಪ್ರಕ್ರಿಯೆಗಳು" ಕುರಿತು ತರಬೇತಿ



**ದಕ್ಷಿಣ ಕನ್ನಡ :** ದಿನಾಂಕ :26.04.2025ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ನಡೆದ ದಕ್ಷಿಣ-ಕನ್ನಡ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ಲೆಕ್ಕ ಪರಿಶೋಧನೆ ವರದಿ ಸಿದ್ಧತೆ ಹಾಗೂ ಪೂರ್ವ ಪ್ರಕ್ರಿಯೆಗಳು" ಹಾಗೂ "ಸೌಹಾರ್ದ ನ್ಯಾಯಾಲಯದಲ್ಲಿ ದಾವ ದಾಖಲಾತಿ ವಿಧಾನ ಹಾಗೂ ಅಮಲ್ಜಾರಿ ಪ್ರಕ್ರಿಯೆ" ಎಂಬ ವಿಷಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಶ್ರೀನಿವಾಸ ಮಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಗಗನ ಕೆ ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಇವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನುಡಿದರು. ನಂತರ ಶ್ರೀ ವಿಜಯ್ ಬಿ.ಎಸ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಸರ್ವರನ್ನು ಸ್ವಾಗತಿಸಿದರು ಮತ್ತು ವಂದನಾರ್ಪಣೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ನಂದನ್ ಬಿ ಎನ್ ರವರು ನೆರವೇರಿಸಿದರು. ಮೊದಲನೇ ಅವಧಿಯಲ್ಲಿ ಶ್ರೀ ಮಧುಕರ್ ಹೆಗ್ಡೆ, ಸನ್ನದ್ದು ಲೆಕ್ಕ ಪರಿಶೋಧಕರು, ಬೆಂಗಳೂರು ಇವರು ಲೆಕ್ಕ ಪರಿಶೋಧನೆ ವರದಿ ಸಿದ್ಧತೆ ಹಾಗೂ ಪೂರ್ವ ಪ್ರಕ್ರಿಯೆಗಳು ಇದರ ಕುರಿತು ಮಾಹಿತಿ ನೀಡಿದರು ಎರಡನೇ ಅವದಿಯಲ್ಲಿ ಶ್ರೀಮತಿ ಗಗನ. ಕೆ. ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಇವರು "ಸೌಹಾರ್ದ ನ್ಯಾಯಾಲಯದಲ್ಲಿ ದಾವ ದಾಖಲಾತಿ ವಿಧಾನ ಹಾಗೂ ಅಮಲ್ಜಾರಿ ಪ್ರಕ್ರಿಯೆ" ಇದರ ಕುರಿತು ಮಾಹಿತಿ ನೀಡಿದರು ಸದರಿ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು 85 ಸಹಕಾರಿಗಳಿಂದ 93 ಮಂದಿ ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದ್ದರು.

# 3ನೇ ತಂಡದ ಸಹಕಾರ ಮತ್ತು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ವಾರ್ಷಿಕ ವೇಳಾಪಟ್ಟಿ

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

MahatmaGandhi Rural Development and Panchayat Raj University,Gadag

ಕೌಶಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ, ನಾಗಾವಿ, ಗದಗ – 582103

Koushalya Vikas Bhavan, Grama Gangothri Campus, Nagavi, Gadag - 582103

E-mail: ksrdpru@gmail.com Phone: 08372-200920, 200922

No. RDPRU 39 ACA 2024 Date: 15/04/2025

**Diploma in Co-operation and Banking Management-AY 2024-25**

**Academic Calendar of Events**

| Events | Date |
|---|---|
| Commencement of First Semester Classes | 26.04.2025 |
| First Internal Assessment Examination | 19.05.2025 – 24.05.2025 |
| Second Internal Assessment Examination | 07.07.2025 – 12.07.2025 |
| Last Date for Online Classes | 02.08.2025 |
| Contact Classes | 23.08.2025 & 24.08.2025 |
| **Semester End Examination** | 13.09.2025 & 14.09.2025 |
| **Second Semester** | |
| Commencement of Second Semester Classes | 20.09.2025 |
| First Internal Assessment Examination | 06.10.2025 – 11.10.2025 |
| Second Internal Assessment Examination | 08.12.2025 – 13.12.2025 |
| Last Date for Online Classes | 27.12.2025 |
| Contact Classes | 10.01.2026 & 11.01.2026 |
| **Semester End Examination** | 24.01.2026 & 25.01.2026 |

**Note:**

- Online Classes shall be organized every Saturday and Sunday 3:00 pm to 5:00 pm over Zoom online meeting platform.

Registrar

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 09.05.2025 ರಿಂದ 11.05.2025ರವರೆಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
2. ಮೇ ಎರಡನೇ ವಾರದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ 2 ದಿನಗಳ "ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿಯನ್ನು "ಸೌಹಾರ್ದ ಸಹಕಾರಿ ಸೌಧ", ಮಾರ್ಗೋಸ ರಸ್ತೆ, ಮಲ್ಲೇಶ್ವರಂ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗುವುದು.
3. ಮೇ ತಿಂಗಳಿನಲ್ಲಿ ರಾಯಚೂರು ವಿಶ್ವವಿದ್ಯಾಲಯ ಹಾಗೂ ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಸಹಕಾರ ಹಾಗೂ ಯುವಕರು ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

# ‘ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಹೆಸರನ್ನು ‘ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ’ ಗದಗ ಎಂದು ಬದಲಾವಣೆಯ ಆದೇಶ

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ

**Mahatma Gandhi Rural Development and Panchayat Raj University, Gadag**

ಕೌಶ್ಯಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ, ನಾಗಾವಿ ಗದಗ–582103

Koushalya Vikas Bhavan, Grama Gangothri Campus, Nagavi, Gadag-582103

E-mail: ksrdpru@gmail.com Phone: 08372-200920,200922

**Ref. No.** RDPRU/56/GEN/2025 Date: 29.03.2025

## Notification

Sub: Change of name of ‘the Karnataka State Rural Development and Panchayat Raj University’ as ‘the Mahatma Gandhi Rural Development and Panchayat Raj University’ Gadag.

Ref:
1. Karnataka Extraordinary Gazette Notification No. SAMVYASHAE 12 SHASANA 2016, Dated: 26-07-2016.
2. Government Order No: ಗ್ರಾಅಪಂರಾ 232 ಜಿಪಸ 2024, ದಿನಾಂಕ:25-12-2024.
3. Karnataka Extraordinary Gazette Notification No. DPAL 11 SHASHANA 2025, Dated: 28-03-2025.

**“The Karnataka State Rural Development and Panchayat Raj University”,** Gadag, Karnataka, was established through “The Karnataka State Rural Development and Panchayat Raj University Act, 2016” (Karnataka Act No. 16 of 2016), and it has been recognized by the UGC under Section 2 (f) of the UGC Act.

Now, the Karnataka State Legislature has, through Karnataka Act No. 22 of 2025, amended the Principal Act to rename the University as **“the Mahatma Gandhi Rural Development and Panchayat Raj University”** vide Karnataka Gazette (Extraordinary) cited at Ref. (3) above.

The Regulations, Ordinances, Rules, Orders, Documents, Agreements, Contracts, MoU’s, Litigations, etc and movable and immovable properties of the Karnataka State Rural Development and Panchayat Raj University, Gadag in force or held hereinbefore shall be always deemed to be the Regulations, Ordinances, Rules, Orders, documents, etc and movable and immovable properties of the Mahatma Gandhi Rural Development and Panchayat Raj University, Gadag hereinafter, w.e.f Gazette Notification dated 28.03.2025. The University shall use the new Logo of the University released by the Government at Suvarna Soudha, Belagavi on 21.01.2025.

All correspondences by or to the University hereinafter shall be made as the **Mahatma Gandhi Rural Development and Panchayat Raj University, Gadag.**

(Dr. Suresh V. Nadagoudar)
Vice Chancellor (Acting) & Registrar



# ಶ್ರೇಷ್ಠ ಸಹಕಾರಿ, ಸಹಕಾರ ರತ್ನ
# ಕೆ.ಎನ್. ರಾಜಣ್ಣನವರ
# ಜನ್ಮದಿನದ ಅಮೃತ ಮಹೋತ್ಸವ ಸಂದರ್ಭದಲ್ಲಿ
# ಅಭಿನಂದನೆಗಳು – ಶುಭಾಶಯಗಳು

## ಸಹಕಾರ ಕ್ಷೇತ್ರದ ಅಭಿವೃದ್ಧಿ ಹರಿಕಾರ : ಶ್ರೀ ಕೆ ಎನ್ ರಾಜಣ್ಣನವರು



**- ಶ್ರೀ ಜಿ. ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ರಾಜ್ಯದ ಸಹಕಾರ ಸಚಿವ ಶ್ರೀ ಕೆ ಎನ್ ರಾಜಣ್ಣನವರಿಗೆ 75 ವರ್ಷಗಳು ತುಂಬಲಿರುವ ಈ ಸಂದರ್ಭದಲ್ಲಿ ಅವರಿಗೆ ಶುಭವನ್ನು ಹಾರೈಸುತ್ತೇನೆ. ದೇವರು ಅವರಿಗೆ ಆರೋಗ್ಯ ಆಯುಸ್ಸು ಹಾಗೂ ಹೆಚ್ಚಿನ ಅವಕಾಶಗಳು ದೊರಕುವಂತೆ ಅನುಗ್ರಹಸಲಿ ಎಂದು ಪ್ರಾರ್ಥಿಸುತ್ತೇನೆ. ಸಹಕಾರ ಸಚಿವ ಶ್ರೀ ಕೆ.ಎನ್. ರಾಜಣ್ಣನವರು ನಿರಂತರವಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅತ್ಯಂತ ಕ್ರಿಯಾಶೀಲ ಸಹಕಾರ ಸಚಿವರು.

ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಆಸಕ್ತಿಯಿರುವ ಶ್ರೀಯುತರು ಸೌಹಾರ್ದ ಸಹಕಾರಿ ಕ್ಷೇತ್ರ ಇದು ನಮ್ಮ ರಾಜ್ಯದ ಹೆಮ್ಮೆಯ ವಿಷಯ ಇದು ಇನ್ನೂ ಉತ್ತಮವಾಗಿ ಬೆಳೆಯಬೇಕು ಎಂದು ಅಭಿಪ್ರಾಯದವರಾಗಿದ್ದಾರೆ.

---

## ಸಹಕಾರಿ ಕ್ಷೇತ್ರ ಅಭಿವೃದ್ಧಿಯ ಕನಸುಗಾರ ಸಹಕಾರ ಸಚಿವ ಶ್ರೀ ಕೆ. ಎನ್. ರಾಜಣ್ಣ



**- ಶ್ರೀ ಎ ಆರ್ ಪ್ರಸನ್ನಕುಮಾರ, ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ರಾಜ್ಯದಲ್ಲಿ ಸಹಕಾರ ಕ್ಷೇತ್ರದ ಅಸ್ತಿತ್ವವನ್ನು ಮತ್ತು ಅದಕ್ಕೆ ವೇಗವನ್ನು ನೀಡಿದವರು, ಸಹಕಾರ ಕ್ಷೇತ್ರಕ್ಕೆ ಬಲವನ್ನು ತುಂಬಿದವರು, ನಮ್ಮ ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣನವರು. ಶ್ರೀಯುತರು ಹುಟ್ಟು ಸಹಕಾರಿ ವಿಶೇಷವಾಗಿ ತುಮಕೂರಿನ ಸಮಗ್ರ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಹರಿಕಾರರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ತಮ್ಮ ಸಹಕಾರಿ ಜೀವನ ಪ್ರಾರಂಭಿಸಿದ ಶ್ರೀ ಕೆ ಎನ್ ರಾಜಣ್ಣನವರು ತಾಲ್ಲೂಕಿನ ವಿವಿಧ ರೀತಿಯ ಸಹಕಾರ ಸಂಘಗಳಲ್ಲಿ ತೊಡಗಿಸಿ ಕೊಂಡು ನಂತರ ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿಯೂ ಸಹಕಾರ ಕ್ಷೇತ್ರವನ್ನು ಬೆಳೆಸಲು ಶ್ರಮಿಸಿದ್ದಾರೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆಯೂ ಅಪಾರ ಅಭಿಮಾನ ಹಾಗೂ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಅಪಾರ ಅನುಭವ ಹೊಂದಿದವರಾಗಿರುತ್ತಾರೆ. ವಿಶೇಷವಾಗಿ ಪತ್ತಿನ ಸಹಕಾರ ವಿಷಯದಲ್ಲಿ ಠೇವಣಿದಾರರ ಬಗ್ಗೆ ಅತ್ಯಂತ ಕಾಳಜಿ ವಹಿಸಿದ್ದಾರೆ.

ಶ್ರೀ ಕೆ. ಎನ್ ರಾಜಣ್ಣವರಗೆ 75 ವರ್ಷಗಳು ತುಂಬಿದ ಹಿನ್ನಲೆಯಲ್ಲಿ ಅವರಿಗೆ ಅನಂತ ಶುಭ ಹಾರೈಕೆಗಳನ್ನು ಸಲ್ಲಿಸುತ್ತೇನೆ. ಭಗವಂತನು ಅವರಿಗೆ ಹೆಚ್ಚಿನ ಶ್ರೇಯಸ್ಸು ಆಯುರಾರೋಗ್ಯ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

---

## ನೇರ ನುಡಿಯ ದಿಟ್ಟ ಹೆಜ್ಜೆಗಳ ಸಮರ್ಥ ಸಹಕಾರಿ ನಾಯಕರು ಸಹಕಾರಿ ಸಚಿವ ಶ್ರೀ ಕೆ. ಎನ್ ರಾಜಣ್ಣನವರು



**- ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಪ್ರಪ್ರಥಮವಾಗಿ ಸಹಕಾರ ಸಚಿವ ಶ್ರೀ ಕೆ. ಎನ್. ರಾಜಣ್ಣ ನವರಿಗೆ 75 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಅವರಿಗೆ ನನ್ನ ಹೃತ್ಪೂರ್ವಕ ಶುಭ ಹಾರೈಕೆಗಳನ್ನು ಸಲ್ಲಿಸುತ್ತೇನೆ. ಶ್ರೀಯುತ ಕೆ. ಎನ್ ರಾಜಣ್ಣನವರು ಹುಟ್ಟು ಸಹಕಾರಿ ನಾಯಕರು. ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರತಿಯೊಬ್ಬ ಸಹಕಾರಿಯನ್ನು ಸ್ಪಂದಿಸುವ ಸ್ವಭಾವವನ್ನು ರೂಢಿಸಿಕೊಂಡಿರುವುದು ಸಹಕಾರಿಗಳಿಗೆ ಅತ್ಯಂತ ಸಂತೋಷದ ವಿಷಯ.

ಶ್ರೀ ಕೆ. ಎನ್ ರಾಜಣ್ಣನವರ ನೇತೃತ್ವದಲ್ಲಿ ತುಮಕೂರು ಜಿಲ್ಲೆಯ ಸಮಗ್ರ ಸಹಕಾರ ಕ್ಷೇತ್ರ ವಿಶೇಷವಾಗಿ ಕೃಷಿಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಯಾವುದೇ ಕಳಂಕಗಳಿಲ್ಲದೇ ಕೆಲಸ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ. ರಾಜ್ಯಮಟ್ಟದಲ್ಲಿ ಅನೇಕ ಸಹಕಾರಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಮಾರಾಟ ಸಹಕಾರ ಮಹಾ ಮಂಡಳ ಹೀಗೆ ಅನೇಕ ಸಹಕಾರಿ ಸಂಸ್ಥೆಗಳನ್ನು ಮುನ್ನೆಡೆಸಿದ ಅನುಭವ ಅವರದ್ದಾಗಿದೆ. ಶ್ರೀಯುತ ಕೆ. ಎನ್ ರಾಜಣ್ಣನವರು ಸಹಕಾರಿ ಕ್ಷೇತ್ರದಲ್ಲಿ ಪ್ರತಿ ಸಹಕಾರಿಯು ಇಷ್ಟಪಡುವ ಸಹಕಾರಿ ನಾಯಕ.

---

## ಸಹಕಾರ ಸಚಿವರೆಂದರೆ ಶ್ರೀ ಕೆ. ಎನ್ ರಾಜಣ್ಣನವರ ಹಾಗೇ ಇರಬೇಕು



**- ಶ್ರೀ ಗುರುನಾಥ ಜ್ಯಾಂತಿಕರ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ರಾಜ್ಯದಲ್ಲಿ ಅನೇಕ ವರ್ಷಗಳ ನಂತರ ಸಹಕಾರ ಕ್ಷೇತ್ರದಿಂದ ಬಂದವರು ಸಹಕಾರ ಸಚಿವರಾಗಿರುವುದು ಸಹಕಾರ ಕ್ಷೇತ್ರಕ್ಕೆ ಗೌರವ ತಂದು ಕೊಟ್ಟಿದೆ. ಸಹಕಾರ ಕ್ಷೇತ್ರವನ್ನು ಸಮರ್ಥವಾಗಿ ನಡೆಸಲು ಒಬ್ಬ ಸಮರ್ಥ ಸಹಕಾರಿ ನಾಯಕರನ್ನು ಆಯ್ಕೆ ಮಾಡಿದಂತಾಗಿದೆ. ಅವರ ಸಹಕಾರಿ ಕ್ಷೇತ್ರದ ಅನುಭವದಿಂದ ಸಹಕಾರಿ ಕ್ಷೇತ್ರ ಸಮರ್ಥ ನಾಯಕತ್ವವನ್ನು ಪಡೆದಂತಾಗಿದೆ. ಶ್ರೀಯುತ ಕೆ. ಎನ್ ರಾಜಣ್ಣನವರು ರಾಜಕೀಯದಲ್ಲಿದ್ದರೂ ಸಹಕಾರ ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡುವುದಾಗಿ ಅವರ ಹೇಳಿಕೆಗೆ ಸಹಕಾರಿಗಳು ಹೆಮ್ಮೆಪಡುವಂತಾಗಿದೆ. ಶ್ರೀಯುತ ಕೆ. ಎನ್ ರಾಜಣ್ಣನವರಿಗೆ 75 ವರ್ಷಗಳು ಆಗಿರುವ ಈ ಸಂದರ್ಭದಲ್ಲಿ ಅವರಿಗೆ ಶುಭ ಹಾರೈಕೆಗಳನ್ನು ಸಲ್ಲಿಸುತ್ತೇನೆ. ಅವರಲ್ಲಿರುವ ಪ್ರತಿಯೊಬ್ಬ ಸಹಕಾರಿಗಳ ಆಶೋತ್ತರಗಳಿಗೆ ಸ್ಪಂದಿಸುವ ಅವರ ಮಾನಸಿಕ ಎಲ್ಲಾ ಸಹಕಾರಿಗಳು ಅನುಕರಣೀಯ ಹಾಗೂ ಮಾದರಿಯಾಗಿದೆ.

# 75 ನೇ ಹುಟ್ಟು ಹಬ್ಬದ ಶುಭಾಶಯಗಳು



## ಸಹಕಾರಿ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದವರು ಸಹಕಾರ ಸಚಿವ ಶ್ರೀ ಕೆ. ಎನ್ ರಾಜಣ್ಣನವರು

**- ಶ್ರೀ ಮನೋಹರ್ ಮಸ್ಕಿ, ಸಂಸ್ಥಾಪಕ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಸಹಕಾರಿ ಕ್ಷೇತ್ರದ ಅಭಿವೃದ್ಧಿ ಸಹಕಾರಿಗಳಿಂದಲೇ ಸಾಧ್ಯ ಸಹಕಾರಿ ಕ್ಷೇತ್ರವನ್ನು ಮುನ್ನಡೆಸಬೇಕಾದ ಜವಾಬ್ದಾರಿ ಸಹಕಾರ ಸಚಿವರಿಗೆ ಇರುತ್ತದೆ. ಈ ಬಾರಿ ಅನುಭವಿ ಸಹಕಾರಿಯಾಗಿರುವ ಹಿರಿಯ ಸಹಕಾರಿ ಸಚಿವರಾಗಿರುವುದು ಸಹಕಾರಿಗಳಿಗೆ ಸಂತೋಷ ಹಾಗೂ ಸಮಾಧಾನವನ್ನು ತಂದಿದೆ. ಶ್ರೀಯುತ ಕೆ. ಎನ್ ರಾಜಣ್ಣನವರಿಗೆ ಜಿಲ್ಲಾ ಬ್ಯಾಂಕ್ ಅಧ್ಯಕ್ಷರಾಗಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವದ ಹಿನ್ನಲೆಯಲ್ಲಿ ತಳಮಟ್ಟದ ಪ್ರಾಥಮಿಕ ಸಹಕಾರ ಸಂಘ ಸಂಸ್ಥೆಗಳ ಕಷ್ಟ ಸುಖಗಳನ್ನು ಬಲ್ಲವರಾಗಿದ್ದಾರೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆಯೂ ಅಪಾರ ಕಾಳಜಿಯನ್ನು ಹೊಂದಿದ್ದಾರೆ. ಅವರ ಅಭಿಮಾನಿಗಳೆಲ್ಲ ಸೇರಿ ಅವರ ಹೆಸರಿನಲ್ಲಿ ಒಂದು ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸಿರುವುದು ಇದಕ್ಕೆ ನಿದರ್ಶನ. ಶ್ರೀಯುತರು ದಿಟ್ಟ ಹಾಗೂ ಧೀಮಂತ ನಾಯಕತ್ವವನ್ನು ನೀಡಿದ್ದಾರೆ. ಅವರಿಗೆ 75 ವರ್ಷಗಳು ತುಂಬಿದ ಈ ಸಂದರ್ಭದಲ್ಲಿ ಅವರಿಗೆ ನನ್ನ ಶುಭ ಹಾರೈಕೆಗಳು.

## ಸಹಕಾರಿ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದವರು ಸಹಕಾರ ಸಚಿವ ಶ್ರೀ ಕೆ. ಎನ್ ರಾಜಣ್ಣನವರು

**- ಶ್ರೀ ಜಗದೀಶ ಕವಟಗಿಮಠ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ.., ಬೆಂಗಳೂರು.**



ದೇಶದ ಸಹಕಾರಿ ನಕ್ಷೆಯಲ್ಲಿ ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ವಿಶೇಷ ಸ್ಥಾನವನ್ನು ಲಭಿಸುವಂತೆ ಮಾಡಿದ ಕೀರ್ತಿ ಶ್ರೀ ಕೆ. ಎನ್ ರಾಜಣ್ಣನವರಿಗೆ ಸಲ್ಲುತ್ತದೆ. ಸಹಕಾರಿ ನಾಯಕತ್ವದ ಮಾದರಿ ಶ್ರೀ ಕೆ. ಎನ್ ರಾಜಣ್ಣನವರು. ಈ ಹಿಂದೆ ಸಹಕಾರ ಕ್ಷೇತ್ರವನ್ನು ಅನೇಕರು ಮುನ್ನೆಡೆಸಿದ್ದಾರೆ. ಆದರೆ ಈ ಕ್ಷೇತ್ರ ಸಾಧನೆ, ಈ ಕ್ಷೇತ್ರದ ಮಹತ್ವ ಈ ಕ್ಷೇತ್ರಕ್ಕೆ ಇರುವ ಅವಕಾಶಗಳನ್ನು ಜನಸಾಮಾನ್ಯರಿಗೆ ತಿಳಿಸುವ ಮಹತ್ವ ಕಾರ್ಯವನ್ನು ಶ್ರೀ ಕೆ. ಎನ್ ರಾಜಣ್ಣನವರು ಮಾಡುತ್ತಿರುವುದು ನಮಗೆಲ್ಲ ಸಂತೋಷ ತಂದಿದೆ. ಅವರಿಗೆ 75 ವರ್ಷಗಳು ತುಂಬಿದ ಈ ಸಂದರ್ಭದಲ್ಲಿ ಅವರಿಗೆ ತುಂಬು ಹೃದಯದ ಶುಭ ಹಾರೈಕೆಗಳು ದೇವರು ಅವರಿಗೆ ಆಯೂರ್ಆರೋಗ್ಯ ಹಾಗೂ ಹೆಚ್ಚಿನ ಅವಕಾಶಗಳನ್ನು ನೀಡಲಿ ಎಂದು ಹಾರೈಸುತ್ತೇನೆ.

## ಹುಟ್ಟು ಸಹಕಾರಿ ಸಹಕಾರ ಸಚಿವ ಶ್ರೀ ಕೆ.ಎನ್ ರಾಜಣ್ಣ

**- ಶ್ರೀ ಹೆಚ್. ವಿ ರಾಜೀವ್, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು, ಕ.ರಾ.ಸೌ.ಸಂ.ಸ.ನಿ. ಬೆಂಗಳೂರು**



ಕೆಳೆದ 4 ದಶಕಗಳಿಂದ ಸಹಕಾರ ಕ್ಷೇತ್ರದಲ್ಲಿ ಪಿಸಿಎ ಬಡಗೂಡಿಯ ರಾಜ್ಯ ಮಟ್ಟದ ಸಂಸ್ಥೆಯವರೆಗೆ ನಿರಂತರವಾಗಿ ಸಹಕಾರ ಸಚಿವರಾಗಿರುವುದು ಅಬಿನಂಧನಾರ್ಹ. ವಿಶೇಷವಾಗಿ ಪ್ರಾಥಮಿಕ ಸಹಕಾರಿ ಇರಬಹುದು ಡಿಸಿಸಿ ಬ್ಯಾಂಕ್ ಅಥವಾ Apex 3 tier system ನಲ್ಲಿ ಪ್ರಾತಿನಿಧ್ಯ ಇರುವವರು ಸಹಕಾರ ಸಚಿವರಾಗಿರುವುದು ಇನ್ನೊಂದು ವಿಶೇಷ. ಈ ಎಲ್ಲಾ ಸಂಸ್ಥೆಗಳು ಕೃಷಿಗೆ ಬೆನ್ನೆಲಬುವಾಗಿರುವಂತಹ ಆರ್ಥಿಕತೆ ಮುಂದಿನ ಸಂಸ್ಥೆಗಳು. ಈ ರಾಜ್ಯದಲ್ಲಿ ಶೇಕಡಾ 60-65 ಜನರು ಕೃಷಿಕರಾಗಿವುದರಿಂದ ಅವರ ಅಭಿವೃದ್ಧಿಯನ್ನು ಗುರಿಯಾಗಿರಿಸಿ ಹಗಲಿರುಳು ಸಹಕಾರಿ ಕ್ಷೇತ್ರದ ಬಲಸಂವರ್ಧನೆಗೆ ಶ್ರಮಿಸುತ್ತಿರುವುದು ಸಹಕಾರಿಗಳಿಗೆ ಅವರ ನೇತೃತ್ವದಲ್ಲಿ ಸಹಕಾರ ಕ್ಷೇತ್ರ ಹೆಚ್ಚಿನ ಅಭಿವೃದ್ಧಿಯತ್ತ ಸಾಗುತ್ತದೆ. ಸಹಕಾರ ಸಚಿವ ಶ್ರೀ ಕೆ.ಎನ್ ರಾಜಣ್ಣನವರಿಗೆ 75ರ ಹರೆಯ ದೇವರು ಅವರಿಗೆ ಆಯುರಾರೋಗ್ಯ ನೀಡಿ ಅವರ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

## ಶ್ರೇಷ್ಠ ಸಹಕಾರಿ, ಸಮರ್ಥ ಆಡಳಿತಗಾರ ಸಹಕಾರಿ ಹಾಗೂ ಧೀಮಂತ ನಾಯಕ ನಮ್ಮ ಸಹಕಾರ ಸಚಿವರು

**- ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ. ಬೆಂಗಳೂರು**



ರಾಜ್ಯದ ಸಹಕಾರ ಸಚಿವರಾದ ಶ್ರೀ ಕೆ. ಎನ್ ರಾಜಣ್ಣನವರಿಗೆ 75 ವಸಂತಗಳು ತುಂಬಿದ ಹಿನ್ನಲೆಯಲ್ಲಿ ಅವರಿಗೆ ನನ್ನ ಶುಭಾಶಯಗಳು ಮತ್ತು ರಾಜ್ಯದ ಎಲ್ಲಾ ಸಹಕಾರಿಗಳ ಶುಭಾಶಯಗಳು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕನಾಗಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಸಹಕಾರ ಸಚಿವರ ಸಾಲಿನಲ್ಲಿ ಶ್ರೀ ಕೆ. ಎನ್ ರಾಜಣ್ಣನವರು ಅಗ್ರಸ್ಥಾನದಲ್ಲಿದ್ದಾರೆ. ಅಧಿಕಾರಿಗಳಿಗೆ ಅವರು ಸ್ಪಂದಿಸುವ ರೀತಿ ಆದೇಶಗಳನ್ನು ಜಾರಿ ಮಾಡುವ ಕಲೆ, ಸಹಕಾರಿ ಕ್ಷೇತ್ರದ ಬಗ್ಗೆ ಅವರ ಆಶಯ, ಕಾರ್ಯ ವೈಖರಿ ಅಭಿವೃದ್ಧಿಯ ಜವಾಬ್ದಾರಿ ಎಲ್ಲದರಲ್ಲೂ ಶ್ರೀ ಕೆ. ಎನ್ ರಾಜಣ್ಣನವರು ಅಗ್ರ ಸ್ಥಾನದಲ್ಲಿರುತ್ತಾರೆ. ಶ್ರೀಯುತರು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವು ಸಹಕಾರ ಕ್ಷೇತ್ರದ ಬಗ್ಗೆ ಅವರು ಹೊಂದಿರುವ ಕಾಳಜಿಗೆ ನಿದರ್ಶನವಾಗಿದೆ. ದೇವರು ತಮಗೆ ಆಯುರಾರೋಗ್ಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

# ಹಿರಿಯ ಸಹಕಾರಿ ಹಾಗೂ ರಾಜ್ಯದ ಸಹಕಾರಿ ಸಚಿವ ಶ್ರೀ ಕೆ.ಎನ್. ರಾಜಣ್ಣನವರ ಜೀವನ ಸಾಧನೆ ಉದಯೋನ್ಮುಖ ನಾಯಕರಿಗೆ ಮಾದರಿ ಹಾಗೂ ಅನುಕರಣೀಯ.

**– ಶ್ರೀ ಶಂಕರ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು**



"ಓರ್ವ ವ್ಯಕ್ತಿ ಮಾಡುವ ಕಾರ್ಯವು ಆತನು ಬರೆದುಕೊಂಡ ಆತನ ವ್ಯಕ್ತಿ ಚಿತ್ರಣವೇ ಆಗಿರುತ್ತದೆ." ಎನ್ನುವ ಅರ್ಥ ಬರುವ ಈ ಮಾತು ಶ್ರೀ ಕೆ.ಎನ್. ಆರ್.ರವರ ವ್ಯಕ್ತಿತ್ವಕ್ಕೆ ಹೋಲಿಸಿದರೆ ತಪ್ಪಾಗಲಾರದು.

ಕೆ.ಎನ್.ಆರ್. ಈ ಮೂರು ಅಕ್ಷರಗಳಲ್ಲಿ ಅದೇನೋ ಮೋಡಿ ಇದೆ. ಅಚ್ಚರಿ ಬೆರಗಿದೆ. ಅದೇಕೋ ಶ್ರೀ ಕೆ.ಎನ್.ಆರ್.ರವರನ್ನು ನೋಡಿದಾಗೆಲ್ಲಾ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಾಯಿ ಪಟೇಲ್ ರವರ ನೆನಪಾಗುತ್ತದೆ. ಆ ಉಕ್ಕಿನ ಮನುಷ್ಯನ ಧೈರ್ಯ, ಕಡುಗಲಿತನ ಕಣ್ಣು ಕಟ್ಟಿದಂತಾಗುತ್ತದೆ. ವೈರಿಗಳು ಒಪ್ಪಿಕೊಂಡ ಅಭಿಪ್ರಾಯಕ್ಕೆ ಹೆಚ್ಚು ಬೆಲೆ. ಸರ್ವಜನಪ್ರಿಯತೆ ಕೆಲವೊಮ್ಮೆ ಉತ್ತಮ ನಾಯಕತ್ವದ ಪ್ರಮುಖ ಲಕ್ಷಣವಲ್ಲ. ಆದ್ದರಿಂದಲೇ ಹೇಳಿದ್ದು ಶ್ರೀ ಕೆ.ಎನ್.ಆರ್.ರವರ ನಾಯಕತ್ವ ಕಟ್ಟಾ ಕೆಚ್ಚಿನದು. ಕಡುಗಲಿತನವಿದು. ಅವರ ವ್ಯಕ್ತಿತ್ವದಲ್ಲಿ ಒಂದು ಮಾಂತ್ರಿಕ ಶಕ್ತಿ ಇದೆ. ಸಂಗಡ ಪ್ರಬಲ ಇಚ್ಛಾಶಕ್ತಿಗಳು ಅವರಲ್ಲಿ ಮನೆ ಮಾಡಿಕೊಂಡಿದೆ.

13–04–1951 ರಂದು ತುಮಕೂರಿನ ಕ್ಯಾತಸಂದ್ರದಲ್ಲಿ ದಿವಂಗತ ನಂಜಪ್ಪ ಮತ್ತು ದಿವಂಗತ ಲಕ್ಷ್ಮೀ ದೇವಮ್ಮ ಈ ದಂಪತಿಗಳ ಸುಪುತ್ರನಾಗಿ ಜನಿಸಿ ಬಿ.ಎಸ್.ಸಿ. ಪದವಿಯನ್ನು ಪಡೆದು ತುಮಕೂರು ಕಾನೂನು ಮಹಾವಿದ್ಯಾಲಯದಲ್ಲಿ ಕಾನೂನು ಪದವಿ ಪಡೆದು ವಕೀಲಿ ವೃತ್ತಿ ಪ್ರಾರಂಭಿಸಿದರು. ರೈತ ಕುಟುಂಬದ ಹಿನ್ನಲೆಯ ಶ್ರೀ ರಾಜಣ್ಣನವರು ಗ್ರಾಮೀಣ ಜನರ ಕಷ್ಟ ಸುಖಗಳಿಗೆ ಚೆನ್ನಾಗಿ ಅರಿತು ಸ್ಪಂದಿಸುವ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. 1969 ರಲ್ಲಿ ಕಾಂಗ್ರೇಸ್ ಕಾರ್ಯಕರ್ತರಾಗಿ ತಮ್ಮ ರಾಜಕೀಯ ಪ್ರವೇಶವನ್ನು ಮಾಡಿದ ಶ್ರೀ ರಾಜಣ್ಣನವರು ಪಕ್ಷದ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಬಹಳ ವರ್ಷ ಸೇವೆ ಸಲ್ಲಿಸಿದ್ದಾರೆ. ನಂತರ 1998 ರಲ್ಲಿ ಕರ್ನಾಟಕ ವಿಧಾನಪರಿಷತ್ ಸದಸ್ಯರಾಗಿ ದಾಖಲೆಯ ಬಹುಮತದಿಂದ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಂಡಿದ್ದು ಒಂದು ಐತಿಹಾಸಿಕ ಸಂಗತಿ. ತದನಂತರ ಬೆಳ್ಳಾವಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಗೊಂಡು ಮುಂದಿನ ಚುನಾವಣೆಯಲ್ಲಿ ಅತ್ಯಂತ ಹಿಂದುಳಿದ ಮಧುಗಿರಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಗೊಂಡಿರುವುದು ಎಲ್ಲರಿಗೂ ತಿಳಿದ ವಿಷಯ. ರಾಜಕೀಯ ಏಳು ಬೀಳುಗಳನ್ನು ಸಮರ್ಥವಾಗಿ ಎದುರಿಸಿ ಸೇವೆಯನ್ನೇ ಮುಖ್ಯ ಗುರಿಯನ್ನಾಗಿ ಹೊಂದಿರುವ ಶ್ರೀ ಕೆ.ಎನ್.ಆರ್.ರವರಿಗೆ ಹೆಚ್ಚು ಆಕರ್ಷಣೀಯ ಕ್ಷೇತ್ರವೆಂದರೆ ಸಹಕಾರ ಕ್ಷೇತ್ರ. ತುಮಕೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಂಘದ ಮೂಲಕ ಪಾದಾರ್ಪಣೆ ಮಾಡಿದ ಶ್ರೀ ಕೆ.ಎನ್.ಆರ್.ರವರು ತುಮಕೂರು ಡಿ.ಸಿ.ಸಿ. ಬ್ಯಾಂಕ್, ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ನಾಫೆಡ್ ನ್ಯೂಡೆಲ್ಲಿ, ಸಹಕಾರ ಮಾರಾಟ ಮಹಾಮಂಡಳ ಬೆಂಗಳೂರು ಇದರ ನಿರ್ದೇಶಕರುಗಳಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಅನೇಕ ಉಲ್ಲೇಖನೀಯ ಕಾರ್ಯಕ್ರಮಗಳನ್ನು ಕೈಗೊಂಡಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಮುಖ್ಯವಾಗಿ ತುಮಕೂರು ಡಿ.ಸಿ.ಸಿ. ಬ್ಯಾಂಕಿನ ಆಡಳಿತ ಸೂತ್ರ ಇವರ ಕೈಗೆ ಬರುವವರೆಗೂ ಅದೊಂದು ನಿಜವಾಗಿ ದೇವೇಂದ್ರನ ಹಿಡಿತ ತಪ್ಪಿದ ಐರಾವತ ಆಗಿತ್ತು. ಆದರೆ ಇವರ ಸಾರಥ್ಯದಲ್ಲಿ ವಾಮನ ಗಾತ್ರದ ಡಿ.ಸಿ.ಸಿ. ಬ್ಯಾಂಕನ್ನು ತ್ರಿವಿಕ್ರಮ ಸ್ವರೂಪಕ್ಕೆ ರೂಪಾಂತರಿಸುವುದಕ್ಕೆ ಪಣತೊಟ್ಟು ಯಶಸ್ವಿಯಾದರು. ಅವರು ತಮ್ಮ ಅಧ್ಯಕ್ಷೀಯ ಅವಧಿಯಲ್ಲಿ ಬ್ಯಾಂಕಿನ ಸರ್ವತೋಮುಖ ಏಳಿಗೆಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳು ಹತ್ತು ಹಲವಾರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

1) ತುಮಕೂರು ಜಿಲ್ಲೆ ತೀವ್ರ ಬರಗಾಲ ಎದುರಿಸುತ್ತಿದ್ದಾಗ ಸರ್ಕಾರ ಪ್ರಾರಂಭಿಸಿದ ಗೋಶಾಲೆಗಳಿಗೆ ಡಿ.ಸಿ.ಸಿ. ಬ್ಯಾಂಕಿನ ವತಿಯಿಂದ ರೈತರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ಊಟ ನೀಡುವುದರ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ.

2) ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ ಕೀರ್ತಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರಿಗೆ ಸಲ್ಲುತ್ತದೆ. ಜಿಲ್ಲೆಯ ರೈತರ ಮಕ್ಕಳಿಗೆ ಪ್ರತಿವರ್ಷ ಪ್ರತಿಭಾ ಪುರಸ್ಕಾರವನ್ನು ನೀಡುವ ಮಾದರಿ ಯೋಜನೆಯನ್ನು ಜಾರಿಗೊಳಿಸಿ ಗ್ರಾಮೀಣ ಪ್ರದೇಶದ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುತ್ತಿರುವ ಶ್ರೀ

ಕೆ.ಎನ್. ರಾಜಣ್ಣನವರ "ಸಾಮಾಜಿಕ ಕಳಕಳಿ" ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇದಲ್ಲದೆ ಇನ್ನೂ ಅನೇಕ ಕ್ರಾಂತಿಕಾರಿ ಬದಲಾವಣೆಯನ್ನು ಸಹಕಾರಿ ಕ್ಷೇತ್ರದಲ್ಲಿ ಮಾಡಿದ ಕೀರ್ತಿ ಶ್ರೀ ರಾಜಣ್ಣನವರಿಗೆ ಸಲ್ಲುತ್ತದೆ. ಅವರು ಶಾಸಕರಾಗಿ ಇಂದು ಕರ್ನಾಟಕ ರಾಜ್ಯದ ಸಹಕಾರ ಸಚಿವ ಪಟ್ಟವನ್ನು ಅಲಂಕ-ರಿಸಿದರೂ ನಾನು ಮೊದಲು ಸಹಕಾರಿ ಆಮೇಲೆ ಶಾಸಕ, ಸಚಿವ ಎಂಬ ಮಾತು ಅವರಿಗೆ ಈ ಕ್ಷೇತ್ರದ ಮೇಲೆ ಇರುವ ಅಗಾಧ ಪ್ರೀತಿಯ ದ್ಯೋತಕವಾಗಿದೆ.

ಮನುಷ್ಯನಜೀವನ ಒಂದೇ ತೆರನಾಗಿ ಇರುವುದಿಲ್ಲ. ಅಲ್ಲಿ ಏಳು ಬೀಳುಗಳೆಲ್ಲಾ ಸಾಮಾನ್ಯ. ಆದರೆ ಪ್ರಜ್ಞಾವಂತ ವ್ಯಕ್ತಿ ಆ ಯಾವುದೇ ಅಡೆ-ತಡೆ, ಏಳು-ಬೀಳು ಬಂದರೂ ಧೃತಿಗೆಡುವುದಿಲ್ಲ. ಜೀವನವನ್ನು ಬಂದಂತೆ ಸ್ವೀಕರಿಸಿ ಅದನ್ನು ಸಮರ್ಥ ರೀತಿಯಲ್ಲಿ ಸಾಗಿಸಿಕೊಂಡು ಹೋಗುತ್ತಾರೆ. ಇದು ಒಬ್ಬ ಪ್ರಜ್ಞಾವಂತ ಧೀಶಕ್ತಿಯ ಮನುಷ್ಯನ ಲಕ್ಷಣ.

ಒಮ್ಮೆ ಅವರು ಮಧುಗಿರಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಸೋಲನ್ನು ಎದುರಿಸಬೇಕಾಯಿತು. ಆಗ ಒಂದು ಘಟನೆ ನನ್ನ ನೆನಪಿಗೆ ಬರುತ್ತದೆ. ಫಲಿತಾಂಶದ ನಂತರ ಅವರು ಏಕಾಂಗಿಯಾಗಿ ಡಿ.ಸಿ.ಸಿ. ಬ್ಯಾಂಕಿಗೆ ಬಂದಾಗ ನಾನು ಒಂದು ಆಂಗ್ಲಭಾಷೆಯ ನುಡಿಯನ್ನು ಅವರ ಮುಂದಿಟ್ಟೆ. Sir, though you have lost the battle but in future you will certainly win the war. (series of battle is called war) ಆಗ ಅವರ ಮುಖದ ಮೇಲೆ ನಗೆ ಬೀರಿತು. ತದನಂತರ ಅವರು ಎಲ್ಲಾ ಚುನಾವಣೆಗಳಲ್ಲಿಯೂ ವಿಜಯ ಸಾಧಿಸಿ ಇಂದು ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಅಗ್ರಸ್ಥಾನ ಗಳಿಸಿ ಸಚಿವರಾಗಿರುವುದು ಸಹಕಾರಿಗಳು ಹೆಮ್ಮೆ ಪಡುವ ವಿಷಯ. ಅಲ್ಲದೇ ಅವರ ಶಬ್ದದಲ್ಲೇ ಹೇಳಬೇಕಾದರೆ ನನಗೆ ಜೀವನದಲ್ಲಿ ಒಮ್ಮೆಯಾದರೂ ಸಹಕಾರ ಸಚಿವನಾಗಬೇಕು, ಅಲ್ಲದೆ ತದನಂತರ ಒಮ್ಮೆಯಾದರೂ ಭಾರತದ ಸಂಸತ್ ಭವನವನ್ನು ಸಂಸದನಾಗಿ ಸಚಿವನಾಗಿ ಪ್ರವೇಶಿಸಬೇಕು ಎಂದು ಹೇಳಿರುವುದು ನನ್ನ ಸ್ಮೃತಿಪಟಲದ ಮೇಲೆ ಇನ್ನೂ ಅಚ್ಚಳಿಯದೆ ನಿಚ್ಚಳವಾಗಿ ನಿಂತಿದೆ.

ದೀನದಲಿತರ ಆಶಾಕಿರಣವಾಗಿ ಹಾಗೂ ಬಡವರ ಬಂಧುವಾಗಿ ಶ್ರೀ ಕೆ.ಎನ್.ಆರ್.ರವರು ಬಡವರ ಧ್ವನಿಯಾಗಿ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಹೋರಾಟ ಮಾಡುತ್ತಿರುವುದು ನನಗೆ ಅತ್ಯಂತ ಮೆಚ್ಚುಗೆ ಎನಿಸಿದೆ. ಅಲ್ಲದೆ ಅವರ ಪರೋಪಕಾರ ಗುಣ ಮತ್ತು ಆದರಾತಿಥ್ಯಗುಣ ಅವರ ವ್ಯಕ್ತಿತ್ವಕ್ಕೆ ಮೆರಗು ನೀಡಿದೆ.

ಜೈ ಹಿಂದ್ ಜೈ ಸಹಕಾರ

## ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ಇವರನ್ನು ಭೇಟಿ ನೀಡಿದ ಛಾಯಚಿತ್ರಗಳು









## ಏಪ್ರಿಲ್ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 03 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಏಪ್ರೀಲ್ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿ ನೇಮಕವಾಗಿರುವ ಕುರಿತು:**

1. ಭಾಗ್ಯಲಕ್ಷ್ಮೀ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಅರಗಿನಮನೆ, ತಾ॥ ಸಿಂಧನೂರು.
2. ನಿವೇದಿತಾ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಸಾಸಲಮರಿ, ತಾ॥ ಸಿಂಧನೂರು.
3. ಶಬರಿ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಕುರಕುಂದಾ, ತಾ॥ ಸಿಂಧನೂರು.
4. ಶ್ರೀ ಶಾರದ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಸಾಸಲಮರಿ, ತಾ॥ ಸಿಂಧನೂರು.
5. ಶಿವಜ್ಯೋತಿ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಸಾಸಲಮರಿ ತಾ॥ ಸಿಂಧನೂರು.
6. ವಿಶಾಲ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಹಂಚಿನನಾಳ ಕ್ಯಾಂಪ್, ತಾ॥ ಸಿಂಧನೂರು.
7. ಭವಾನಿ ಮಹಿಳಾ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ರೌಡಕುಂದಾ. ತಾ॥ ಸಿಂಧನೂರು.
8. ಭುವನೇಶ್ವರಿ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ವಿರುಪಾಪುರ, ತಾ॥ ಸಿಂಧನೂರು.
9. ಪ್ರಗತಿ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಧಡ್ಡೇಸುಗೂರು, ತಾ॥ ಸಿಂಧನೂರು.
10. ತಾಯಮ್ಮ ಮಹಿಳಾ ಸ್ವ-ಸಹಾಯ ಸಹಕಾರಿ ನಿ.,ಸಿಂಧನೂರು.
11. ಮಹಾಲಕ್ಷ್ಮೀ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಅರಳಹಳ್ಳಿ, ತಾ॥ ಸಿಂಧನೂರು.
12. ದೀಪಾ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಗೆಜ್ಜಲಾಗಟ್ಟಾ, ತಾ॥ಲಿಂಗಸಗೂರು.
13. ಚೈತನ್ಯ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಮಸ್ಕಿ, ತಾ॥ ಮಸ್ಕಿ.
14. ಆದರ್ಶ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಗುಡುದೂರು, ತಾ॥ ಮಸ್ಕಿ.
15. ಜ್ಯೋತಿ ಮಹಿಳಾ ಸ್ವ-ಸಹಾಯ ಸಹಕಾರಿ ನಿ., ಚಿಕ್ಕಕಡಬೂರು, ತಾ॥ ಮಸ್ಕಿ.
16. ಚೇತನ ಸ್ವಶಕ್ತಿ ಸ್ವ-ಸಹಾಯ ಸಹಕಾರಿ ನಿ., ಮೇದಿಕಿನಾಳ, ತಾ॥ ಮಸ್ಕಿ

ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು ಸಿಂಧನೂರು ಇವರು ದಿನಾಂಕ 25.03.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ.

**3. ಶ್ರೀ ಮುನೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ (ಎಸ್.ಎಮ್.ಎನ್ ) ಸಹಕಾರಿಯ ಸಮಾಪನಾಧಿಕಾರಿಯ ಆದೇಶವನ್ನು ಹಿಂಪಡೆದಿರುವ ಕುರಿತು.**

ಶ್ರೀ ಮುನೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ (ಎಸ್.ಎಮ್.ಎನ್) ಸಹಕಾರಿಗೆ ಈ ಹಿಂದೆ ಆದೇಶವಾಗಿದ್ದ ಸಮಾಪನಾಧಿಕಾರಿಯ ನೇಮಕ ಆದೇಶವನ್ನು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಬೆಳಗಾವಿ ಪ್ರಾಂತ, ಬೆಳಗಾವಿ ಇವರು ದಿನಾಂಕ 24.03.2025ರಂದು ಹಿಂಪಡೆದಿರುತ್ತಾರೆ.




**ರಾಯಚೂರು** : ದಿನಾಂಕ 28.04.2025 ಸೋಮವಾರ ಬೆಳಗ್ಗೆ 10 ಗಂಟೆಗೆ ಗಂಟೆಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮುಂಜಾವು ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ್‍ಯಾಕಲೇ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜ ರವರು ಭೇಟಿ ನೀಡಿ ಸುಸ್ತಿ ಸಾಲ ಹೆಚ್ಚಿಗೆ ಆಗಿರುವ ಕುರಿತು ಮಾಹಿತಿ ಪಡೆದುಕೊಂಡು, ಸಾಲ ವಸೂಲಾತಿ ಸಂಬಂಧ ಕೆಲವು ಸಲಹೆ-ಸೂಚನೆಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಶ್ರೀ ಭ್ರಮರಾಂಬ ಸಹಕಾರಿಯ ಬೆಳ್ಳಿ ಹಬ್ಬದ ಅಂಗವಾಗಿ ಸಹಕಾರಿಗಳಿಗೆ ಕಾರ್ಯಾಗಾರ : ವಿವಿಧ ಸಹಕಾರಿಗಳು ಭಾಗಿ




**ರಾಯಚೂರು :** ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಸ್ಕಿ ಜಿ: ರಾಯಚೂರು ತನ್ನ ಬೆಳ್ಳಿ ಹಬ್ಬದ ನಿಮಿತ್ತ ದಿನಾಂಕ 04–05–2025 ಭಾನುವಾರ ದಂದು ಬೆಳಿಗ್ಗೆ 9.30 ಗಂಟೆಗೆ ಶ್ರೀ ಭ್ರಮರಾಂಬ ದೇವಸ್ಥಾನ, ಮಸ್ಕಿಯಲ್ಲಿ ಕಲ್ಯಾಣ–ಕರ್ನಾಟಕ ಭಾಗದ ಸಹಕಾರಿಗಳಿಗೆ 'ಕಾರ್ಯಾಗಾರ'ವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಾಗಾರದಲ್ಲಿ ಸುಮಾರು 100 ಸಹಕಾರಿಗಳಿಂದ 150 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಾಗಾರದ ಅಧ್ಯಕ್ಷತೆಯನ್ನು ಶ್ರೀ ಭ್ರಮರಾಂಬ ಸಹಕಾರಿಯ ಅಧ್ಯಕ್ಷರಾದ ಡಾ॥ ಶಿವಶರಣಪ್ಪ ಇತ್ಲಿ ಯವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾದ ಶ್ರೀ ಎಸ್.ಎಸ್. ಪಾಟೀಲ್ ಇವರು "ಪ್ರಸ್ತುತ ಸಹಕಾರಿ ಸಂಘಗಳ ಮೌಲ್ಯಮಾಪನ ಹಾಗೂ ಸಹಕಾರಿ ಸಂಘಗಳ ಮೂಲ ಆಶಯ" ಎಂಬ ವಿಷಯದ ಕುರಿತು ಮಾತನಾಡಿ "ಸಹಕಾರಿಗಳು ಸರಿಯಾದ ಮಾರ್ಗದಲ್ಲಿ ನಡೆಯಬೇಕಾದರೆ ಮತ್ತು ಅಭಿವೃದ್ಧಿ ಹೊಂದಲು ಸಹಕಾರಿಯಲ್ಲಿನ ಪ್ರತಿಯೊಬ್ಬರೂ ಪ್ರಾಮಾಣಿಕ ಮತ್ತು ಪಾರದರ್ಶಕತೆಯನ್ನು ಹೊಂದಿರಬೇಕು" ಎಂದು ತಿಳಿಸಿದರು. ಇನ್ನೊಬ್ಬ ಮುಖ್ಯ ಅತಿಥಿಗಳಾದ ಶ್ರೀ ಸಿ.ಎನ್. ಪರಶಿವಮೂರ್ತಿ ಅವರು "ಸಹಕಾರಿ ಸಂಸ್ಥೆಗಳಲ್ಲಿ ಸ್ವಯಂನಿಯಂತ್ರಣ ಹಾಗೂ ಸ್ವಯಂ ಮೌಲ್ಯಮಾಪನ" ಎಂಬ ವಿಷಯದ ಬಗ್ಗೆ ಮಾತನಾಡಿ, ಸೌಹಾರ್ದ ಸಹಕಾರಿಗಳ ಕಾಯ್ದೆಗಳ ಬಗ್ಗೆ ಮತ್ತು ಪ್ರಚಲಿತ ವಿದ್ಯಮಾನಗಳಲ್ಲಿ ಸಹಕಾರಿ ಕಾಯ್ದೆಯಲ್ಲಿನ ಬದಲಾವಣೆ, ಹೊಸ ಕಾಯ್ದೆಗಳ ರಚನೆ ಮತ್ತು ಪ್ರಸ್ತುತ ಸಹಕಾರಿಗಳು ಎದರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು. ಕೊಪ್ಪಳ ಸಂಸದರಾದ ಮಾನ್ಯಶ್ರೀ ರಾಜಶೇಖರ ಹಿಟ್ನಾಳ ಅವರು "ಸಹಕಾರ ಸಂಸ್ಥೆಗಳಲ್ಲಿ ಜನ ಸಾಮಾನ್ಯರಿಗೆ ಸರಳವಾಗಿ ಸಾಲ ದೊರೆಯುತ್ತಿದೆ. ರಾಷ್ಟ್ರೀಯ ಬ್ಯಾಂಕ್‌ಗಳ ಸರಿಸಮವಾಗಿ ಸಹಕಾರ ಸಂಘಗಳು ಬೆಳೆಯುತ್ತಿವೆ ಎಂಬುದಕ್ಕೆ ಪಟ್ಟಣದ ಭ್ರಮರಾಂಬ ಸೌಹಾರ್ದ ಸಹಕಾರ ಸಂಘ ಒಂದು ಉದಾಹರಣೆ" ಎಂದರು. ಕಾರ್ಯಾಗಾರದಲ್ಲಿ ವಿಶೇಷ ಆಹ್ವಾನಿತರಾದ ಶ್ರೀ ವಿಶ್ವನಾಥ ಹಿರೇಮಠ ಅಧ್ಯಕ್ಷರು, ವಿಕಾಸ ಬ್ಯಾಂಕ್ ಹೊಸಪೇಟೆ, ಶ್ರೀ ಶರಣಗೌಡ ಪಾಟೀಲ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ ಸಹಕಾರಿ ನಿ, ಬೆಂಗಳೂರು ಅವರು ಮಾತನಾಡಿದರು. ಸುಕೋ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ಅವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜೆ. ಪಿ ಸೋಕರ್, ಅವರು "ಸಂಸ್ಥೆಯ ಸದೃಢ ಆರ್ಥಿಕ ಮಾನದಂಡಗಳು ಹಾಗೂ ಜನರಲ್ ಬ್ಯಾಂಕಿಂಗ್ ಪದ್ದತಿ" ಹಾಗೂ ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭ್ರಮರಾಂಬ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಶಿವಾನಂದ ಕುಲಕರ್ಣಿ ಅವರು "ಸೈಬರ್ ಸೆಕ್ಯುರಿಟಿ" ಬಗ್ಗೆ ಸಹಕಾರಿಗಳಿಗೆ ತರಬೇತಿ ನೀಡಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಪಂಪಣ್ಣ ಗುಂಡಳ್ಳಿ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ, ಅವರು ಉಪಸ್ಥಿತರಿದ್ದರು. ಶ್ರೀ ಭ್ರಮರಾಂಬ ಸಹಕಾರಿಯ ಆಡಳಿತ ಮಂಡಳಿ, ಸಲಹಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿಗಳು ಈ ಕಾರ್ಯಾಗಾರದಲ್ಲಿ ಹಾಜರಿದ್ದು ತರಬೇತಿಯ ಪ್ರಯೋಜನ ಪಡೆದುಕೊಂಡರು. ಸಾಯಂಕಾಲ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ಸುಗಮ ಸಂಗೀತ ಕಲಾವಿದರಾದ ಶ್ರೀ ರಾಮಚಂದ್ರ ಹಡಪದ ಅವರ ತಂಡ ಜನರಿಗೆ ಸಂಗೀತದ ರಸದೌತಣ ಉಣಬಡಿಸಿತು ಹಾಗೂ ಮಿಮಿಕ್ರಿ ಕಲಾವಿದರಾದ ಶ್ರೀ ಮಿಮಿಕ್ರಿ ಗೋಪಿ ಅವರು ನೆರೆದಿದ್ದ ಜನರಿಗೆ ಹಾಸ್ಯದ ಮನರಂಜನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 2000 ಜನ ಹಾಜರಿದ್ದರು.

---

**ರಾಯಚೂರು :** ದಿನಾಂಕ 05.05.2025 ಸೋಮವಾರ ಬೆಳಗ್ಗೆ 11.30 ಗಂಟೆಗೆ ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಾಗಾರವನ್ನು ಶ್ರೀ ವಿರೂಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ ಈ ಸಹಕಾರಿಯ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಲೆಕ್ಕಪರಿಶೋಧನ ವರದಿ ಪೂರ್ವ ತಯಾರಿ ಹಾಗೂ ಇತರೆ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ‍್ಯಾಕಲೆ ರವರು ಮಾಹಿತಿ ನೀಡಿದರು.

ಈ ಸಂಧರ್ಭದಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಅಮರೇಗೌಡ ನಕ್ಕುಂದಿ ಯವರು, ವಿಜಯವಾಣಿ ಪತ್ರಿಕೆಯ ವರದಿಗಾರರಾದ ಶ್ರೀ ಶರಣ ಬಸವ ನೀರಮಾನ್ವಿ ಯವರು, ಉದಯವಾಣಿ ಪತ್ರಿಕೆಯ ವರದಿಗಾರರಾದ ಶ್ರೀ ಜಿತೇಂದ್ರ ರವರು,ರಾಯಚೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜ ರವರು, ಆಂಜಿನೇಯ ರವರು ಉಪಸ್ಥಿತರಿದ್ದರು.

ಮಾನವಿ ತಾಲ್ಲೂಕಿನ 20 ಸೌಹಾರ್ದ ಸಹಕಾರಿಗಳಿಂದ ಒಟ್ಟು 35 ಜನ ಪ್ರತಿನಿಧಿಗಳು ಈ ತರಬೇತಿಯಲ್ಲಿ ಭಾಗವಹಿಸಿದ್ದರು

## ಉದ್ಘಾಟನೆ



### ಸಹಕಾರಿಗಳಲ್ಲಿ ಮಿತವ್ಯಯ, ಉಳಿತಾಯ ಅತ್ಯಗತ್ಯ – ಜ್ಯಾಂತಿಕರ್

**ಬೀದರ :** ಸಹಕಾರ ಸಂಘಗಳು ಸಮೃದ್ಧವಾಗಿ ಬೆಳೆಯಬೇಕಾದರೆ ಸಹಕಾರಿಗಳಲ್ಲಿ ಮಿತವ್ಯಯ ಉಳಿತಾಯ ಅತ್ಯಗತ್ಯವಾಗಿದೆ ಎಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ್ ನುಡಿದರು. ಬೀದರ ನಗರದ ಓಲ್ಡ ಆದರ್ಶ ಕಾಲೋನಿಯಲ್ಲಿ ನೂತನ ವೆಸ್ಲಿ ಸೌಹಾರ್ದ ಸಹಕಾರಿ ಸಂಘದ ಕಛೇರಿ ಉದ್ಘಾಟಿಸಿ ಮಾತನಾಡಿದರು. ಸಹಕಾರ ಸಂಘಗಳು ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕು, ಸದಸ್ಯರಲ್ಲಿ ಉಳಿತಾಯ ಮನೋಭಾವ ಮೂಡಿಸಬೇಕು ಸಹಕಾರಿಯಿಂದ ಬಡವರಿಗೆ ಹೆಚ್ಚಿನ ಸಹಾಯ ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬ್ಲೇಸಿಂಗ್ ಚರ್ಚ್ ಚಿಕ್ಕಪೇಟ ಬೀದರ ಸಲೋಮಾನ ಪಾಸ್ಟರ್ ವಹಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ದೇವೀಂದ್ರ ಭದ್ರಪ್ಪಾ ವಹಿಸಿದರು. ಮುಖ್ಯ ಅತಿಥಿಗಳಾಗಿ ಧರಿನಾಡು ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಶಿವಶಂಕರ ಬೆಮಳಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶಟ್ಟಿ ಕಾಮಣ್ಣಾ ಉಪಸ್ಥಿತರಿದ್ದರು. ಜಿಲ್ಲಾ ಒಕ್ಕೂಟದ ಸಿ.ಇ.ಓ ಅಮೃತ ಹೊಸಮನಿ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತ್ತು. ಸಹಕಾರಿಯ ಉಪಾಧ್ಯಕ್ಷರಾದ ಅಶ್ವಿನ ಮುಖ್ಯ ಕಾರ್ಯನಿರ್ವಾಹಕ ಸಾಮುವೇಲ್, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 12.04.2025ರಂದು ಶ್ರೀ ಕಾಳಿಕಾಂಬ ಸೌಹಾರ್ದ ಸಹಕಾರಿ ಸಂಘ ನಿ, ಬೆಂಗಳೂರು ಇದರ ವಿದ್ಯಾರಣ್ಯಪುರದ ನೂತನ ಶಾಖೆಯನ್ನು ಪ್ರಾರಂಭಿಸಲಾಯಿತು. ಶಾಖೆಯ ಉದ್ಘಾಟನೆಯನ್ನು ಶ್ರೀಯುತ ಡಾ. ಎಂ. ವೀರಪ್ಪ ಮೊಯ್ಲಿ, ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಮಾಜಿ ಕೇಂದ್ರ ಸಚಿವರು, ಭಾರತ ಸರ್ಕಾರ ಇವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಸಹಕಾರಿ ಚಳುವಳಿ ಮತ್ತು ಸದಸ್ಯರ ಜವಬ್ದಾರಿ ಹಾಗೂ ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ಹಾಗೂ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಉಡುಪಿ :** ಶ್ರೀ ವೇಣುಗೋಪಾಲಕೃಷ್ಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಮೂಡುಕೇರಿ, ಬಾರಕೂರು ಇದರ 2 ನೇ ಶಾಖೆ ಉದ್ಘಾಟನೆ ದಿನಾಂಕ 06–04–2025 ರ ಆದಿತ್ಯವಾರ ಶ್ರೀ "ಸೀತಾರಾಮ ಸಂಕೀರ್ಣ" ಬ್ರಹ್ಮಾವರ ದಲ್ಲಿ ಉಡುಪಿ ಮತ್ತು ಚಿಕ್ಕಮಗಳೂರು ಸಂಸದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಯವರ ಉಪಸ್ಥಿಯಲ್ಲಿ ಪ್ರಾರಂಭಗೊಂಡಿತು. ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಯಶಪಾಲ್ ಎ ಸುವರ್ಣ ದೀಪ ಪ್ರಜ್ವಲಿಸಿದರು. ಬ್ರಹ್ಮಾವರ ಸಿ ಎ ಬ್ಯಾಂಕ್ ಅಧ್ಯಕ್ಷರಾದ ಬಿರ್ತಿರಾಜೇಶ್ ಶೆಟ್ಟಿ ಯವರು ಗಣಕಯಂತ್ರಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ವಿಸ್ತರಣಾಧಿಕಾರಿ ಶ್ರೀ ವಿಜಯ ಬಿ.ಎಸ್ ಮತ್ತು ಬ್ರಹ್ಮಾವರ ಪ್ರಣವ್ ಆಸ್ಪತ್ರೆಯ ಮುಖ್ಯಸ್ಥ ಡಾ.ಪ್ರವೀಣ್ ಕುಮಾರ್ ನಿರಖು ಠೇವಣಿ, ಉಳಿತಾಯ ಪುಸ್ತಕ ಬಿಡುಗಡೆ ಮಾಡಿದರು. ಸಂಪರ್ಕ ಸುಧಾ ಪತ್ರಿಕೆಯ ಅಧ್ಯಕ್ಷ ಶ್ರೀ ರವಿರಾಜ್ ಕುಂಭಾಶಿ ಸೇಫ್ ಲಾಕರ್ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಡಾ. ಕೆ ಸತೀಶ್ ಪೈ ಶ್ರೀ ನಾಗರಾಜ್ ಗಾಣಿಗ ಸಾಲಿಗ್ರಾಮ, ಶ್ರೀ ಅರುಣ್ ಗಾಣಿಗ ದುಬೈ, ಶ್ರೀ ಬಿ.ವಿ ರಾವ್ ಮುಂಬೈ, ಉದ್ಯಮಿ ಶ್ರೀ ಸುಧೀರ್ ಪಂಡಿತ್ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿಜಯ್ ಕೆ, ಉಪಾಧ್ಯಕ್ಷರಾದ ಶ್ರೀ ಎಸ್ ಕೆ ಪ್ರಾಣೇಶ್ ಉಡುಪಿ ಜಿಲ್ಲಾ ಸೋಮಕ್ಷತ್ರಿಯ ಗಾಣಿಗ ಸಮಾಜದ ಅಧ್ಯಕ್ಷರು, ಸಹಕಾ–

ರಿಯ ನಿರ್ದೇಶಕರಾದ ಶ್ರೀ ಕೆ. ಉದಯ್ ಕುಮಾರ್, ಕೆನರಾ ಬ್ಯಾಂಕ್‌ನ ನಿವೃತ್ತ ಜನರಲ್ ಮ್ಯಾನೇಜರ್ ಶ್ರೀ ಗೋಪಾಲ ಗಾಣಿಗ ಮಟಪಾಡಿ, ನಿರ್ದೇಶಕರುಗಳಾದ ಶ್ರೀ ಕಮಲಾಕ್ಷಿ ಬಿ ಶ್ರೀ ಪ್ರಭಾಕರ್ ಉದ್ಯಾವರ, ಶ್ರೀ ಬಿ ಎನ್. ರಾಮಚಂದ್ರ, ಶ್ರೀ ಬಿ ನಾಗರಾಜ್ ಮಾಲ್ತಾರು, ಶ್ರೀಮತಿ ಜಯಂತಿ ವಾಸುದೇವ, ಶ್ರೀಮತಿ ಮಾಲತಿ ಲಕ್ಷ್ಮೀಶ, ಶ್ರೀ ರಾಮಕೃಷ್ಣ ಗಾಣಿಗ ಹಾರಾಡಿ ಶ್ರೀ ವಿಕ್ರಮ್ ಕುಮಾರ್ ಉಡುಪಿ, ಶ್ರೀ ವಸಂತ್ ರಾವ್ ಉಡುಪಿ, ಶ್ರೀ ಸುರೇಶ ಗಾಣಿಗ ಕೋಟ, ಶ್ರೀ ರಮಾನಂದ ಕೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪರಮೇಶ್ವರ್ ಜಿ, ಹಾಗೂ ಗಾಣಿಗ ಸಮಾಜದ ಗಣ್ಯಾತಿಗಣ್ಯರು ಹಾಗೂ ಸಹಕಾರಿ ಸಿಬ್ಬಂದಿಗಳು ಉಪಸ್ಥಿತ–ರಿದ್ದರು. ಶ್ರೀ ಗಣೇಶ್ ಚೆಲ್ಲಿಮಕ್ಕಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

## ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರ ವಿದೇಶ ಪ್ರವಾಸ

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಆಡಳಿತ ಮಂಡಳಿ ಹಾಗೂ ಸಾಮಾನ್ಯ ಸಭೆಯ ನಿರ್ಣಯದಂತೆ ದಿನಾಂಕ 15.04.2025 ರಿಂದ 30.04.2025ರವರೆಗೆ U.K. and European countries ಅಧ್ಯಯನ ಪ್ರವಾಸ ಮುಗಿಸಿ ಹಿಂದಿರುಗಿರುತ್ತೇವೆ. ಅಧ್ಯಯನ ಪ್ರವಾಸದ ವರದಿ ಹಾಗೂ ಛಾಯಚಿತ್ರಗಳನ್ನು ಜೂನ್ ತಿಂಗಳ ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.




**ಬೆಳಗಾವಿ:** ದಿನಾಂಕ 28.4.2025 ರಂದು ಶ್ರೀ ಶಾಂತಿ ಸಾಗರ ಕ್ರೇಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಶಿರಗುಪ್ಪಿ ಇದರ 11 ನೇಯ ಶಾಖೆಯ ಉದ್ಘಾಟನಾ ಕಾರ್ಯಕ್ರಮವು ಅಥಣಿ ತಾಲೂಕಿನ ಶೆಗುಣಸಿ ಗ್ರಾಮದಲ್ಲಿ ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮ.ನಿ.ಪ್ರ ಡಾ. ಮಹಾಂತಪ್ರಭು ಮಹಾಸ್ವಾಮಿಜಿ, ವಿರಕ್ತ ಮಠ, ಶೆಗುಣಸಿ ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿದ್ಯಾಸಾಗರ ಮಾನಗಾವೆ, ಉಪಾಧ್ಯಕ್ಷರಾದ ಶ್ರೀ ಪುರಂದರ ಕನವಾಡಿ,ಮುಖ್ಯಕಾರ್ಯನಿವಾಹಕರಾದ ಶ್ರೀ ಅನಂತಕುಮಾರ ಐನಪುರೆ, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಶಾಖಾ ಸಮಿತಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ದಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ಸಹಕಾ–ರಿಯ ಸದಸ್ಯರು ಮತ್ತು ಆಡಳಿತ ಮಂಡಳಿ ಸದಸ್ಯರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ ಪ್ರಗತಿ 2024-25ನೇ (ಮಾರ್ಚ್ 2025ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

**ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರು, ಬೆಳಗಾವಿ.**

| ಆರ್ಥಿಕ ಅಂಶಗಳು | 31.03.2025ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಶೇರುಗಳು | 97 ಲಕ್ಷ 30 ಸಾವಿರ |
| ಒಟ್ಟು ನಿಧಿಗಳು | 13 ಕೋಟಿ 29 ಲಕ್ಷ |
| ಒಟ್ಟು ಠೇವಣಿಗಳು | 140 ಕೋಟಿ 90 ಲಕ್ಷ |
| ಒಟ್ಟು ಸಾಲ ಮತ್ತು ಮುಂಗಡಗಳು | 116 ಕೋಟಿ 81 ಲಕ್ಷ |
| ಒಟ್ಟು ಹೂಡಿಕೆಗಳು | 32 ಕೋಟಿ 05 ಲಕ್ಷ |
| ದುಡಿಯುವ ಬಂಡವಾಳ | 158 ಕೋಟಿ 13 ಲಕ್ಷ |
| ನಿವ್ವಳ ಲಾಭ | 2 ಕೋಟಿ 61 ಲಕ್ಷ |
| ಸಾಲ ವಸೂಲಾತಿ ಪ್ರಮಾಣ | ಪ್ರತಿಶತ(%) 98.12% |
| ಒಟ್ಟು ಶಾಖೆಗಳು | 14+1 |

**ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಹಾನಗಲ್**

| ಆರ್ಥಿಕ ಅಂಶಗಳು | 31.03.2025ಕ್ಕೆ ಇದ್ದಂತೆ |
|---|---|
| ಒಟ್ಟು ಶೇರುಗಳು | 12.51 ಲಕ್ಷ |
| ಒಟ್ಟು ಹೂಡಿಕೆಗಳು | 1.08 ಕೋಟಿ |
| ಒಟ್ಟು ಠೇವಣಿಗಳು | 4.22 ಕೋಟಿ |
| ಒಟ್ಟು ಸಾಲ ಮತ್ತು ಮುಂಗಡಗಳು | 5.36 ಕೋಟಿ |
| ಒಟ್ಟು ವ್ಯವಹಾರ | 9.58 ಕೋಟಿ |
| ನಿವ್ವಳ ಲಾಭ | 28.80 ಲಕ್ಷ |

# Self-Regulation and Control of Cooperative Societies under the Karnataka Souharda Cooperative Act, 1997 – Relevance in the Present Context

**- Dr. Dayananda Murthy C.P., LL.M., MFT, Ph.D., Associate Professor and DPIIT, Chair Professor, Damodaram Sanjivayya National Law University, Visakhapatnam, Andhra Pradesh.**

The Government of Karnataka, in keeping with the cooperative policy decided to frame a liberated cooperation law called the Karnataka Souharda Cooperative Act, 1997 (hereinafter referred as "the Souharda Act") with the objects as follows:

"An Act to provide for recognition, encouragement and voluntary formation of co-operatives based on self-help, mutual aid, wholly owned, managed and controlled by members as accountable, competitive, self-reliant and economic enterprises guided by cooperative principles and matters connected therewith."

Further, in its objects, it mentioned that the law intends to remove all kinds of restrictions that have come to clog the free functioning of the cooperatives and the controls or interference by the Government, except registration and cancellation of registration.

The Souharda Act was enacted with certain observations to incorporate the Reserve Bank of India (hereinafter referred as "the RBI') or the National Bank for Agriculture and Rural Development, (herein referred as "the NABARD) under the definitions clause and to comply with the directors of such body where depositors are concerned, who carry on banking business and to obtain license from the RBI, fix liability of past members, protect the interest of non-members deposits, power to be incorporated,, where in Registrar has the power for supersession and liquidation and restricting registration of housing cooperative under the Act and further it was suggested that the Registrar shall be the ex-offico member of the Board of Directors. On insertion of certain suggestions, the Act was given effect by notifying in the Gazettee W.E.F. January 1, 2021, but without incorporating the Registrar as the ex-offico member of the Board.

The creation of the Federal Cooperative as a regulatory body was not objected in the Presidential observation. The creation of the Federal Cooperative, a democratically elected Board, which acts as a regulator in place of the Registrar, with the statuary powers being exercised b the body as a friend, philosopher and guide. This Federal Body was created under section 53 of the Souharda Act and powers and duties of this body was fixed under section 53(7) of the Act. The subject matter of the byelaws of the federal cooperative was incorporated under section 53A of the Act.

This Act was the result of the proposal of the Government of India through the Planning Commission, which had appointed a Committee under Chairmanship of Chowdary Bramha Prakash. The Committee had given a Model Cooperative Law to

bring uniformity in cooperative law through out the country. The Government of Karnataka decided to enact a new liberal cooperative law. In addition, to liberalizing the existing the Karnataka Cooperative Societies Act, 1959 (hereinafter referred as "the Act"). Where in regulatory power were removed, but within two years of this liberated provisions were reincorporated to that Act, bringing back the Government control over cooperative societies.

The cooperatives are in between public sector and private sector. Where in, public create the cooperatives with their own resources without Government contribution, even though there is provision that in the initial stages, state assistance is provided to these cooperatives. This principle was reexamined while framing the Souharda Act and it was intentionally incorporated that no Government aid (directly or indirectly) shall be given to these cooperatives in keeping with the cooperative principles. Further, it provided that any cooperative registered under the liberal Souharda Act, becomes the member of the Federal Cooperative. This may be against the democratic principle as the admission of members being the power vested in the Board. The Act provided for automatic membership in the Federal Cooperative, need not be questioned.

In the present context, all democratic institutions have been more active and exercising powers in excess of the invested power. Though, the executives escaping from statutory actions needs a relook into the powers vested in such institutions. There is lack of accountability in functioning of there institutions. Every democratic institution wants power, but without accountability. In this context, the Souharda Act provides for certain acts to be acted upon by the Federal Cooperative and member cooperative. As a result, even if the statutory provisions areis not complied, due to procedural requirements, action is not taken.

This paper traces to analyse the requirement under the Act and the subsequent action and the requirement to make them accountable. Hence, the duties and responsibilities are required to be acted upon by the concerned and made accountable for their acts. For this purpose, the provision contained under section 109 (offences and penalties) under the Karnataka Cooperative Societies Act, 1959 under subsection 12A and 12 B provides as follows:

"Section 12A provides that, where any person conducting audit under section 63 or inquiry under section 64 or inspection under section 65 or section 65B -

(i) willfully omits to mention in his report any defects or irregularity, which he has noticed or might have noticed had he exercised due diligence during the course of audit, inquiry or inspection; or

(ii) willfully makes false observation in his report; shall without prejudice to any other action that may be taken against him under any law for the time being in force, be punishable with imprisonment for a term which may extend to six months or with fine, which may extend to three thousand rupees or with both.

Section 12B provides that, where a Chief Executive fails to send periodical extracts of cash book and certified copies of the proceedings of the Gen-

eral Meetings and *board* Meetings to the Registrar and the financing bank or credit agency within the time limits specified under sub-section (6) of section 29G, he shall be punishable with imprisonment for a term which may extend to six months or with fine which may extend to three thousand rupees or with both

The above two provisions were made to make the executive accountable for inaction. The elected Board of Directors are also made accountable under subsection (1A), (3), (5), (7), (8), (9), (10), (11), (12), (13)(14), (15), (16), (17), (18), (19), 20 and (21) of section 109 of the Karnataka Cooperative Societies Act, 1959. The office bearers are also made accountable, but their violations are rarely acted upon by the Registrar, as their act is no effective administrative control over the cooperative societies.

The Souharda Act, 1997 also provides also provides offences and penalties under chapter XI in section 68 (8) are as follow:

| Section 68 subsection | Particular Violations | Punishment |
|---|---|---|
| (1) | If an office bearer or director or a Chief Executive or any employee of a co-operative or Federal Co-operative wilfully fails to issue a notice, send a return or document or neglects or refuses to furnish any information or wilfully furnishes a false or an insufficient information required under this Act or the bye-laws of a co-operative | shall be punishable with a fine which may extend to five thousand rupees or imprisonment which may extend to one year or with both |
| (2) | If an office bearer, a Chief Executive, a director or any employee of a co-operative or Federal co-operative fails to do any act required to be done under this Act or allows to be done any act forbidden by this Act or the bye-laws or fails to fulfil the duties or indulges in fraudulent activities concerning the constitution, management and business or misuses funds and properties or indulges in the conduct of election to the board of directors in "corrupt practices" as defined under Section 123 of the Representation of Peoples Act, 1951or fails .to provide such information or produce such books or records or to give assistance or fails to appear in person before the person conducting an inquiry under Sections 35 and 65 or audit under Section 33 and 64 or fails to contribute to the "Federal Co-operative Fund" of the Federal Co-operative:" | shall be punishable with fine which may extend to ten thousand rupees or with imprisonment which may extend to two years or with both. |
| (3) | Any employer, who without sufficient cause, fails to make the deduction or fails to pay to a co-operative the amount deducted by him for a period of fourteen days from the date on which such deduction is made | shall be punishable with a fine of rupees five thousand or an imprisonment fo a term of six months or with both. |

| | | |
|---|---|---|
| (4) | Any office bearer, chief executive, a director or an employee of a co-operative or federal cooperative who is in possession of any information, books and records and who fails to furnish such information or produce such books or records or who willfully fails to handover custody of the books, accounts, documents, records, cash, security and other property belonging to a co-operative or the federal cooperative of which he is an officer or custodian, to an authorized person or who fails, without sufficient cause, to comply with a lawful written order or a requisition or a summons issued under the provisions of this Act | shall be punishable with a fine of rupees ten thousand or an imprisonment for a term of two years or with both. |
| (5) | If the board and the Chief Executive of any cooperative or the federal cooperative fail to get its accounts for the preceding year audited within the period time stipulated under section 33 or section 64 as the case may be and present the audit financial statement along with audit report before the annual general meeting such every director and chief executive of such cooperative or federal cooperative | shall be punishable with a fine of rupees five thousand or an imprisonment of six months or with both |
| (6) | If the board and the Chief Executive of any cooperative or the federal cooperative fail to submit the returns and information to the registrar and federal cooperative as specified in the Section 34 or 64A as the case may be, every director and chief executive of such cooperative or the federal cooperative | shall be punishable with a fine of rupees ten thousand or an imprisonment of two years or with both. |
| (7) | If the board and the Chief Executive of any cooperative or the federal cooperative fail to assist the cooperative election commission by furnishing the books, records and information required for conducting elections within the prescribed time under Section 26 or section 58, as the case may be, every director and Chief Executive of such cooperative or the federal cooperative | shall be punishable with a fine of rupees ten thousand or an imprisonment of six months or with both. |
| (8) | Any person who, before, during or after the election of the members of the board or office-bearers of a cooperative or the federal cooperative, adopts any corrupt practice as specified under section 39C or commits any electoral offences specified under section 39K of the Karnataka Cooperative Societies Act, 1959 | shall be punishable with a fine of rupees ten thousand or an imprisonment of two years or with both |

The above provision provides for punishment for inaction or not keeping time line, but the failure of Federal Cooperative and member cooperation are not acted upon. As a result, the member cooperatives and the Board and the executive to without any action being taken for such deficiencies. To bring in effective accountability, the Federal Cooperative has to become professional and functional, so that the intentions to liberalise cooperatives from the control of the Government is achieved. If not, there is no need for a liberal Cooperative Law called Souharda Act.

**Conclusions:**

The law has taken care to ensure that the member cooperative and the Federal Cooperative are made accountable under different sections of the Act. In addition, for inaction of the member cooperative and the Federal Cooperative in discharging the duties and responsibilities, Chapter XI is incorporated, where in the member cooperatives and the Federal Cooperatives could be punished for inaction under section 68 of the Act as pet the offences and penalties chapter. This sufficient checks and balances, but the problem is, the non-compliances under the Act are not acted upon effectively. As a result, the self-regulation and self-control by members cooperatives and committees has not resulted in the economic welfare of the members.

There may be some legal differences in enforcing section 68 of the Act, as the officer of the Federal Cooperative are not government servants and any order passed by them to prosecute are not taken cognizance by the police. This requires that the definitionof Federal Cooperative, which is vested with the statutory power and has empowered its officers to exercise the statutory duties as provided under section 2(i) of the Karnataka Cooperative Societies Act, 1959.

The said Act provides that the Registrar shall be assisted by Assistant Registrar, Deputy Registrar and Joint Registrar and Additional Registrar to exercise the power of the Registrar, depending on the jurisdiction of the society registered. If similar provisions are made, the designated officers at divisional level, district level are empowered to examine the statutory duty under the SouhardaAct. Further, these officers of the Federal Cooperative shall be notified by Government as officers to exercise the statutory power. The present position is that the statutory power under the Act can be exercised by the Federal Cooperative, which is a body elected directors with vested interest and ineffective regulatory mindset.

At present the statutory powers can be exercised by the Board of Federal Cooperative and being a body, a power delegated under the Act cannot be further delegated by the Federal Cooperative. In addition, the employees of the Federal Cooperative are required to be trained in exercising statutory powers effectively and efficiently. The present system adopted is that on receipt of a report, the Federal Cooperative in its Board takes a decision and enforcing it through the Managing Director, is time consuming and then orders may become ineffective.

If there is no possibility to amend this Act, the Federal Cooperatives should function as a professional body and take quick decisions without any favouritism, which can effectively regulate the functioning of the member cooperation and ensure that the intention of the Act to free cooperation from regulation and control by the Registrar of the Government. If the permission under section 68 is acted upon timely, this liberal Act will have the intention fulfilled.

# ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ- Tribhuvan Cooperative University ಯುವಕರು ಹಾಗೂ ಸಹಕಾರಿ ಚಳವಳಿಗೆ ವರದಾನ

– ಹಿಂದಿ ಪ್ರಕಟಣೆ : NCUI Publication
– ಕನ್ನಡ ಅನುವಾದ : ಶ್ರೀಮತಿ ಸವಿತ ಎನ್. ಇ. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

**ಭೂಮಿಕೆ:**

ಭಾರತದಲ್ಲಿ ಸಹಕಾರಿ ಚಳವಳಿಗೆ ಹೊಸ ದಿಕ್ಕು ನೀಡಲು ಮತ್ತು ಯುವಕರಿಗೆ ಉದ್ಯೋಗದ ಹೊಸ ಅವಕಾಶಗಳನ್ನು ಸೃಷ್ಟಿಸಲು ಕೇಂದ್ರ ಸರ್ಕಾರ 'ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ' ಸ್ಥಾಪನೆಯ ಪ್ರಸ್ತಾವನೆ ಮಾಡಿತ್ತು. ಈಗ ಈ ಕನಸು ನಿಜವಾಗಿದ್ದು, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಮಸೂದೆಯನ್ನು(ಬಿಲ್) ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಅಂಗೀಕರಿಸಿವೆ. ಈ ಬಿಲ್ ಅಂಗೀಕಾರವಾದ ನಂತರ, ಈ ವಿಶ್ವವಿದ್ಯಾಲಯವು ಸಹಕಾರಿ ಶಿಕ್ಷಣ, ಸಂಶೋಧನೆ ಮತ್ತು ತರಬೇತಿಗೆ ಉತ್ತೇಜನ ನೀಡುವುದಷ್ಟೇ ಅಲ್ಲದೆ, ಸಹಕಾರಿ ಕ್ಷೇತ್ರವನ್ನು ಹೆಚ್ಚು ವೃತ್ತಿಪರ ಮತ್ತು ಪರಿಣಾಮಕಾರಿಯಾಗಿ ರೂಪಿಸಲು ಸಹಾಯ ಮಾಡಲಿದೆ.




ಭಾರತದಲ್ಲಿ ಸಹಕಾರಿ ಚಳವಳಿಯ ಇತಿಹಾಸ ಬಹಳ ಹಳೆಯದು, ಆದರೆ ಅದರ ಅಭಿವೃದ್ಧಿಯ ವೇಗ ಸಾಧಾರಣವಾಗಿ ನಿಧಾನವಾಗಿದೆ. ಸಹಕಾರಿ ಸಂಸ್ಥೆಗಳು ಹಲವಾರು ಬಾರಿ ವೃತ್ತಿಪರ ನಿರ್ವಹಣೆಯ ಕೊರತೆ, ನವೀನ ತಂತ್ರಜ್ಞಾನಗಳ ಅಭಾವ ಮತ್ತು ಪರಿಣಾಮಕಾರಿ ನಾಯಕತ್ವದ ಕೊರತೆಯಿಂದ ತೊಂದರೆಗಳನ್ನು ಎದುರಿಸುತ್ತವೆ. ಈ ಎಲ್ಲಾ ಸಮಸ್ಯೆಗಳಿಗೆ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಪರಿಹಾರ ನೀಡಲು ಮುಂದಾಗಿದೆ ಮತ್ತು ಸಹಕಾರಿ ಕ್ಷೇತ್ರವನ್ನು ಚಿನ್ನದ ಯುಗದತ್ತ ಕೊಂಡೊಯ್ಯಲು ನೆರವಾಗಲಿದೆ.

**ಭಾರತದಲ್ಲಿ ಸಹಕಾರಿ ಚಳವಳಿ: ಒಂದು ಸಂಕ್ಷಿಪ್ತ ಪರಿಚಯ**

ಭಾರತದಲ್ಲಿ ಸಹಕಾರಿ ಚಳವಳಿ ಪ್ರಸ್ತುತ ವರ್ಷದಲ್ಲಿ ಪ್ರಾರಂಭವಾಯಿತು. 1904 ರಲ್ಲಿ ಮೊದಲ ಸಹಕಾರಿ ಕಾಯ್ದೆ ತರಲಾಯಿತು, ಇದರೊಂದಿಗೆ ಈ ಚಳವಳಿಗೆ ಮಾದರಿಯಾಗಿದೆ. ಇಂದಿನ ದಿನಗಳಲ್ಲಿ ಸಹಕಾರಿ ಸಂಸ್ಥೆಗಳು ಕೃಷಿ, ಬ್ಯಾಂಕಿಂಗ್, ಹಾಲು ಉತ್ಪಾದನೆ, ವಸತಿ, ಬಳಕೆದಾರ ವಸ್ತುಗಳು ಮತ್ತು ಇತರೆ ಅನೇಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಮೂಲ್, ಇಫ್ಕೋ (IFFCO), ಮತ್ತು ಕ್ರಿಭ್ಕೊ (KRIBHCO) ನಂತಹ ಸಹಕಾರಿ ಸಂಸ್ಥೆಗಳು ಯಶಸ್ವಿ ಮಾದರಿಗಳಾಗಿವೆ.

ಆದರೆ, ಡಿಜಿಟಲ್ ತಂತ್ರಜ್ಞಾನಗಳ ಕೊರತೆ, ಸ್ಪರ್ಧೆಯಲ್ಲಿ ಹಿನ್ನಡೆ ಮತ್ತು ವೃತ್ತಿಪರ ಕೌಶಲ್ಯಗಳ ಕೊರತೆ ಸೇರಿದಂತೆ ಸಹಕಾರಿ ಕ್ಷೇತ್ರ ಎದು–ರಿಸುತ್ತಿರುವ ಸವಾಲುಗಳು ಇದರ ನಿರಂತರ ಅಭಿವೃದ್ಧಿಗೆ ಅಡ್ಡಿಯಾಗುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರವಾಗಿ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತಿದೆ.

**ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವನ್ನು ಈ ಕೆಳಗಿನ ಉದ್ದೇಶಗಳನ್ನು ಸಾಧಿಸಲು ಸ್ಥಾಪಿಸಲಾಗಿದೆ:**

1. ಯುವಕರಿಗೆ ಉದ್ಯೋನ್ಮುಖ ಶಿಕ್ಷಣ: ಸಹಕಾರಿ ಕ್ಷೇತ್ರದಲ್ಲಿ ವೃತ್ತಿಪರ ಶಿಕ್ಷಣದ ಕೊರತೆಯಿಂದ ಯುವಕರು ಈ ಕ್ಷೇತ್ರದತ್ತ ಆಕರ್ಷಿತರಾಗುವುದಿಲ್ಲ. ಈ ವಿಶ್ವವಿದ್ಯಾಲಯವು ಸಹಕಾರಿ ನಿರ್ವಹಣೆ, ಹಣಕಾಸು ಸೇರ್ಪಡೆ, ಮಾರ್ಕೆಟಿಂಗ್, ಡಿಜಿಟಲ್ ಸಹಕಾರಿತ್ವ ಮತ್ತು ಇತರ ವಿಷಯಗಳಲ್ಲಿ ವಿಶೇಷ ಶಿಕ್ಷಣ ನೀಡಲಿದೆ.
2. ಸಹಕಾರಿ ಸಂಸ್ಥೆಗಳ ಶಕ್ತೀಕರಣ: ವೃತ್ತಿಪರ ತರಬೇತಿ ಮತ್ತು ನವೀನ ಸಂಶೋಧನೆಯ ಮೂಲಕ ಸಹಕಾರಿ ಸಮಿತಿಗಳನ್ನು ಹೆಚ್ಚು ಪರಿಣಾಮಕಾರಿ ಮತ್ತು ಸ್ಪರ್ಧಾತ್ಮಕವಾಗಿಸಲಾಗುತ್ತದೆ.
3. ಡಿಜಿಟಲ್ ಯುಗದಲ್ಲಿ ಸಹಕಾರಿ ಚಳವಳಿಯ ಅಭಿವೃದ್ಧಿ: ಡಿಜಿಟಲ್ ತಂತ್ರಜ್ಞಾನ, ಡೇಟಾ ವಿಶ್ಲೇಷಣೆ ಮತ್ತು ಕೃತಕ ಬುದ್ಧಿಮತ್ತೆಯ ಬಳಕೆಯಿಂದ ಸಹಕಾರಿ ಸಂಸ್ಥೆಗಳನ್ನು ಆಧುನಿಕ ತಂತ್ರಜ್ಞಾನಗಳೊಂದಿಗೆ ಸಂಪರ್ಕಿಸಲಾಗುತ್ತದೆ.
4. ಜಾಗತಿಕ ಸಹಕಾರಿ ನೆಟ್‌ವರ್ಕಿಂಗ್: ವಿಶ್ವವಿದ್ಯಾಲಯವು ಅಂತರರಾಷ್ಟ್ರೀಯ ಸಹಕಾರಿ ಸಂಸ್ಥೆಗಳಿಂದ ಭಾಗಸ್ವಾಮ್ಯ ಮಾಡಿಕೊಂಡು ಭಾರತೀಯ ಸಹಕಾರಿ ಕ್ಷೇತ್ರವನ್ನು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕಗೊಳಿಸುತ್ತದೆ.

**ಉದ್ಯೋಗೋನ್ಮುಖ ಪಾಠ್ಯಕ್ರಮಗಳು: ಯುವಕರಿಗಾಗಿ ಹೊಸ ವೃತ್ತಿ ಆಯ್ಕೆ**

"ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಸಹಕಾರಿ ಕ್ಷೇತ್ರದಲ್ಲಿ ಉನ್ನತ ಶಿಕ್ಷಣವನ್ನು ಒದಗಿಸುವ ಮೊದಲನೆಯ ಸಂಸ್ಥೆಯಾಗಲಿದೆ. ಇದರ ಪಠ್ಯಕ್ರಮಗಳು ವಿಶೇಷವಾಗಿ ವ್ಯಾವಹಾರಿಕ ಮತ್ತು ಉದ್ಯೋಗೋನ್ಮುಖವಾಗಿರುತ್ತವೆ,

1. ಸಹಕಾರಿ ನಿರ್ವಹಣೆ (Cooperative Management):

ಸಹಕಾರಿ ಸಂಸ್ಥೆಗಳ ನಾಯಕತ್ವ ಕೌಶಲ್ಯಗಳಿಗೆ ಮತ್ತು ಸುವ್ಯವಸ್ಥಿತ ನಿರ್ವಹಣೆ.

2. ಸಹಕಾರಿ ಹಣಕಾಸು (Cooperative Finance & Banking): ಸಹಕಾರಿ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗಾಗಿ ವೃತ್ತಿಪರ ತರಬೇತಿ.
3. ಡಿಜಿಟಲ್ ಸಹಕಾರಿತ್ವ (Digital Cooperatives): ಸಹಕಾರಿ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನಗಳ ಅನ್ವಯ.
4. ಸಮುದಾಯಾಭಿವೃದ್ಧಿ ಮತ್ತು ಸಹಕಾರಿತ್ವ (Community Development & Cooperatives): ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಹಕಾರಿ ಚಳವಳಿಯನ್ನು ಪ್ರೋತ್ಸಾಹಿಸಲು.
5. ಕೃಷಿ ಮತ್ತು ಗ್ರಾಮೀಣ ಸಹಕಾರಿತ್ವ (Agricultural & Rural Cooperatives): ಕೃಷಿ ಆಧಾರಿತ ಸಹಕಾರಿ ಸಂಸ್ಥೆಗಳನ್ನು ಆಧುನಿಕಗೊಳಿಸಲು.

ವಿಶ್ವವಿದ್ಯಾಲಯದಿಂದ ಪದವಿ ಅಥವಾ ಡಿಪ್ಲೋಮಾ ಪಡೆದ ವಿದ್ಯಾರ್ಥಿಗಳಿಗೆ ಸಹಕಾರಿ ಸಂಸ್ಥೆಗಳಲ್ಲಿನ ಮೊದಲ ಆದ್ಯತೆಯೊಂದಿಗೆ ಉದ್ಯೋಗಾವಕಾಶಗಳು ದೊರೆಯುತ್ತವೆ, ಇದರಿಂದ ಇದು ಆಕರ್ಷಕ ವೃತ್ತಿ ಆಯ್ಕೆಯಾಗಿ ರೂಪುಗೊಳ್ಳುತ್ತದೆ.

**"ಸಹಕಾರಿ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ದೃಢೀಕರಣ"**

"ಸಹಕಾರಿ ಚಳವಳಿಯನ್ನು ಶಕ್ತಿಶಾಲಿ ಮಾಡುವ ಸಂಶೋಧನೆ ಮತ್ತು ತರಬೇತಿಯ ವಿಶೇಷ ಮಹತ್ವವಿದೆ. ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಈ ಹಂತಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ:"

1. ಸಹಕಾರಿ ನೀತಿಗಳ ಮೇಲೆ ಸಂಶೋಧನೆ: ವಿವಿಧ ರಾಜ್ಯಗಳು ಮತ್ತು ದೇಶಗಳಲ್ಲಿ ಸಹಕಾರಿ ನೀತಿಗಳನ್ನು ಅಧ್ಯಯನ ಮಾಡಿದ್ದು, ಭಾರತಕ್ಕೆ ಅನುಕೂಲಕರವಾದ ನೀತಿಗಳನ್ನು ಅಭಿವೃದ್ಧಿಪಡಿಸುವುದು.
2. ಪ್ರಶಿಕ್ಷಣ ಕಾರ್ಯಾಗಾರಗಳು: ಸಹಕಾರಿ ಕ್ಷೇತ್ರದ ಕಾರ್ಯಕರ್ತರು ಮತ್ತು ನಿರ್ವಹಣಾಧಿಕಾರಿಗಳಿಗೆ ಸಂದರ್ಭಾನುಸಾರ ವಿಶೇಷವಾಗಿ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವುದು.
3. ನವೋತ್ಪತ್ತಿ ಮತ್ತು ತಂತ್ರಜ್ಞಾನ ಇಂಟಿಗ್ರೇಶನ್: ಸಹಕಾರಿ ಸಂಸ್ಥೆಗಳಲ್ಲಿ ಕೃತಕ ಬುದ್ಧಿಮತ್ತೆ (AI), ಬ್ಲಾಕ್‌ಚೇನ್ ಮತ್ತು ಡೇಟಾ ವಿಶ್ಲೇಷಣೆಗಳ ಬಳಕೆ.

**"ಸಹಕಾರಿ ಚಳವಳಿಯು ಮತ್ತು 'ವಿಕಸಿತ ಭಾರತ' ಗುರಿ"**

ಭಾರತ ಸರ್ಕಾರ 'ವಿಕಸಿತ ಭಾರತ 2047' ಗುರಿಯತ್ತ ಹೆಜ್ಜೆ ಹಾಕುತ್ತಿದೆ. ಸಹಕಾರಿ ಕ್ಷೇತ್ರವು ಇದರಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸಬಹುದು. ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಈ ಗುರಿಯನ್ನು ತಲುಪಲು ಕೆಳಕಂಡ ರೀತಿಗಳಲ್ಲಿ ಕೊಡುಗೆ ನೀಡಲಿದೆ.

1. ಆತ್ಮನಿರ್ಭರ ಭಾರತ: ಸಹಕಾರಿ ಸಂಸ್ಥೆಗಳು ಸ್ಥಳೀಯ ಮಟ್ಟದಲ್ಲಿ ಉತ್ಪಾದನೆ ಮತ್ತು ಮಾರಾಟವನ್ನು ಉತ್ತೇಜಿಸಿ ಭಾರತವನ್ನು ಆತ್ಮನಿರ್ಭರವಾಗಿ ರೂಪಿಸಲಿದೆ.
2. ಉದ್ಯೋಗ ಸೃಷ್ಟಿ: ಸಹಕಾರಿ ಕ್ಷೇತ್ರದ ವಿಸ್ತಾರದಿಂದ ಲಕ್ಷಾಂತರ ಯುವಕರಿಗೆ ಉದ್ಯೋಗ ಸಿಗಲಿದೆ.
3. ಕೃಷಿ ಕ್ಷೇತ್ರದಲ್ಲಿ ಕ್ರಾಂತಿ: ಕೃಷಿ ಸಹಕಾರಿ ಸಂಸ್ಥೆಗಳನ್ನು ಡಿಜಿಟಲ್ ತಂತ್ರಜ್ಞಾನಗಳಿಂದ ಸಂಪರ್ಕಿಸುವ ಮೂಲಕ ರೈತರ ಆದಾಯವನ್ನು ಹೆಚ್ಚಿಸಲಾಗುವುದು.
4. ಹಣಕಾಸು ಸೇರ್ಪಡೆ: ಸಹಕಾರಿ ಬ್ಯಾಂಕ್‌ಗಳು ಮತ್ತು ಕ್ರೆಡಿಟ್ ಸೊಸೈಟಿಗಳು ಗ್ರಾಮೀಣ ಭಾರತಕ್ಕೆ ಹಣಕಾಸು ಸೇವೆಗಳನ್ನು ಒದಗಿಸಲಿದೆ.
5. ಸ್ಥಳೀಯದಿಂದ ಜಾಗತಿಕ: ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಭಾರತೀಯ ಸಹಕಾರಿ ಸಂಘಟನೆಗಳನ್ನು ಜಾಗತಿಕ ಸ್ಪರ್ಧೆಗೆ ತಯಾರಿಸಲಿದೆ, ಇದರಿಂದ ಅವರು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ತಮ್ಮ ಗುರುತು ಹಚ್ಚಿಕೊಳ್ಳಬಹುದು.
6. ಹಸಿರು ಮತ್ತು ಸತತ ಅಭಿವೃದ್ಧಿ: ಸಹಕಾರಿ ಸಂಸ್ಥೆಗಳನ್ನು ಪರಿಸರ ಸ್ನೇಹಿ ನೀತಿಗಳೊಂದಿಗೆ ಸಂಪರ್ಕಿಸಲಾಗುವುದು, ಇದರಿಂದ ಸತತ ಅಭಿವೃದ್ಧಿಗೆ ಪ್ರೋತ್ಸಾಹ ಲಭಿಸಲಿದೆ.

**ನಿರ್ಣಯ:**


"ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಸಹಕಾರಿ ಚಳವಳಿಗೆ ಐತಿಹಾಸಿಕ ಹೆಜ್ಜೆಯಾಗಿರುತ್ತದೆ. ಈ ವಿಶ್ವವಿದ್ಯಾಲಯವು ಸಹಕಾರಿ ಶಿಕ್ಷಣವನ್ನು ಹೊಸ ಹಂತಕ್ಕೆ ಕೊಂಡೊಯ್ಯುತ್ತದೆ, ಇದರಿಂದ ಸಹಕಾರಿ ಸಂಸ್ಥೆಗಳ ಕಾರ್ಯ ಪ್ರೊಫೆಷನಲ್, ಆಧುನಿಕ ಮತ್ತು ಪರಿಣಾಮಕಾರಿಯಾಗಿ ರೂಪುಗೊಳ್ಳುತ್ತದೆ.

- ಇದು ಯುವಕರಿಗೆ ಪರ್ಯಾಯ ಮತ್ತು ಆಕರ್ಷಕ ವೃತ್ತಿ ಆಯ್ಕೆಯನ್ನು ಒದಗಿಸುತ್ತದೆ.
- ಸಹಕಾರಿ ಸಂಸ್ಥೆಗಳನ್ನು ಡಿಜಿಟಲ್ ಮತ್ತು ತಾಂತ್ರಿಕವಾಗಿ ಶಕ್ತಿಶಾಲಿಯಾಗಿಸುತ್ತದೆ.
- ಜಾಗತಿಕ ಸಹಕಾರಿ ಸಂಸ್ಥೆಗಳೊಂದಿಗೆ ಭಾರತದ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ.
- 'ವಿಕಸಿತ ಭಾರತ' ಗುರಿಯನ್ನು ತಲುಪುವಲ್ಲಿ ಸಹಕಾರಿ ಕ್ಷೇತ್ರದ ಪಾತ್ರವನ್ನು ಪರಿಣಾಮಕಾರಿಯಾಗಿ ರೂಪಿಸುತ್ತದೆ."

"ಈ ರೀತಿಯಲ್ಲಿ, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಭಾರತದ ಸಹಕಾರಿ ಚಳವಳಿಯನ್ನು ಚಿನ್ನದ ಯುಗದಲ್ಲಿ ಪ್ರವೇಶಿಸಲು ಕಾರಣವಾಗುವ ಐತಿಹಾಸಿಕ ಸಂಸ್ಥೆಯಾಗಲಿದೆ."

# ಜಗದ್ಗುರು ಶ್ರೀ ಆದಿ ಶಂಕರಚಾರ್ಯರ ಜೀವನ ಚರಿತ್ರೆ ಹಾಗೂ ಜಯಂತೋತ್ಸವ

– ಶ್ರೀ ವಿಶ್ವನಾಥ್ ಎಮ್, ಸಹಾಯಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಜಗದ್ಗುರು ಶ್ರೀ ಆದಿ ಶಂಕರ ಭಗವತ್ಪಾದರು ಸನಾತನ ಧರ್ಮದ ಪವಿತ್ರ ಸಂಪ್ರದಾಯವನ್ನು ಬೆಳೆಸಲು ಹನ್ನೆರಡು ಶತಮಾನಗಳಿಗೂ ಹಿಂದೆ ಶೃಂಗೇರಿಯಲ್ಲಿ ನಾಲ್ಕು ಆಮ್ನಾಯ ಪೀಠಗಳಲ್ಲಿ ಮೊದಲನೆಯದ್ದಾಗಿದೆ.

ಇಲ್ಲಿ ತಪಸ್ಸು ಮಾಡಿ ತಪಸ್ಸು ಮಾಡಿದ ಋಷ್ಯಶೃಂಗ ಋಷಿಗಳಿಂದ ಸರ್ವಕಾಲಿಕ ಪವಿತ್ರವಾದ ಶೃಂಗೇರಿ, ಅದ್ಭುತವಾದ ದೃಶ್ಯದಿಂದ ಮಹಾನ್ ಆಚಾರ್ಯರನ್ನು ಆಕರ್ಷಿಸಿತು.

ಸಂಪ್ರದಾಯದ ಪ್ರಕಾರ, ಆಚಾರ್ಯರು ದೇಶದಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ವೈದಿಕೇತರ ನಂಬಿಕೆಗಳನ್ನು ಚದುರಿಸಿದ ನಂತರ, ಅದ್ವೈತ ವೇದಾಂತದ ಸತ್ಯಗಳನ್ನು ಹರಡಲು ಒಂದು ಸಂಸ್ಥೆಯನ್ನು ಸ್ಥಾಪಿಸಲು ಅನುಕೂಲಕರ ಮತ್ತು ಪವಿತ್ರ ಸ್ಥಳವನ್ನು ಹುಡುಕುತ್ತಿದ್ದರು. ಆಚಾರ್ಯರು ಶೃಂಗೇರಿಗೆ ಬಂದಾಗ, ತುಂಗಾ ನದಿದಡದಲ್ಲಿ ಒಂದು ಅಸಮಾನ್ಯ ದೃಶ್ಯವನ್ನು ಕಂಡರು. ಮಧ್ಯಾಹ್ನದ ಸುಡುವ ಸೂರ್ಯನಿಂದ ನೆರಳು ನೀಡಲು ಹೆಬ್ಬಾವು ಹೆಗಲನ್ನು ಚಾಚಿಕೊಂಡಿದ್ದು ಕಂಡುಬಂದಿತು. ನೈಸರ್ಗಿಕ ವಿರೋಧಿಗಳ ನಡುವೆ ಪ್ರೀತಿಯನ್ನು ತುಂಬಬಲ್ಲ ಈ ಸ್ಥಳದ ಪಾವಿತ್ರ್ಯದಿಂದ ಪ್ರಭಾವಿತರಾದ ಆಚಾರ್ಯರು ತಮ್ಮ ಮಠವನ್ನು ಸ್ಥಾಪಿಸಲು ತೀರ್ಮಾನಿಸಿದರು.

ಮಾಧವೀಯ ಶಂಕರ ದಿಗ್ವಿಜಯಂನಲ್ಲಿ ವಿವರಿಸುವಂತೆ, ಆಚಾರ್ಯರು ಶೃಂಗೇರಿಯಲ್ಲಿ ಅನೇಕ ಸದ್ಗುಣಶೀಲ ಜನರನ್ನು ಭೇಟಿಯಾಗಿ ಅವರಿಗೆ ಅದ್ವೈತ ಸಿದ್ದಾಂತವನ್ನು ಬೋಧಿಸಿದರು. ನಂತರ ಅವರು ಜ್ಞಾನದ ದೇವತೆಯಾದ ಶಾರದಾ ದೇವಿಯನ್ನು ಪ್ರಾರ್ಥಿಸಿ ದೇವಿಯ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರು ಹೀಗೆ ವೇದಗಳನ್ನು ಮತ್ತು ಸನಾತನ ಧರ್ಮದ ಪವಿತ್ರ ಸಂಪ್ರದಾಯವನ್ನು ಪೋಷಿಸಲು ದಕ್ಷಿಣ ಭಾರತದ ಶೃಂಗೇರಿಯಲ್ಲಿ ಅವರು ಸ್ಥಾಪಿಸಿದ ಪೀಠವು ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಎಂದು ಪ್ರಸಿದ್ದವಾಯಿತು.

ಆಚಾರ್ಯರು ತಮ್ಮ ಪ್ರಧಾನ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರನ್ನು ಪೀಠದ ಮೊದಲ ಆಚಾರ್ಯರನ್ನಾಗಿ ನೇಮಿಸಿದರು. ಅಂದಿನಿಂದ ಪೀಠವು ಅವಿಚ್ಛಿನ್ನ ಗುರು ಪರಂಪರ, ಶ್ರೀ ಆದಿ ಶಂಕರಾಚಾರ್ಯರನ್ನು ಪ್ರತಿನಿಧಿಸುವ ಆಧ್ಯಾತ್ಮಿಕ ಗುರುಗಳು ಮತ್ತು ಜೀವನ್ಮುಕ್ತರ ಮಾಲೆಯಿಂದ ಆಶೀರ್ವದಿಸಲ್ಪಟ್ಟಿದೆ. ನಂತರದ ಆಚಾರ್ಯರು ಎಷ್ಟು ಕಠಿಣ ತಪಸ್ಸಿನ ಜೀವನವನ್ನು ನಡೆಸಿದ್ದಾರೆಂದರೆ, ಅದು ಶೀಘ್ರ ಶ್ರೀ ಆದಿ ಶಂಕರರ ತೇಜಸ್ಸನ್ನು ಅವರಲ್ಲಿ ಆರಾಧಿಸಲು ಕಾರಣವಾಯಿತು.

ಆಧ್ಯಾತ್ಮಿಕ ಶಕ್ತಿಯ ಕೇಂದ್ರವಾಗಿರುವುದರ ಜೊತೆಗೆ, ಶೃಂಗೇರಿಯು ಶಾರದಾ ದೇವಿಯ ಉಪಸ್ಥಿತಿ ಮತ್ತು ಪೀಠದ ಆಚಾರ್ಯರ ಪಾಂಡಿತ್ಯದಿಂದಾಗಿ ಸಾಂಪ್ರದಾಯಕ ಕಲಿಕೆಯ ಉತ್ತಮ ಸ್ಥಳವೆಂದು ಪ್ರಸಿದ್ದವಾಯಿತು. ಆಚಾರ್ಯರು ವೇದಗಳ ವ್ಯಾಖ್ಯಾನಗಳನ್ನು ಹೊರತರುವಲ್ಲಿ ಮತ್ತು ಶ್ರೀ ಆದಿ ಶಂಕರಾಚಾರ್ಯರ ಭಾಷ್ಯಗಳನ್ನು ಮತ್ತಷ್ಟು ವಿವರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಚಾರ್ಯರು ಅದ್ವೈತಕ್ಕೆ ಸಂಬಂಧಿಸಿದ ಹಲವಾರು ಸ್ವತಂತ್ರ ಕೃತಿಗಳನ್ನು ಬರೆದರು. ಜೊತೆಗೆ ಬಹುರೂಪಗಳಲ್ಲಿ ಪೂಜಿಸಲ್ಪಡುವ ಅದ್ವೈತ ಪರಮಾತ್ಮನಿಗೆ ಅವರ ಉತ್ಕಟ ಭಕ್ತಿಯನ್ನು ಒತ್ತಿಹೇಳುವ ಹಲವಾರು ಸ್ತೋತ್ರಗಳನ್ನು ರಚಿಸಿದರು. ಹೀಗೆ ಪೀಠವನ್ನು ವ್ಯಾಖ್ಯಾನ ಸಿಂಹಾಸನ, ಅತೀಂದ್ರೀಯ ಜ್ಞಾನದ ಸಿಂಹಾಸನ ಎಂದು ಪರಿಗಣಿಸಲಾಯಿತು. ಪರಿಣಾಮವಾಗಿ, ಬಿರುದಾವಳಿಯು ಆಚಾರ್ಯರನ್ನು ಈ ಸಿಂಹಾಸನದ ನಿವಾಸಿ ಎಂದು ಹೊಗಳುತ್ತದೆ. ಅನೇಕರು ಶಾರದಾ ದೇವಿಯನ್ನು ಪೀಠದ ಅಧ್ಯಕ್ಷತೆ ವಹಿಸುವ ಆಚಾರ್ಯರ ರೂಪದಲ್ಲಿ ಚಲಿಸುತ್ತಿದ್ದಾಳೆ ಎಂದು ಪರಿಗಣಿಸುತ್ತಾರೆ.

14ನೇ ಶತಮಾನದಲ್ಲಿ, 12ನೇ ಆಚಾರ್ಯರಾದ ಜಗದ್ಗುರು ಶ್ರೀ ವಿದ್ಯಾರಣ್ಯರ ದೈವಿಕ ಮಾರ್ಗದರ್ಶನದಲ್ಲಿ ಪ್ರಸಿದ್ದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಪೀಠಕ್ಕೆ ರಾಜಮನೆತನದ ಪ್ರೋತ್ಸಾಹ ಪ್ರಾರಂಭವಾಯಿತು. ಆಚಾರ್ಯರ ಕಠಿಣ ಪರಿಶ್ರಮವು ಆಡಳಿತಗಾರರ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿತು ಎಂದರೆ ಅವರು ಆಚಾರ್ಯರ ಹೆಸರಿನಲ್ಲಿ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಮತ್ತು ಪೀಠಕ್ಕೆ ಭೂಮಿಯ ಜಾತ್ಯಾತೀತ ಆಡಳಿತ ಹಕ್ಕುಗಳನ್ನು ನೀಡಿದರು. ಆಡಳಿತಗಾರರ ಕೋರಿಕೆಯ ಮೇರೆಗೆ, ಆಚಾರ್ಯರು ನವರಾತ್ರಿ ಹಬ್ಬದ ಸಮಯದಲ್ಲಿ ದರ್ಬಾರ್ ನಡೆಸಲು ಪ್ರಾರಂಭಿಸಿದರು. ಆಡಳಿತಗಾರರು ತಮ್ಮ ಗುರುಗಳನ್ನು ಗೌರವಿಸಲು ಈ ಸಂಧರ್ಭವನ್ನು ಪರಿಗಣಿಸಿದರು. ಒಂದು ಸಂಸ್ಥಾನ ಮತ್ತು ಇಂದಿಗೂ ಶೃಂಗೇರಿಯಲ್ಲಿ ಜಗದ್ಗುರು ಶಂಕರಾಚಾರ್ಯ

ಮಹಾಸಂಸ್ಥಾನಂ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಎಂದು ಕರೆಯಲಾಗುತ್ತದೆ. ನಂತರದ ಶತಮಾನಗಳಲ್ಲಿ ಮೈಸೂರು ಮಹಾರಾಜರಾದ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ್, ಹೈದರಬಾದ್‌ನ ನಿಜಾಮ್ ಪೇಶ್ವೆಗಳು ಮತ್ತು ಕೆಳದಿ ಆಡಳಿತಗಾರರು ಮತ್ತು ತಿರುವಾಂಕೂರು ರಾಜರು ಸೇರಿದಂತೆ ಹಲವಾರು ಸಾಮ್ರಾಜ್ಯಗಳು ಮತ್ತು ಆಡಳಿತಗಾರರು ಪೀಠದ ಕಡೆಗೆ ಆಕರ್ಷಿತರಾದರು ಮತ್ತು ಆಚಾರ್ಯರನ್ನು ತಮ್ಮ ಗುರುಗಳೆಂದು ಗೌರವಿಸಿದರು.

**ಅವತಾರ ಎಂದರೇನು :**

ತಪ್ಪಾದ ಮಾನವಕುಲವನ್ನು ಸರಿಯಾದ ಮಾರ್ಗಕ್ಕೆ ಮರಳಿ ತರಲು ಪರಮಾತ್ಮನು ಕಾಲಕಾಲಕ್ಕೆ ರೂಪ ತಾಳುತ್ತಾನೆ. ತನ್ನ ಸರ್ವವ್ಯಾಪಿ ಚೈತನ್ಯವನ್ನು ಪ್ರಭಾವಿಸಿದೆ ಬಿಟ್ಟು ಅವನು ಒಂದು ರೂಪ ಸ್ಥಳ ಮತ್ತು ಸಮಯವನ್ನು ಆರಿಸಿಕೊಂಡು ಅವತರಿಸುತ್ತಾನೆ. ಅವನು ತೆಗೆದುಕೊಳ್ಳುವ ರೂಪ ಮತ್ತು ಸ್ವಭಾವವು ಅವತಾರಕ್ಕೆ ಕಾರಣವಾಗುವ ಕಾರಣ ಮತ್ತು ಸಂದರ್ಭಗಳನ್ನು ಅವಲಂಬಿಸಿರುತ್ತಾರೆ. ಅವತಾರಗಳು ಪರಮಾತ್ಮನು ತನ್ನನ್ನು ತಾನು ವ್ಯಕ್ತಪಡಿಸುವ ವಾಹನಗಳು ಅಥವಾ ಮಾಧ್ಯಮದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಭಿನ್ನವಾಗಿರುತ್ತವೆ. ಜೀವನ ಮತ್ತು ಧರ್ಮದ ಶಾಶ್ವತ ತತ್ವಗಳು ಮತ್ತು ಮೌಲ್ಯಗಳ ಉದ್ದೇಶವನ್ನು ಪ್ರತಿಪಾದಿಸುವ ಅಥವಾ ಸಮರ್ಥಿಸುವ ಮತ್ತು ಮಹತ್ತರವಾದ ವಿಷಯಗಳನ್ನು ಸಾದಿಸುವ ಅತಿಮಾನಿಷ ಶಕ್ತಿಯ ಮಹಾನ್ ವ್ಯಕ್ತಿತ್ವದ ಹೊರಹೊಮ್ಮುವಿಕೆಯನ್ನು ನಾವು ಕಂಡುಕೊಂಡಾಗಲೆಲ್ಲಾ ನಾವು ಅದನ್ನು 'ಅವತಾರ' ಎಂದು ಕರೆಯುವುದು ಸೂಕ್ತವಾಗಿದೆ. ಅವತಾರದ ಅಂತಿಮ ಉದ್ದೇಶವು ಯಾವಾಗಲು ಜಗತ್ತಿನಲ್ಲಿ ಧರ್ಮ ಸರಿಯಾದ ಮೌಲ್ಯಗಳ ಮರುಸ್ಥಾಪನೆಯಾಗಿದೆ. ಅದರಂತೆ, ನಾವು ಶ್ರೀ ಭಗವತ್ಪಾದ ಶಂಕರಾಚಾರ್ಯರು ಕೇವಲ ಮಹಾನ್ ಚಿಂತಕರು ಮತ್ತು ಅದ್ವೈತ ತತ್ವಜ್ಞಾನಿಗಳಲ್ಲಿ ಶ್ರೇಷ್ಠರು ಮಾತ್ರವಲ್ಲದೆ ಅವರು ಮೂಲಭೂತವಾಗಿ ಹಿಂದೂ ಧರ್ಮದ ಪ್ರೇರಿತ ಪ್ರತಿಪಾದಕ ಮತ್ತು ನಮ್ಮ ದೇಶದ ಅತ್ಯಂತ ಕಠಿಣಮಿಷನರಿ ನಾಯಕರಲ್ಲಿ ಒಬ್ಬರಾಗಿದ್ದರು. ಆದಿ ಶಂಕರರ ಪ್ರತಿಭೆಗೆ ನಾವು ಎಷ್ಟೇ ಶ್ರೇಷ್ಠತೆಯನ್ನು ಬಯಸಿದರು. ಶಂಕರ ಎಂದು ನಮಗೆ ತಿಳಿದಿರುವ ಆ ಅತೀಂದ್ರೀಯನ ಒಂದು ಸಣ್ಣ ಅಂಶವನ್ನು ಸಹ ವಿವರಿಸಲು ಪದಗಳು ಸಾಲದು.

**ಶ್ರೀ ಶಂಕರ ಭಗವತ್ಪಾದ ಆಚಾರ್ಯರ ಅವತಾರದ ಪ್ರಮುಖ ಸಂದೇಶಗಳು :**

ಅದ್ಭುತ ನಾಯಕತ್ವದ ಮತ್ತೊಂದು ಮಹತ್ವದ ಅಂಶವೆಂದರೆ ದೃಷ್ಟಕೋನ ಮತ್ತು ಬಹುಮುಖತೆ. ಇದನ್ನು ಆಚಾರ್ಯ ಶ್ರೀ ಶಂಕರರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ನಿರೂಪಿಸಿದರು. ಎಲ್ಲಾ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು, ತೀಕ್ಷ್ಣವಾದ ಬುದಗದಿಶಕ್ತಿಯನ್ನು ಹೊಂದಿದ್ದರು ಮತ್ತು ಎಲ್ಲರಿಗೂ ತಮ್ಮ ಸಂದೇಶವನ್ನು ಹರಡಲು ಸಮರ್ಪಿತರಾಗಿದ್ದರು. ಶ್ರೀ ಶಂಕರರ ಭವಿಷ್ಯದ ದೃಷ್ಟಿಕೋನವು ಸತ್ಯದ ವೈಭವವನ್ನು ಪ್ರಚಾರ ಮಾಡಲು ಬಳಸುವ ವಿಧಾನಗಳಲ್ಲಿ ಸ್ಪಷ್ಟವಾಗಿದೆ ಅಂತರ್ ಪ್ರಮಾಣದ ಮೂಲಕ ಜನರೊಂದಿಗೆ ನೇರ ಸಂಪರ್ಕ, ಇಡೀ ದೇಶವನ್ನು ಆವರಿಸುವ ನಾಲ್ಕು ರೋಮಾಂಚಕ ಆದ್ಯಾತ್ಮಿಕ ಕಲಿಕೆಯ ಕೇಂದ್ರಗಳ ಸ್ಥಾಪನೆಯಲ್ಲಿ ಕೊನೆಗೊಳ್ಳುತ್ತದೆ.

ನಮ್ಮ ದೇಶದ ನಾಲ್ಕು ಭಾಗಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ, ದೇವಾಲಯಗಳನ್ನು ತೆರೆದು, ಶಿಕ್ಷಣ ಮಂದಿರಗಳನ್ನು ಸಂಘಟಿಸಿ, ಈ ಪರಾಕ್ರಮ ಗುರು ತಾನು ಸಾದಿಸಿದ್ದನ್ನು ಉಳಿಸಿಕೊಳ್ಳುವಲ್ಲಿ ಏನನ್ನೂ ಬಿಟ್ಟುಕೊಡಲಿಲ್ಲ. ನಾಲ್ಕು ಮಠಗಳಲ್ಲಿ ಪೂರ್ವ ಮತ್ತು ಪಶ್ಚಿಮದಲ್ಲಿ ಎರಡು ಮಠಗಳನ್ನು ಸಮುದ್ರ ತೀರದಲ್ಲಿ ಸ್ಥಾಪಿಸಲಾಯಿತು, ಆದರೆ ಉತ್ತರ ಮತ್ತು ದಕ್ಷಿಣದಲ್ಲಿ ಮಠಗಳನ್ನು ಪರ್ವತ ಪ್ರದೇಶಗಳಲ್ಲಿ ಸ್ಥಾಪಿಸಲಾಯಿತು.

**ಅಮ್ನಾಯ ಪೀಠಗಳು :**

ಮಹಾನ್ ಆಚಾರ್ಯ ಶ್ರೀ ಶಂಕರ ಭಗವತ್ಪಾದರ ಸೇವೆ ಮಾಡುವ ಅಪರೂಪದ ಮತ್ತು ಅಮೂಲ್ಯವಾದ ಸೌಭಾಗ್ಯವನ್ನು ಪಡೆದ ಅಪಾರ ಸಂಖ್ಯೆಯ ಶಿಷ್ಯರಲ್ಲಿ ನಾಲ್ವರು ಪ್ರಮುಖರು ಎದ್ದು ಕಾಣುತ್ತಾರೆ. ಅವರಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಅಪ್ರತಿಮರಾಗಿದ್ದರು. ತೀವ್ರವಾದ ಭಕ್ತಿಗಾಗಿ ಪದ್ಮಪಾದ, ಅನುಕರಣೀಯ ಸೇವೆಗಾಗಿ ತೋಟಕ, ಪರಮ ಆತ್ಮಸಾಕ್ಷಾತ್ಕಾರಕ್ಕಾಗಿ ಹಸ್ತಮಲಕ ಮತ್ತು ಆಳವಾದ ಕಲಿಕೆಗಾಗಿ ಸುರೇಶ್ವರ.

ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು ದೇಶದಲ್ಲಿ ಸನಾತನ ಧರ್ಮದ ಪೋಷಣೆ ಮತ್ತು ಪ್ರಚಾರಕ್ಕಾಗಿ ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಪ್ರತಿಯೊಂದು ಅಮ್ನಾಯ ಪೀಠಗಳು ತಮ್ಮದೇ ಆದ ದೇವತೆಗಳು, ತೀರ್ಥಗಳು, ಸಂಪ್ರದಾಯಗಳನ್ನು ಹೊಂದಿದ್ದವು,


ಶ್ರೀ ಆದಿ ಶಂಕರಾಚಾರ್ಯರ ನಾಲ್ವರು ಶಿಷ್ಯರನ್ನು ನಂತರ ಶ್ರೀ ಆದಿ ಶಂಕರಾಚಾರ್ಯರೇ ನಾಲ್ಕು ಮಠಗಳ ಆಚಾರ್ಯರನ್ನಾಗಿ ಈ ಕೆಳಗಿನಂತೆ ನೇಮಕವನ್ನು ಮಾಡಿದರು.

- ಪೂರ್ವದ ಗೋವರ್ಧನ ಮಠದ ಆಚಾರ್ಯರಾಗಿ : ಶ್ರೀ ಹಸ್ತಮಲಕಾಚಾರ್ಯರು.
- ದಕ್ಷಿಣದ ಶೃಂಗೇರಿ ಶಾರದಾ ಪೀಠದ ಆಚಾರ್ಯರಾಗಿ : ಶ್ರೀ ಸುರೇಶ್ವರಚಾರ್ಯರು.
- ಪಶ್ಚಿಮದ ದ್ವಾರಕಾ ಮಠದ ಆಚಾರ್ಯರಾಗಿ : ಶ್ರೀ ಪದ್ಮಪಾದಾಚಾರ್ಯರು.
- ಉತ್ತರದ ಜ್ಯೋತಿರ್ ಮಠದ ಆಚಾರ್ಯರಾಗಿ : ಶ್ರೀ ತೋಟಕಾಚಾರ್ಯರು.

ಈ ಎಲ್ಲಾ ಮಠಗಳು ಇಂದಿಗೂ ಕಾರ್ಯನಿರ್ವಹಿಸುತ್ತಿರುವುದು ಶಂಕರ ಸನಾತನ ಧರ್ಮದ ಪ್ರಚಾರಕ್ಕಾಗಿ ಪ್ರಾರಂಭಿಸಿದ ಚಳುವಳಿಯ ಚೈತನ್ಯವನ್ನು ತೋರಿಸುತ್ತದೆ.

# ರಾಮಾನುಜಾಚಾರ್ಯ ಜಯಂತಿ ವಿಶೇಷ: ಭಕ್ತಿ ಮಾರ್ಗದ ಯತಿರಾಜ

– ಶ್ರೀ ಶಿವಕುಮಾರ ಬಿರಾದರ, ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಶ್ರೀರಾಮಾನುಜಾಚಾರ್ಯರು ಭಕ್ತಿಯನ್ನು ಪ್ರಮುಖವಾಗಿ ಸಾರಿದ ಮಹನೀಯರು. ಭಗವಂತನಲ್ಲಿ ಅನನ್ಯವಾದ ಶ್ರದ್ಧೆಯಿಂದ ಸಂಪೂರ್ಣವಾದ ಶರಣಾಗತಿಯನ್ನು ಹೊಂದಿ ಯಾವುದೇ ಕರ್ಮವನ್ನು ಭಗವಂತನ ಸೇವೆ ಕೈಂಕರ್ಯ ಎಂದು ಭಾವಿಸಿಕೊಂಡು ಮಾಡಬೇಕು ಎಂದು ಅವರು ಹೇಳುತ್ತಾರೆ. ಹೀಗೆ ಆಚರಿಸುವ ಯಾವ ವ್ಯಕ್ತಿಗೇ ಆಗಲಿ ಭಗವಂತನ ಸಾಕ್ಷಾತ್ಕಾರ ಸಾಧ್ಯವಿದೆ ಎಂದು ವಿವರಿಸಿದ ಅವರ ಜೀವನದಲ್ಲಿ ಕೂಡ ಇಂತಹ ಒಂದು ಘಟನೆ ನಡೆದದ್ದನ್ನು ನಾವು ಕೇಳುತ್ತೇವೆ.

ಧನುರ್ದಾಸನೆಂಬ ಒಬ್ಬನು ಹೇಮಾಂಬ ಎಂಬ ಸ್ತ್ರೀಯಲ್ಲಿ ಅನುರಕ್ತನಾಗಿದ್ದ. ಲೌಕಿಕ ಜಗತ್ತಿನಲ್ಲಿ ಆಸಕ್ತರಾದ ಎಲ್ಲರ ಹಾಗೆಯೇ ಅವನಿಗೆ ಕೂಡ ತನ್ನ ಪ್ರಿಯೆಯಾದ ಹೇಮಾಂಬಳ ಸೌಂದರ್ಯವೊಂದೇ ಶ್ರೇಷ್ಠವಾದದ್ದೆಂದು ಭಾವನೆಯಿತ್ತು. ಶ್ರೀ ರಾಮಾನುಜರನ್ನು ಕಂಡಾಗ ಅವರು "ಈ ಸೌಂದರ್ಯ ಶಾಶ್ವತವಾದದ್ದಲ್ಲ" ಎಂದು ಹೇಳಿದರು. ಅವನು ಅವರ ಮಾತಿನಿಂದ ಗೊಂದಲಗೊಂಡು "ಇವಳ ಕಣ್ಣುಗಳಿಗಿಂತ ಸುಂದರವಾದ ಕಣ್ಣುಗಳೇ ಇಲ್ಲ; ಸನ್ಯಾಸಿಗಳಾದ ನಿಮಗೆ ಸೌಂದರ್ಯಪ್ರಜ್ಞೆ ಎಲ್ಲಿಯದು?" ಎಂದೆಲ್ಲ ಹೇಳಿದ. ಆಚಾರ್ಯರು ಅವನನ್ನು ಶ್ರೀರಂಗದ ರಂಗನಾಥಸ್ವಾಮಿಯ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರನ್ನು ತೋರಿಸಿದರು. ಧನುರ್ದಾಸನು ಅವರಲ್ಲಿ ಸಂಪೂರ್ಣವಾದ ನಂಬಿಕೆಯನ್ನು ಇಟ್ಟುಕೊಂಡು ನೋಡಿದ ಕಾರಣ ಶ್ರೀರಂಗನಾಥಸ್ವಾಮಿಯು ಆ ಮೂರ್ತಿಯಲ್ಲಿಯೇ ತನ್ನ ತೇಜೋಮಯವಾದ ಕಣ್ಣುಗಳನ್ನು ತೆರೆದು ಅವರಿಗೆ ದರ್ಶನವನ್ನು ಕೊಟ್ಟನು ಎಂದು ಪ್ರತೀತಿ. ಹೀಗೆ ಆ ಭಗವಂತನ ಕಣ್ಣುಗಳ ಸೌಂದರ್ಯವನ್ನು ನೋಡಿದ ಬಳಿಕ ಧನುರ್ದಾಸ ಶ್ರೀರಾಮಾನುಜರ ಮಹತ್ವವನ್ನು ಒಪ್ಪಿಕೊಂಡು ಅವರ ಶಿಷ್ಯನಾದ. ಅವನು ಕೆಳಜಾತಿಯವನೆಂದು ಅವನಲ್ಲಿ ಅನಾದರವನ್ನು ತೋರಿಸುತ್ತಿದ್ದ ಆಚಾರ್ಯರ ಶಿಷ್ಯರಿಗೆ ಅವನ ಮೇಲ್ಮೆಯನ್ನು ತೋರಿಸಿ ಭಗವಂತನ ಭಕ್ತರಾದವರಿಗೆ ವಿದ್ಯಾಮದ, ಧನಮದ, ಕುಲಮದ – ಇವುಗಳೆಲ್ಲ ಇರಬಾರದೆಂದು ತಿಳಿಸಿದರಂತೆ.

ಇಂತಹದೇ ಇನ್ನೊಂದು ಬಹುಪ್ರಸಿದ್ಧವಾದ ಪ್ರಸಂಗವನ್ನೂ ಕೇಳುತ್ತೇವೆ. ತಿರುಕ್ಕೊಟ್ಟಿಯೂರ್ ನಂಬಿ ಅಥವಾ ಗೋಷ್ಠಿಪೂರ್ಣರು ಎಂಬುವವರ ಬಳಿ ಆಚಾರ್ಯರು ತಿರುಮಂತ್ರದ ಉಪದೇಶವನ್ನು ಪಡೆಯಲು ಹೋದರು. ಅವರು ಇವರ ತಾಳ್ಮೆಯನ್ನು ಪರೀಕ್ಷಿಸುವುದಕ್ಕೋಸ್ಕರ ಪ್ರತಿ ಬಾರಿಯೂ "ಕೆಲವು ದಿನಗಳನ್ನು ಬಿಟ್ಟು ಬಾ" ಎಂದು ಹೇಳಿ ಕಳುಹಿಸುತ್ತಿದ್ದರಂತೆ. ಹೀಗೆ ಹದಿನೇಳು ಬಾರಿ ಆದ ಮೇಲೆ ಹದಿನೆಂಟನೇ ಸಲ ಅವರ ಬಳಿ ಬಂದಾಗ ದಿವ್ಯವಾದ ತಿರುಮಂತ್ರವನ್ನು ಅರ್ಥಸಹಿತವಾಗಿ ಉಪದೇಶಿಸಿದರಂತೆ. ಈ ಶರಣಾಗತಿಮಂತ್ರವನ್ನು ತಿಳಿದುಕೊಂಡು ಉಚ್ಚರಿಸಿದರೆ ಪದತಿ ದೊರೆಯುತ್ತದೆಯೆಂದೂ ಅದು ಜನತಾವಾನರಿಗೆ ಉಪದೇಶಿಸದೇ ರಹಸ್ಯವಾಗಿರಿಸಿಕೊಳ್ಳಬೇಕೆಂದೂ, ತನ್ನ ಮಾತನ್ನು ಮೀರಿದರೆ ನರಕಕ್ಕೆ ಹೋಗಬೇಕಾಗುತ್ತದೆಯೆಂದೂ ಎಚ್ಚರಿಸಿದರು. ಶ್ರೀರಾಮಾನುಜಾಚಾರ್ಯರು ಅಂದೇ ದೇವಸ್ಥಾನದ ಗೋಪುರವನ್ನು ಏರಿನಿಂತು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಹೇಳಿ ಅರ್ಥಸಹಿತ ಉಪದೇಶಿಸಿದರಂತೆ. ಗೋಷ್ಠಿಪೂರ್ಣರು ಇದನ್ನು ಕೇಳಿ ಸಿಟ್ಟಾದಾಗ ಶ್ರೀರಾಮಾನುಜರು "ಇಷ್ಟೊಂದು ಜನರಿಗೆ ಸದ್ಗತಿ ಯುಂಟಾಗುತ್ತದೆಯೆಂದಾದರೆ ನಾನೊಬ್ಬ ನರಕವನ್ನು ಅನುಭವಿಸಲೂ ಸಿದ್ಧ" ಎಂದು ಹೇಳಿದರಂತೆ. ಗುರುಗಳು ಅವರ ಹೃದಯ ವೈಶಾಲ್ಯವನ್ನು ಕಂಡು ಬೆರಗಾಗಿ ಮೆಚ್ಚಿಕೊಂಡು ಬಿಗಿದಪ್ಪಿ ಹರಸಿದರಂತೆ.

ಹೀಗೆ ಎಲ್ಲ ಜೀವಿಗಳಲ್ಲಿಯೂ ಸಮಾನತೆಯನ್ನು ಕಂಡು ಎಲ್ಲರ ಸದ್ಗತಿಯನ್ನೂ ಬಯಸಿದ್ದ ಯತಿರಾಜರಾದ ಶ್ರೀರಾಮಾನುಜಾಚಾರ್ಯರದ್ದು ನೂರಿಪ್ಪತ್ತು ವರ್ಷಗಳ ಪೂರ್ಣಾಯುಷ್ಯದ ಜೀವನ. ಹುಟ್ಟಿದ್ದು ತಮಿಳುನಾಡಿನ ಶ್ರೀಪೆರುಂಬುದೂರಿನಲ್ಲಿ ತಮ್ಮ ಜೀವಿತದಲ್ಲಿ ಶ್ರೀರಂಗ, ಕಾಂಚೀಪುರ ಮೊದಲಾದ ಕ್ಷೇತ್ರಗಳಲ್ಲಿ ಅಲ್ಲದೇ ನಮ್ಮ ಕರ್ನಾಟಕದ ಹೊಯ್ಸಳ ವಿಷ್ಣುವರ್ಧನನ ಬಳಿಗೂ ಬಂದಿದ್ದರು ಹಾಗೂ ಯದುಗಿರಿ ಎಂದು ಪ್ರಖ್ಯಾತವಾಗಿರುವ ಮೇಲುಕೋಟೆಯ ದೇವಾಲಯವನ್ನು ಸ್ಥಾಪಿಸಿ ಪೂಜಾವಿಧಾನಗಳನ್ನು ನಿಯಮಿಸಿ ದೆಹಲಿಯ ಸುಲ್ತಾನನ ವಶದಿಂದ ಅಲ್ಲಿರುವ ಶೆಲ್ವಪಿಳ್ಳೆ ಎಂಬ ಮೂರ್ತಿಯನ್ನು ತೆಗೆದುಕೊಂಡು ಬಂದು ಉತ್ಸವಮೂರ್ತಿಯಾಗಿ ಪ್ರತಿಷ್ಠಾಪಿಸಿದರೆಂದೂ ತಿಳಿದುಬರುತ್ತದೆ.

ಬ್ರಹ್ಮಸೂತ್ರಗಳಿಗೆ ಪ್ರಸಿದ್ಧವಾದ ಶ್ರೀಭಾಷ್ಯವೇ ಮೊದಲಾಗಿ ಪಾಂಡಿತ್ಯ ಪೂರ್ಣವಾದ ಅನೇಕ ಗ್ರಂಥಗಳನ್ನು ರಚಿಸಿದ್ದಲ್ಲದೇ ಸಾಮಾನ್ಯ ಜನರಿಗೂ ಸದ್ಗತಿ ಸುಲಭವಾಗಿ ದೊರೆಯುವ ಭಕ್ತಿ ಶರಣಾಗತಿಯ ಮಾರ್ಗವನ್ನು ವಿಶೇಷವಾಗಿ ಪ್ರತಿಪಾದಿಸಿ ವಿಶಿಷ್ಟಾದ್ವೈತ ಪರಂಪರೆಯನ್ನು ಪ್ರಚುರಪಡಿಸಿದವರು ಶ್ರೀರಾಮಾನುಜಾಚಾರ್ಯರು.

## ಬುದ್ಧ ಪೂರ್ಣಿಮಾ ವಿಶೇಷ: ಗೌತಮ ಬುದ್ಧ ಎಲ್ಲ ಕಾಲದ ವೈದ್ಯ



ಒಳಿತು ಯಾರಿಗೆ ತಾನೆ ಬೇಡ? ಎಲ್ಲರಿಗೂ ಬೇಕಷ್ಟೆ. ಅದರಲ್ಲೂ ನಮ್ಮ ಸದ್ಯದ ಕಾಲಕ್ಕಂತೂ ಇದು ತುಂಬ ತುರ್ತಾಗಿ ಬೇಕಾಗಿದೆ. ಒಳಿತು ಎಂದರೆ ಯಾವುದು? ಮಂಗಳಕರವಾದದ್ದೇ ಒಳಿತು. ಎಲ್ಲರ ಹಿತವನ್ನು ಎತ್ತಿಹಿಡಿಯುವಂಥದ್ದೇ "ಮಂಗಳ". ಈ ಮಂಗಳದ ಹುಡುಕಾಟ ಕೇವಲ ನಮ್ಮ ಕಾಲದ ಪ್ರಶ್ನೆಯಷ್ಟೆ ಅಲ್ಲ; ಅದು ಸಾವಿರಾರು ವರ್ಷಗಳಿಂದ ನಡೆದಿರುವ ಹುಡುಕಾಟ. ಇದು ಕೇವಲ ಮನುಷ್ಯರ ಹುಡುಕಾಟವೂ ಅಲ್ಲವೆನ್ನಿ! ದೇವತೆಗಳೂ ಈ ಹುಡುಕಾಟದಲ್ಲಿ ಮನುಷ್ಯರ ಜೊತೆ ಒಮ್ಮೆ ಸೇರಿಕೊಂಡರಂತೆ. ದಿಟವಾದ ಮಂಗಳ ಎಲ್ಲಿ ಸಿಗುತ್ತದೆ ಎಂದು ಹುಡುಕಾಟ ನಡೆಸಿದರು. ಹೀಗೆ ಹನ್ನೆರಡು ವರ್ಷಗಳು ಹುಡುಕಿ ಹುಡುಕಿ ಸೋತರಂತೆ. ಕೊನೆಗೆ ಬುದ್ಧ ಭಗವಂತ ಅವರಿಗೆಲ್ಲ ಮಂಗಳದ ದಾರಿಯನ್ನು ತೋ–ರಿದನಂತೆ; ಮಂಗಳಗಳು ಮೂವತ್ತೆಂಟು ಬಗೆ ಎಂದು ಅವನು ಒಕ್ಕಣಿಸಿದ.

ಇದು ಬೌದ್ಧವಾಙ್ಮಯದಲ್ಲಿ ಬರುವ ವಿವರ. ಬುದ್ಧ ಉಪದೇಶಿಸಿದ ಮೊದಲನೆಯ ಮಂಗಳವೇ "ಮೂರ್ಖರ ಸಹವಾಸವನ್ನು ತೊರೆಯಿರಿ" (ಅಸೇವನಾ ಚ ಬಾಲಾನಂ): ಮೂರ್ಖರಿಂದ ದೂರವಾಗಿ, ಜ್ಞಾನಿಗಳನ್ನು ಸೇರಿಕೊಳ್ಳಿ' (ಪಂಡಿತಾನಞ್ಚ ಸೇವನಾ) ಇದು ಅವನು ಕಾಣಿಸಿದ ಎರಡನೆಯ ಮಂಗಳ.

ಬುದ್ಧ ಉಪದೇಶಿಸಿದ ಮಂಗಳದ ದಾರಿಯಲ್ಲಿರುವುದೆಲ್ಲವೂ ನಮ್ಮ ವ್ಯಕ್ತಿತ್ವವನ್ನು ಶುದ್ಧವಾಗಿಯೂ ಸುಂದರವಾಗಿಯೂ ಸಾರ್ಥಕವಾಗಿಯೂ ರೂಪಿಸಿಕೊಳ್ಳುವ ವಿಧಿ–ವಿಧಾನಗಳೇ ಎನ್ನುವುದು ಗಮನಾರ್ಹ. ಬುದ್ಧ ಪ್ರಧಾನವಾಗಿ ಉಪದೇಶಿಸಿದ್ದೇ ಶೀಲಗಳನ್ನು: ಎಂದರೆ ನಮ್ಮ ಮೈ–ಮನಸ್ಸುಗಳ ಕೊಳೆಯನ್ನು ಕಳೆದು, ಕಾಂತಿಯನ್ನು ಒದಗಿಸುವಂಥ ಶಾರೀರಿಕ ಮತ್ತು ಮಾನಸಿಕ ಸಾಧನೆಗಳನ್ನು. "ಧಮ್ಮಪದ"ದ ಈ ಒಂದು ಸೊಲ್ಲಿನಲ್ಲಿ ಬುದ್ಧ ಭಗವಂತನ ಉಪದೇಶದ ಸಾರವನ್ನೂ ಇದೆ ಎಂದರೆ ತಪ್ಪಾಗದು:

**ಸಬ್ಬ ಪಾಪಸ್ಸ ಅಕರಣಂ**

**ಕುಶಲ ಆಯುಧಗಳು.**

**ಸಚಿತ್ತ ಪರಿಯೋದಪನಂ**

**ಏತಂ ಬುದ್ಧಾನ ಸಾಸನಂ**

"ಯಾವ ಪಾಪವನ್ನೂ ಮಾಡಬಾರದು: ಕುಶಲವನ್ನು ಸಂಪಾದಿಸಿಕೊಳ್ಳಬೇಕು; ತನ್ನ ಚಿತ್ತವನ್ನು ಪರಿಶುದ್ಧಿಗೊಳಿಸಿಕೊಳ್ಳಬೇಕು. ಇದೇ ಬುದ್ಧನ ಅನುಶಾಸನ."

ಈ ಗಾಥೆಯನ್ನು ಬುದ್ಧನ ಉಪದೇಶದ ತ್ರಿವೇಣಿ ಸಂಗಮ ಎನ್ನಬಹುದು; ಶೀಲ, ಪ್ರಜ್ಞಾ ಮತ್ತು ಸಮಾಧಿ – ಎಂಬ ಮೂರು ತತ್ತ್ವಗಳು ಇದರಲ್ಲಿ ಅಡಕವಾಗಿವೆ. ಬುದ್ಧ ಎತ್ತಿಹಿಡಿದಿದ್ದು ಈ ಮೂರು ವಿವರಗಳನ್ನೇ ಹೌದೆನ್ನಿ.

ಎಲ್ಲ ಮಹಾತ್ಮರ ವಿಷಯದಲ್ಲಿ ಆಗುವಂತೆ ಬುದ್ಧ ಭಗವಂತನ ವಿಷಯದಲ್ಲೂ ನಮ್ಮ ಗ್ರಹಿಕೆ ಸಂಕುಚಿತವಾಗಿದೆ. ಇದು ನಮ್ಮ ಸಮಾಜದ ದುರಂತವೇ ಸರಿ. "ಬುದ್ಧ" ಎಂಬ ಮಹಾತತ್ತ್ವವೂ ಇಂದು ನಮ್ಮ ರಾಗ–ದ್ವೇಷಗಳ ಸಮರ್ಥನೆಯ ದಾಳವಾಗಿದೆ. ಸಿದ್ದಾರ್ಥ ತಪಸ್ಸಿಗೆ ಕುಳಿತಾಗ ಮಾರ ಅವನ ಮೇಲೆ ದಾಳಿ ಮಾಡಿದ. ಮಾರನೆಂಬುವನು ಕುದ್ರ ಬಯಕೆಗಳ ಪ್ರತಿನಿಧಿ: ಶರೀರ–ಮನಸ್ಸು–ಬುದ್ಧಿಗಳನ್ನು ಕೊಳೆಮಾಡುವ ವಂಚಕ. ಸಿದ್ಧಾರ್ಥನ ಮೇಲೆ ಅವನು ಏಳು ವರ್ಷಗಳು ಸಮರ ಸಾರಿದ. ಆದರೆ ಸಿದ್ಧಾರ್ಥ ಅವನಿಗೆ ಸೋಲಲಿಲ್ಲ; ಮಾರನಿಂದ ಗೆದ್ದ ಸಿದ್ಧಾರ್ಥ, ಕೊನೆಗೆ ಬುದ್ಧನಾಗಿ ಎದ್ದ. ಆದರೆ ನಾವು ಇಂದು ಮಾರನ ಪ್ರತಿನಿಧಿಗಳಾಗಿಯೇ ಬುದ್ಧನನ್ನು ವ್ಯಾಖ್ಯಾನಿಸುತ್ತಿದ್ದೇವೆ; ನಮ್ಮ ಸ್ವಾಥ–ರ್ಕೇಂದ್ರಿತ ಸಂಕುಚಿತ ಸಿದ್ಧಾಂತಗಳಿಂದ ಅವನ ದರ್ಶನವನ್ನು ಮಂಕುಗೊಳಿಸುತ್ತಿದ್ದೇವೆ. ಬುದ್ಧತ್ವ ಎಂಬುದು ಪೂರ್ಣತೆಗೆ ಸಂಕೇತ.

ಬುದ್ಧ ಹುಟ್ಟಿದ್ದು, ಬೋಧಿಯನ್ನು ಪಡೆದದ್ದು, ಮಹಾನಿರ್ವಾಣವನ್ನು ಹೊಂದಿದ್ದು – ಎಲ್ಲವೂ ಹುಣ್ಣಿಮೆಯಂದೇ ಹುಣ್ಣಿಮೆ ಪೂರ್ಣತೆಗೆ ಸಂಕೇತ; ಜೊತೆಗೆ ಆಹ್ಲಾದಕ್ಕೂ ದ್ಯೋತಕ. ಆದರೆ ಪೂರ್ಣತೆಯನ್ನು ಕಾಣುವಂಥ ಶೀಲವನ್ನೂ ಧ್ಯಾನವನ್ನೂ ಪ್ರಜ್ಞೆಯನ್ನೂ ನಾವು ಇಂದು ಕಳೆದುಕೊಂಡಿದ್ದೇವೆ. ಹೀಗಾಗಿ ಆಹ್ಲಾದದ ತಂಪು ನಮ್ಮಿಂದ ದೂರವಾಗಿ, ನಮ್ಮ ಭಾವ ಬುದ್ಧಿಗಳಲ್ಲಿ ರಾಗ ದ್ವೇಷಗಳ ಉರಿಯೇ ನೆಲೆಯೂರಿದೆ.

ಲೋಕದಲ್ಲಿ ದುಃಖ ಇದೆ ಎನ್ನುವುದನ್ನು ಬುದ್ಧ ಸಾರಿ ಹೇಳಿದ. ಆದರೆ ಅವನು ಈ ದುಃಖದಿಂದ ಬಿಡುಗಡೆಯನ್ನು ಪಡೆಯುವ ದಾರಿಯನ್ನೂ ಲೋಕಕ್ಕೆ ತಿಳಿಸಿದ. ರೋಗವನ್ನೂ, ಅದಕ್ಕೆ ಔಷಧವನ್ನೂ ತಿಳಿಸಿದ ಮಹಾವೈದ್ಯ ಬುದ್ಧ. ನಮ್ಮ ರೋಗಗಳು ವಾಸಿಯಾಗಬೇಕಾದರೆ, ಮಂಗಳಮಯವಾದ ಬದುಕು ನಮ್ಮದಾಗಬೇಕಾದರೆ, ಬುದ್ಧನು ಉಪದೇಶಿಸಿದ ದಾರಿಯಲ್ಲಿ ನಡೆಯುವ ಸಮ್ಯಕ್ ಸಂಕಲ್ಪ ನಮ್ಮದಾಗಬೇಕು.

# ಆಡಳಿತ ಮಂಡಳಿ ಚುನಾವಣೆಗೆ ಪೂರ್ವ ತಯಾರಿ ಬಗ್ಗೆ ಮುಖ್ಯಕಾರ್ಯನಿರ್ವಾಹಕನ ಕರ್ತವ್ಯ ಹಾಗೂ ಜವಾಬ್ದಾರಿಗಳು

– ಶ್ರೀ ಜಿ.ಎಸ್. ಸೋಮಯಾಜಿ, ಪ್ರಧಾನ ವ್ಯವಸ್ಥಾಪಕ, ಶ್ರೀ ಗುರುನರಸಿಂಹ ವಿ.ಸೌ.ಸ.(ನಿ.), ಸಾಲಿಗ್ರಾಮ

ಸಹಕಾರ ಸಂಘಗಳು ಸದಸ್ಯರಿಂದ ಸದಸ್ಯರಿಗಾಗಿ ಸದಸ್ಯರಿಂದಲೇ ನಡೆಸಲ್ಪುವ ವ್ಯವಸ್ಥೆಯನ್ನು ಹೊಂದಿದೆ. ಎಲ್ಲಾ ಸದಸ್ಯರಿಂದ ಆಡಳಿತ ನಡೆಸಲ್ಪಡುವುದು ಕಷ್ಟಸಾಧ್ಯವಿರುವುದರಿಂದ ಪ್ರಜಾಪ್ರಭುತ್ವ ತಳಹದಿಯಲ್ಲಿ ಆಡಳಿತ ನಡೆಸಲ್ಪಡುತ್ತದೆ. ಒಬ್ಬ ಸದಸ್ಯನಿಗೆ ಒಂದೇ ಮತ. ಪ್ರಜಾಪ್ರಭುತ್ವ ತಳಹದಿಯ ಆಡಳಿತವೆಂದರೆ ಸದಸ್ಯರ ಪ್ರತಿನಿಧಿಗಳಿಂದ ಆಡಳಿತ.

ಕಲಂ 24(2)ರ ಪ್ರಕಾರ ಸಂಘದ ಆಡಳಿತ ಮಂಡಳಿಯ ಪದಾವದಿ ಐದು ವರ್ಷಗಳಾಗಿರುತ್ತದೆ. ಚುನಾವಣೆ ನಡೆದ ದಿನಾಂಕದಿಂದ 5 ವರ್ಷಗಳಾಗಿರುತ್ತದೆ. ಆದುದರಿಂದ ಅವಧಿಗೆ ಪೂರ್ವ ಚುನಾವಣೆ ನಡೆಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಅವಧಿಯೊಳಗೆ ಮಾಡದಿದ್ದಲ್ಲಿ ಆಡಳಿತ ಮಂಡಳಿ ಭರ್ಕಾಸ್ತು ಆಗಿ ವಿಶೇಷಾಧಿಕಾರಿಗಳ ನೇಮಕವಾಗಲಿದೆ. ಈ ರೀತಿ ಆದರೂ ಹಾಲಿ ಆಡಳಿತ ಸದಸ್ಯರು ಮರುಚುನಾವಣೆಗೆ ಅನರ್ಹತೆಗೆ ಒಳಗಾಗುತ್ತಾರೆ. ಅವಧಿಗೆ ಮುನ್ನ ಚುನಾವಣೆ ಮತ್ತು ಪದಾಧಿಕಾರಿಗಳ ಆಯ್ಕೆ ನಡೆದರೂ ಹಿಂದಿನ ಆಡಳಿತ ಮಂಡಳಿಯು ಅವಧಿ ಮುಗಿಯುವ ತನಕ ಅಧಿಕಾರದಲ್ಲಿರುತ್ತದೆ. (ಕಲಂ 28(3)) ಹಿಂದಿನ ಆಡಳಿತ ಮಂಡಳಿ ಪದಾವಧಿ ಮುಗಿದ ಕೂಡಲೇ ಚುನಾಯಿತ ಮಂಡಳಿ ಅಧಿಕಾರಕ್ಕೆ ಬರಲಿದೆ.

ಚುನಾವಣೆಯನ್ನು ಸೌಹಾರ್ದ ಸಹಕಾರ ಸಂಘಗಳ ನಿಯಮ 5ರಂತೆ ನಡೆಸಬೇಕಿರುತ್ತದೆ. ಚುನಾವಣೆಯು ಚುನಾವಣಾ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ನೇಮಕಗೊಂಡ ಚುನಾವಣಾಧಿಕಾರಿಗಳ ಮಾರ್ಗದರ್ಶನದಲ್ಲಿ ರಿಟರ್ನಿಂಗ್ ಅಧಿಕಾರಿಗಳು ನಡೆಸಲಿದ್ದಾರೆ. ಚುನಾವಣೆಗೆ ಪೂರ್ವ ತಯಾರಿ ಮತ್ತು ರಿಟರ್ನಿಂಗ್ ಅಧಿಕಾರಿಗೆ ಚುನಾವಣಾ ಪ್ರಕ್ರಿಯೆ ಬಗ್ಗೆ ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯ ಜವಾಬ್ದಾರಿಗಳು ಬಹಳಷ್ಟಿದೆ.

ಮುಖ್ಯ ಕಾರ್ಯನಿರ್ವಾಹಕನು ನಿಯಮ 5B ರಂತೆ ಈ ಕೆಳಗೆ ನಮೂದಿಸಿದ ಕೆಲಸ ಕಾರ್ಯಗಳನ್ನು ಬಹಳಷ್ಟು ಜಾಗೃತೆಯಿಂದ ನಿರ್ವಹಿಸಬೇಕಿರುತ್ತದೆ.

ಪ್ರಸ್ತುತ ಆಡಳಿತ ಮಂಡಳಿಯ ಪದಾವದಿ ಮುಗಿಯುವ 120 ದಿನಗಳ ಮೊದಲು ಚುನಾವಣೆ ನಡೆಸಿಕೊಡುವಂತೆ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ವರದಿ ಸಲ್ಲಿಸಬೇಕು. ಆಡಳಿತ ಮಂಡಳಿ ಚುನಾವಣೆ ನಡೆಸಲು ವಿಫಲವಾಗಿದ್ದಲ್ಲಿ ಮಂಡಳಿಯ ಅವಧಿಯ ಕೊನೆಯ ದಿನದಂದು ಪದಾವಧಿ ಮುಗಿದು ಮುಂದಿನ 5 ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ದಿಸುವರೆ ಅನರ್ಹತೆ ಹೊಂದುತ್ತಾರೆ. ಚುನಾವಣಾ ಪ್ರಾಧಿಕಾರಕ್ಕೆ ಚುನಾವಣೆ ನಡೆಸುವರೆ ದಾಖಲೆ, ಪುಸ್ತಕ, ಮಾಹಿತಿಗಳನ್ನು ಮತ್ತು ಮತದಾರರ ಪಟ್ಟಿ ತಯಾರಿಸುವುದರ ಅಗತ್ಯವುಳ್ಳ ಎಲ್ಲಾ ನೆರವು ನೀಡತಕ್ಕದ್ದು.

## ಸೌಹಾರ್ದ ಸಹಕಾರ ಸಂಘಗಳ ನಿಯಮ 1997ರ ನಿಯಮ 5(ಃ):–

ಚುನಾವಣಾಧಿಕಾರಿಯು ಮತದಾನದ ಹಕ್ಕು ಇಲ್ಲದ ಸದಸ್ಯರ ಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸುವರೆ ಕ್ರಮ ಜರಗಿಸತಕ್ಕದ್ದು.

1. ಸಂಘದ ಮುಖ್ಯ ಕಾರ್ಯನಿರ್ವಾಹಕರು 5 ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಅನುಮತಿ ಇಲ್ಲದೆ ಹಾಜರಾಗದವರ ಮತ್ತು ಐದು ಸಹಕಾರಿ ವರ್ಷಗಳ ಪೈಕಿ 2 ಸಹಕಾರಿ ವರ್ಷಗಳಲ್ಲಿ ಉಪವಿಧಿಯಲ್ಲಿ ನಿಗದಿ ಪಡಿಸಿದಂತೆ ಕನಿಷ್ಟ ವ್ಯವಹಾರ ಮಾಡದವರ ಪಟ್ಟಿ ತಯಾರಿಸಿ ಅವರಿಗೆ ಆಕ್ಷೇಪಣೆ ಇದ್ದರೆ ಸಲ್ಲಿಸುವಂತೆ ನೋಟೀಸನ್ನು ತಯಾರಿಸತಕ್ಕದ್ದು.
2. ಮುಖ್ಯ ಕಾರ್ಯನಿರ್ವಾಹಕನು ತಯಾರಿಸಿದ ಅಂತಹ ನೋಟೀಸುಗಳನ್ನು ಎಲ್ಲಾ ಅನರ್ಹ ಮತದಾರರುಗಳಿಗೆ 120 ದಿನಗಳಿಗೆ 15 ದಿನಗಳ ಪೂರ್ವ ನೋಂದಾಯಿತ ಅಂಚೆ ಮೂಲಕ ಕಳುಹಿಸಿ ಆಕ್ಷೇಪಗಳಿದ್ದಲ್ಲಿ ಚುನಾವಣಾಧಿಕಾರಿಗಳ ಮುಂದೆ ಹಾಜರಾಗಿ ಅಂತಹ ಆಕ್ಷೇಪಗಳನ್ನು ಹೇಳಿಕೊಳ್ಳುವರೆ ನೋಟೀಸಿನ ದಿನಾಂಕದಿಂದ 15 ದಿನಗಳ ಒಳಗೆ ತಿಳಿಸುವರೆ ಕಾಲಾವಕಾಶ ನೀಡತಕ್ಕದ್ದು.
3. ಮುಖ್ಯ ಕಾರ್ಯನಿರ್ವಾಹಕನು ಅಂತಹ ನೋಟೀಸು ದಿನಾಂಕದಿಂದ 30 ದಿನಗಳ ಒಳಗೆ ಅನರ್ಹ ಮತದಾರರ ಪಟ್ಟಿ, ಸದಸ್ಯರ ಆಕ್ಷೇಪಗಳು ಇದ್ದರೆ ಆಕ್ಷೇಪಣಾ ಪತ್ರ, ಮಹಾಸಭೆಗೆ ಹಾಜರಾಗದ ಬಗ್ಗೆ ಹಾಜರಾತಿ ಪುಸ್ತಕ ಮತ್ತು ಕನಿಷ್ಟ ವ್ಯವಹಾರ ಕೈಗೊಂಡ ಬಗ್ಗೆ ದಾಖಲೆಗಳು ಹಾಗೂ ನೋಟೀಸು ಜಾರಿಯಾದ ಬಗ್ಗೆ ದಾಖಲೆ (Postal acknowledgment) ಗಳನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
4. ಮುಖ್ಯ ಕಾರ್ಯನಿರ್ವಾಹಕನು ಅಂತಹ ನೋಟೀಸಿನಲ್ಲಿ ಪರಿಹಾರ ಕೋರುವರೆ ಚುನಾವಣಾಧಿಕಾರಿಗಳ ಮುಂದೆ ನೋಟೀಸಿನ ದಿನಾಂಕದಿಂದ 30ರಿಂದ 60 ದಿನಗಳ ಒಳಗೆ ಹಾಜರಾಗುವಂತೆ ಸೂಚಿಸುವುದು.
5. ಚುನಾವಣಾಧಿಕಾರಿಯು ಅನರ್ಹ ಮತದಾರರಿಂದ ಬಂದ ಆಕ್ಷೇಪಗಳನ್ನು ಸ್ವೀಕರಿಸಿದ 60 ದಿನಗಳ ಒಳಗೆ ಇತ್ಯರ್ಥಗೊಳಿಸತಕ್ಕದ್ದು.
6. ಅನರ್ಹ ಮತದಾರರ ಪಟ್ಟಿಯನ್ನು ಚುನಾವಣೆಗೆ ಸ್ಪಷ್ಟ 15 ದಿನಗಳ

ಮೊದಲು ಪ್ರಕಟಿಸತಕ್ಕದ್ದು.

7. ಚುನಾವಣಾಧಿಕಾರಿಯು ಮತದಾರರ ಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸುವರೆ ಕ್ರಮ ಕೈಗೊಳ್ಳತಕ್ಕದ್ದು.

- ಅರ್ಹ ಮತದಾರರ ಪಟ್ಟಿ, ಸುಸ್ತಿದಾರರ ಪಟ್ಟಿ, ಚುನಾವಣೆ ದಿನಾಂಕಕ್ಕೆ ಸುಸ್ತಿಯಾಗುವವರ ಪಟ್ಟಿ, ಚುನಾವಣಾ ದಿನಾಂಕಕ್ಕೆ 12 ತಿಂಗಳ ಮುನ್ನ ಸದಸ್ಯರಾದವರ ಪಟ್ಟಿ – ಚುನಾವಣೆಗೆ ಸ್ಪಷ್ಟ 50 ದಿನಗಳ ಮುನ್ನ ಪ್ರಕಟಿಸುವುದು
- ಸುಸ್ತಿದಾರರಿಂದ ಆಕ್ಷೇಪಗಳಿದ್ದಲ್ಲಿ ಸಲ್ಲಿಸುವರೆ ಮತ್ತು ಸುಸ್ತಿ ಮೊತ್ತ ಸಂದಾಯ ಮಾಡುವಂತೆ ಚುನಾವಣೆಗೆ ಸ್ಪಷ್ಟ 30 ದಿನಗಳ ಮೊದಲು ನೀಡುವುದು.
- ಸುಸ್ತಿ ಮೊತ್ತ ಪಾವತಿಸಿದ ಮತದಾರರ ಪಟ್ಟಿಯನ್ನು ಚುನಾವಣೆಗೆ ಸ್ಪಷ್ಟ 20 ದಿನಗಳ ಮೊದಲು ಪರಿಶೀಲಿಸುವುದು.
- ಮುಖ್ಯ ಕಾರ್ಯನಿರ್ವಾಹಕನು ಕರಡು ಮತದಾರರ ಪಟ್ಟಿ ಪರಿಶೀಲನೆ ಬಗ್ಗೆ ಸದಸ್ಯರ ಪ್ರವೇಶ ಪುಸ್ತಕ ಮತ್ತು ಸಂಬಂಧ ಪಟ್ಟ ಇತರ ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ಚುನಾವಣೆಗೆ 60 ದಿನಗಳ ಮೊದಲು ನೀಡುವುದು.

**ಕರಡು ಮತದಾರರ ಪಟ್ಟಿ:–**

ಮುಖ್ಯ ಕಾರ್ಯನಿರ್ವಾಹಕನು ಚುನಾವಣೆ ದಿನಾಂಕಕ್ಕೆ 60 ದಿನಗಳ ಮೊದಲು ಮತದಾರರ ಪಟ್ಟಿ ತಯಾರಿಸಲು ಈ ಕೆಳಗೆ ಹೇಳಿದ ಅಗತ್ಯ ಮಾಹಿತಿಗಳನ್ನು ನೀಡತಕ್ಕದ್ದು.

1. ಅರ್ಹ ಮತದಾರರ ಪಟ್ಟಿ
2. ಸುಸ್ತಿದಾರರ ಪಟ್ಟಿ
3. ಚುನಾವಣೆ ದಿನಾಂಕಕ್ಕೆ ಸುಸ್ತಿಯಾಗುವ ಸದಸ್ಯರ ಪಟ್ಟಿ
4. ಅನರ್ಹತೆಯ ಕಾರಣದಿಂದ ಮತದಾನದ ಹಕ್ಕನ್ನು ಹೊಂದಿರದ ಸದಸ್ಯರ ಪಟ್ಟಿ. ಅಂದರೆ ಕನಿಷ್ಠ ವ್ಯವಹಾರ ಮತ್ತು ಕನಿಷ್ಟ ಸಭೆಗಳಿಗೆ ಹಾಜರಾಗದವರು. ಅನರ್ಹತೆಗೆ ಕಾರಣ ನೀಡುವುದು.
5. ಚುನಾವಣಾ ದಿನಾಂಕಕ್ಕೆ 12 ತಿಂಗಳ ಪೂರ್ವ ಸದಸ್ಯರಾದವರ ಪಟ್ಟಿ

**ಈ ಮೇಲೆ ನಮೂದಿಸಿ ಪಟ್ಟಿಯು ಈ ಕೆಳಗಿನ ನಮೂನೆಯಲ್ಲಿ ಕಳುಹಿಸುವುದು**

| ಜ. ನಂ | ಸದಸ್ಯತ್ವ ಸಂಖ್ಯೆ | ಹೆಸರು | ವಿಳಾಸ | ಅನರ್ಹತೆಗೆ ಕಾರಣ |
|---|---|---|---|---|
| | | | | |
| | | | | |
| | | | | ಮುಖ್ಯ ಕಾರ್ಯನಿರ್ವಾಹಕ |

ಮೇಲಿನಂತೆ ಪ್ರಕಟಿಸುವುದರ ಮೂಲಕ ಸದಸ್ಯರಿಂದ ಆಕ್ಷೇಪಗಳನ್ನು ಸ್ವೀಕರಿಸುವುದು ಹಾಗೂ ಅದೇ ದಿನ ಸುಸ್ಥಿದಾರರಿಗೆ 30 ದಿನಗಳ ಒಳಗಾಗಿ ಸುಸ್ತಿ ಮೊತ್ತ ಸಂದಾಯ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕನು ನೋಟೀಸು ನೀಡುವುದು.

ಮುಖ್ಯ ಕಾರ್ಯನಿರ್ವಾಹಕರು ಚುನಾವಣೆಗೆ ಸ್ಪಷ್ಟ 15 ದಿನಗಳ ಮೊದಲು ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವುದು, ತಾತ್ಕಾಲಿಕ ಮತದಾರರ ಪಟ್ಟಿ, ಸುಸ್ತಿ ಮತದಾರರ ಪಟ್ಟಿ, ಹಾಗೂ ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಆಯಾಯ ಸಹಕಾರ ಸಂಘದ ನಾಮ ಫಲಕದಲ್ಲಿ, ಶಾಖಾ ಕಛೇರಿಗಳಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯ ನಾಮ ಫಲಕದಲ್ಲಿ ಪ್ರಕಟಿಸತಕ್ಕದ್ದು.

ಸಂಘದ ಚುನಾವಣಾಧಿಕಾರಿಯು ಸಹಕಾರ ಚುನಾವಣಾ ಪ್ರಾಧಿಕಾರದ ಅನುಮೋದನೆ ಪಡೆದ ನಂತರ ನಮೂನೆ XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಅಂಥಹ ಅಧಿಸೂಚನೆಯು ಚುನಾವಣಾ ವೇಳಾಪಟ್ಟಿಯನ್ನು ಒಳಗೊಂಡಿರಬೇಕು. ಚುನಾವಣಾಧಿಕಾರಿಯವರು ಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ XII ರಲ್ಲಿ ಸಾರ್ವಜನಿಕ ನೋಟೀಸನ್ನು ನೀಡಿ ಅದನ್ನು ತನ್ನ ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ಅವಶ್ಯವೆನಿಸುವ ಇತರ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು.

ರಿಟರ್ನಿಂಗ್ ಅಧಿಕಾರಿಯು ನಿರ್ದೇಶಕರ ಚುನಾವಣೆಯ ಉದ್ದೇಶಕ್ಕಾಗಿ ಚುನಾವಣಾ ವೇಳಾಪಟ್ಟಿಯನ್ನು ಚುನಾವಣೆ ದಿನಾಂಕದಿಂದ ಕನಿಷ್ಠ 15 ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು. ರಿಟರ್ನಿಂಗ್ ಅಧಿಕಾರಿಯ ಸಹಿಯಲ್ಲಿ ಚುನಾವಣಾ ನೋಟೀಸನ್ನು ಚುನಾವಣಾ ವೇಳಾಪಟ್ಟಿ ಸಹಿತ ಎಲ್ಲಾ ಅರ್ಹ ಮತದಾರ ಸದಸ್ಯರಿಗೆ ಈ ಕೆಳಗಿನ ರೀತಿಯಲ್ಲಿ ಕಳುಹಿಸತಕ್ಕದ್ದು.

1. ಸಾಮಾನ್ಯ ಅಂಚೆ ಮೂಲಕ
2. Email ಮೂಲಕ
3. ಸೂಕ್ತ ಸ್ವೀಕೃತಿಯೊಂದಿಗೆ ಸ್ಥಳೀಯವಾಗಿ ತಲುಪಿಸುವ ಮೂಲಕ
4. ಕಾರ್ಯಕ್ಷೇತ್ರದಲ್ಲಿ ಹೆಚ್ಚು ಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ.

ಚುನಾವಣಾ ವೇಳಾಪಟ್ಟಿ ಮತ್ತು ಚುನಾವಣಾ ನೋಟೀಸನ್ನು ಸಂಘದ ಮತ್ತು ಶಾಖೆಗಳ ಸೂಚನಾ ಫಲಕಗಳಲ್ಲಿ, ರಿಟರ್ನಿಂಗ್ ಅಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು.

ಸಂಘದ ಮುಖ್ಯ ಕಾರ್ಯನಿರ್ವಾಹಕನು ಚುನಾವಣೆ ಸಂಬಂಧ ರಿಟರ್ನಿಂಗ್ ಅಧಿಕಾರಿಯು ಅಪೇಕ್ಷಿಸುವ ಸೂಕ್ತವಾದ ಸಹಾಯ ಮತ್ತು ನೆರವನ್ನು ನೀಡತಕ್ಕದ್ದು.

**ನಾಮ ಪತ್ರ ಸಲ್ಲಿಕೆ:–**

ನಾಮಪತ್ರ ಸಲ್ಲಿಸುವುದಕ್ಕೆ ಗೊತ್ತುಪಡಿಸಿದ ದಿನದಂದು ಯಾ ಮುಂಚೆ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ನಮೂನೆ XIII ರಲ್ಲಿ ಪೂರ್ಣಗೊಳಿಸಿದ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 37
Licensed to post without Prepayment License No. PMG BG/WPP-384/2023-2025.



ಅಭ್ಯರ್ಥಿಯು ಮತ್ತು ಮತದಾನದ ಹಕ್ಕುಳ್ಳ ಇನ್ನೊಬ್ಬ ಸದಸ್ಯರನ್ನು ಸೂಚಕನಾಗಿ ಮುಕ್ತವಾಗಿ ಸಹಿಮಾಡಿರುವ ನಾಮಪತ್ರನ್ನು ಸಲ್ಲಿಸತಕ್ಕದ್ದು. ನಾಮಪತ್ರ ಸಲ್ಲಿಸುವ ಅಭ್ಯರ್ಥಿಯು ಯಾವ ಕ್ಷೇತ್ರದಿಂದ ಸ್ಪರ್ಧಿಸುವುದಕ್ಕೆ ಇಚ್ಛೆಪಟ್ಟಿರುವುದನ್ನು ನಮೂದಿಸಿ ಮತ್ತು ಆತನು ಸಹಿ ಮಾಡಿರುವ ಘೋಷಣಾ ಪತ್ರವನ್ನು ಸಲ್ಲಿಸಿರಬೇಕು. (ತಾನು ಯಾವ ವರ್ಗಕ್ಕೆ ಸೇರಿದವನೆಂಬ ಬಗ್ಗೆ ಘೋಷಣೆ) ಯಾವನೇ ಸದಸ್ಯನು ಒಂದು ಮತ ಕ್ಷೇತ್ರಕ್ಕಿಂತ ಹೆಚ್ಚಿನ ಮತ ಕ್ಷೇತ್ರಕ್ಕೆ ಅಭ್ಯರ್ಥಿಯಾಗತಕ್ಕದಲ್ಲ. ಮತ್ತು ಯಾವ ಸದಸ್ಯನೂ ಒಂದು ಮತ ಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಯನ್ನು ಸೂಚಿಸತಕ್ಕದ್ದಲ್ಲ.

ಆಡಳಿತ ಮಂಡಳಿ ಚುನಾವಣೆಗೆ ಯಾವುದೇ ಸ್ಥಾನವನ್ನು ಹಿಂದುಳಿದ ವರ್ಗಗಳಿಗೆ, ಪರಿಶಿಷ್ಟ ಜಾತಿ– ಪಂಗಡದವರಿಗೆ ಮೀಸಲಿಟ್ಟಿದ್ದರೆ ಅಂತಹ ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಯು ನಾಮಪತ್ರದ ಜೊತೆ ಅಂತಹ ವರ್ಗಕ್ಕೆ ಸೇರಿದವರು ಎಂಬ ಬಗ್ಗೆ ಸಮಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು.

ನಾಮಪತ್ರದೊಂದಿಗೆ ನಗದು, ಪೇ–ಆರ್ಡರ್, ಅಥವಾ ಡಿ.ಡಿ. ರೂಪದಲ್ಲಿ ಠೇವಣಿ ರಶೀದಿಯನ್ನು ಲಗತ್ತಿಸಿರಬೇಕು.

1. ಪ್ರಾಥಮಿಕ ಯಾ ಮಾದ್ಯಮಿಕ ಸಹಕಾರಿ ಸಂಘಕ್ಕೆ ರೂ. 2,000
2. ಫೆಡರಲ್ ಯಾ ಅಪೆಕ್ಸ್ ಸಂಘಕ್ಕೆ ರೂ. 5,000.00

ಮೀಸಲು ಕ್ಷೇತ್ರ ಮತ್ತು ಮಹಿಳಾ ಕ್ಷೇತ್ರಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ನಿಗದಿಪಡಿಸಿದ ಮೊತ್ತದ ಶೆ. 50ರಷ್ಟನ್ನು ಪಾವತಿಸಬೇಕು.

ಸಾಮಾನ್ಯ ಕ್ಷೇತ್ರಕ್ಕೆ ಸ್ಪರ್ಧಿಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗ ಅಥವಾ ಮಹಿಳೆಯಾಗಿದ್ದರೂ ಸಹ ಅಂಥವರು ನಿರ್ದಿಷ್ಟ ಪಡಿಸಿದ ಪೂರ್ಣ ಮೊತ್ತ ತೆರಬೇಕು. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ನಾಮಪತ್ರಗಳನ್ನು ಸಲ್ಲಿಸಿದಲ್ಲಿ ಮೇಲೆ ನಮೂದಿಸಿದ ಒಂದಕ್ಕಿಂತ ಹೆಚ್ಚು ಠೇವಣಿ ನೀಡಬೇಕಿಲ್ಲ.

ಅಭ್ಯರ್ಥಿಯು ನಾಮಪತ್ರ ಸಲ್ಲಿಸಿದ ನಂತರ ರಿಟರ್ನಿಂಗ್ ಅಧಿಕಾ–ರಿಯು ನಾಮಪತ್ರದಲ್ಲಿ ನಮೂದಿಸಿದ ಅಭ್ಯರ್ಥಿಯ ಮತ್ತು ಸೂಚಕನ ಹೆಸರು ಮತ್ತು ಮತದಾರರ ಪಟ್ಟಿಯ ಸಂಖ್ಯೆ ಮತ್ತು ಮತದಾರರ ಪಟ್ಟಿಯಲ್ಲಿ ಹೇಗೆ ನಮೂದಿಸಲಾಗಿದೆಯೊ ಹಾಗೆ ಇದೆ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳಬೇಕು.

ನಾಮಪತ್ರಗಳನ್ನು ಸ್ವೀಕರಿಸುವಾಗ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳ ಪರಿಶೀಲನೆಗೆ ನಿಗದಿ ಪಡಿಸಿದ ಸ್ಥಳ, ದಿನಾಂಕ, ಮತ್ತು ಸಮಯವನ್ನು ತಿಳಿಸತಕ್ಕದ್ದು. ಮತ್ತು ನಾಮಪತ್ರಗಳ ಮೇಲೆ ಅದರ ಕ್ರಮಸಂಖ್ಯೆ, ತಲುಪಿದ ದಿನಾಂಕ ಮತ್ತು ಸಮಯವನ್ನು ದಾಖಲಿಸಿ ಸಹಿ ಮಾಡತಕ್ಕದ್ದು. ಹಾಗೂ ಸ್ವೀಕರಿಸಿದ ಬಗ್ಗೆ ಅಭ್ಯರ್ಥಿಗೆ ಪಾವತಿ ನೀಡತಕ್ಕದ್ದು.

ನಾಮಪತ್ರ ಸ್ವೀಕರಿಸಲು ನಿಗದಿಪಡಿಸಿದ ಸಮಯ ಮುಕ್ತಾಯವಾದ ನಂತರ ರಿಟರ್ನಿಂಗ್ ಅಧಿಕಾರಿಯು ಸ್ವೀಕೃತವಾದ ನಾಮಪತ್ರಗಳ ಪಟ್ಟಿಯನ್ನು ಅದೇ ದಿನ ತಯಾರಿಸಿ ಸಂಘದ ಮತ್ತು ತನ್ನ ಕಛೇರಿಯ ಸೂಚನಾಪತ್ರದಲ್ಲಿ ಪ್ರಕಟಿಸತಕ್ಕದ್ದು.

**ನೆನಪಿರಲಿ**

ಚುನಾವಣೆಗೆ ಈ ಕೆಳಗೆ ನಮೂದಿಸಿದ ಪಟ್ಟಿಯ ತಯಾರಿಕೆ ಅತೀ ಅಗತ್ಯ, ಇದರಲ್ಲಿ ದೋಷ ಉಂಟಾದಲ್ಲಿ ಮುಖ್ಯ ಕಾರ್ಯ ನಿರ್ವಾಹಕನು ಹೊಣೆಗಾರನಾಗುತ್ತಾನೆ.

1. ಒಟ್ಟು ಸದಸ್ಯರ ಪಟ್ಟಿ
2. ಸುಸ್ತಿದಾರರು ಮತ್ತು ಚುನಾವಣೆ ದಿನಾಂಕಕ್ಕೆ ಸುಸ್ತಿಯಾಗುವವರ ಪಟ್ಟಿ
3. ಮತದಾನದ ಹಕ್ಕು ಇಲ್ಲದವರು. (5 ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಗೈರು ಹಾಜರಾದವರು ಮತ್ತು 5 ಸಹಕಾರಿ ವರ್ಷಗಳಲ್ಲಿ ಎರಡು ಸಹಕಾರಿ ವರ್ಷಗಳಲ್ಲಿ ಕನಿಷ್ಠ ವ್ಯವಹಾರ ಮಾಡದವರು)
4. ಚುನಾವಣೆ ದಿನಾಂಕಕ್ಕೆ 12 ತಿಂಗಳ ಮೊದಲು ಸದಸ್ಯರಾದವರ ಪಟ್ಟಿ
5. ಅರ್ಹ ಮತದಾರರ ಪಟ್ಟಿ.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
**ಕಲಬುರಗಿ ಪಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003